॥ ಶ್ರೀ ಮಲ್ಲಿಕಾರ್ಜುನ ಪ್ರಸನ್ನ ॥



ಶ್ರೀ ಬಸವ ಪುರಾಣ ಮಹೋತ್ಸವಾನುಮೋದನವು.

ಇದು

ಹಂಪ್ಲಿ ನಿವಾಸಿಗಳಾದ ಮಹಂತ ಮಠದ ಮಹಂತಸ್ವಾಮಿಗಳವರಿಂದ

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ

ವಿಚಾರಣೆಯ ಕಾಲದಲ್ಲಿ ಜರಿಗಿದ ಕೈಫಿಯತ್ತು ವಗೈರಾ ತರ್ಜುಮೆ.

(ಪ್ರಥಮ ಮುದ್ರಣ 1000 ಪ್ರತಿಗಳು.)

ಬಳ್ಳಾರಿ ಕಾರೊನೇಷನ್ ಮುದ್ರಾಲಯದಲ್ಲಿ
ಮುದ್ರಿಸಲ್ಪಟ್ಟಿದೆ.

1920.

109200

॥ ಶ್ರೀ ಬಸವಲಿಂಗಾಯನಮಃ ॥



ಬಳ್ಳಾರಿ ಡಿಸ್ಟ್ರಿಕ್ಟು ಮೇಜಸ್ಟ್ರೇಟು ಧೊರಿಗಳವರ ಸನ್ನಿಧಿಗೆ.

ಹೊಸಪೇಟೆ ತಾಲೂಕು ಕಂಪ್ಲಿ ಗ್ರಾಮದಲ್ಲಿರುವ ಈ ಕೆಳಗೆ ದಸ್ಕತು ಮಾಡಿರುವ ಬ್ರಾಹ್ಮಣ ಸಾಂಘಿಕ ಪ್ರತಿನಿಧಿಗಳು ಕ್ರಿ॥ ಪ್ರೊ॥ ಕೋ॥ 144 ಶಕ್ಷನ್ ಕೆಳಗೆ ದಾಖಲು ಮಾಡುವ ಅರ್ಜಿ.

1. ಕಂಪ್ಲಿ ಗ್ರಾಮದ ಲಿಂಗಾಯುತರು ಕಂಪ್ಲಿ ಕೋಟೆಯುಲ್ಲಿರುವ ಮಹಂತ ಸ್ವಾಮಿ ಮಠದಲ್ಲಿ ಪ್ರತಿದಿನ ಸಾಯಂಕಾಲ 6 ಘಂಟೆ ಲಾಗಾಯುತು 8 ಘಂಟೆ ವರಿಗೂ ಬ್ರಾಹ್ಮಣರನ್ನ ಅಪಮಾನಪಡಿಸಬೇಕೆಂತಲೂ, ಬ್ರಾಹ್ಮಣ ಮತ ವಾತ್ಸಲ್ಯ ಕೆಡಬೇಕೆಂಬ ಬುದ್ಧಿಪೂರ್ವಕ ಉದ್ದೇಶ್ಯದಿಂದಲು ಬಸವಪುರಾಣವನ್ನು ಹೇಳಿಸುತ್ತಾ ಇದ್ದಾರೆ. ಮಹಂತ ಮಠದ ಮಹಂತಸ್ವಾಮಿ ಪುರಾಣ ಪ್ರೋದಿಸುತ್ತಾರೆ. ಸಾಲಿ - ಶಿದ್ದಲಿಂಗಯ್ಯ ಪುರಾಣ ಪ್ರೋದುತ್ತಾನೆ. ಲಿಂಗಾಯುತರು, ... ರು, ಅಗಸಾಲರು, ಯಿತರ ಶೂದ್ರರು ಕೆಲತ ... ಅರ್ಥ ಹೇಳುತ್ತಾನೆ ಬಸವ ಪುರಾಣದಲ್ಲಿ ಅ ... ಉಂಟು. ಈ ಕೆಳಗೆ ಬರದಿರುವ ಪ್ರಮೇಯ ಗ ... ಪಂಡಕಡಿ ವಿಷ್ಣುವು

ಬ್ರಹ್ಮನ ಪೃಷ್ಟಭಾಗದಿಂದ ಹುಟ್ಟಿದನೆಂತಲೂ (ಕನ್ನಡ ಬುಕ್ಕು ಸಂಧಿ 54 ಪದ್ಯ 31) ಮತ್ತೊಂದಕಡೆ ಬಸವ ವ್ಯಾಸನ ಕೈಗಳು ತುಂಡಾಗಿ ಕಡದನೆಂತಲೂ, ಆತನ ಶಿರಚ್ಛೇದ ಮಾಡಿದನಂತಲೂ, (49-ನೇ ಪದ್ಯ) ಮೂರನೇಕಡೆ ಬ್ರಾಹ್ಮಣರು ಶಿವ ಭಕ್ತರ ಮನಿಯಕಾಯುವ ನಾಯಿಗಳೆಂತಲೂ (55-ನೇ ಸಂಧಿ 54 ಪದ್ಯ) ಹೇಳಿಯಿರುತ್ತದೆ. ಅದೇ ಸಂಧಿಯಲ್ಲಿ ನಾಯಿಗಳು ವೇದಗಳನ್ನು ಘೋಷಿಸುತ್ತವೆಂದು ಹೇಳಿ ಅದೆ. ಅದೇ ಸಂಧಿ ಕಡೇ ಪದ್ಯದಲ್ಲಿ ಬ್ರಾಹ್ಮಣರು ಚಂಡಾಲರ ಪಾದರಕ್ಷದಕಿಂತಲೂ ನೀಚರು ಯಂತ ಹೇಳುತ್ತದೆ. ಈ ಮೇಲ್ಕಂಡ ಪ್ರಮೇಯಗಳು ಬ್ರಾಹ್ಮಣರ ದೂಷಣವನ್ನು ಯೀ ಗ್ರಂಥದಲ್ಲಿ ನಿರೂಪಿಸಿ ಅವೆ. ಸಂಸ್ಕೃತ ಗ್ರಂಥದಲ್ಲಿ ಸಹಾ ಯಿದೇದೂಷಣ ಕಂಡು ಬರುವದು.

2 ಪುರಾಣ ಓದುವವನು, ವ್ಯಾಖ್ಯಾನಿಕನು ಗ್ರಂಥದ ದೂಷಣೆಗೆ ಹೆಚ್ಚಾಗಿ ತಾವು ಕಲ್ಪನಾಮಾಡಿ ಹೇಳುತ್ತಾರೆ. ಕಾರಣ ಈ ಪುರಾಣ ಕೇಳುವವರು ಬ್ರಾಹ್ಮಣರನ್ನ ಅಪಹಾಸ್ಯ ಮಾಡುತ್ತಾರೆ. ಯಿದರ ಫಲಿತಾರ್ಥವೇನಂದರೆ, ಘನತ ವಹಿಸಿದ ಶ್ರೀ ಚಕ್ರವರ್ತಿಗಳ ರಾಜಭಕ್ತಿವುಳ್ಳ ಪ್ರಜರಪೈಕಿ ಯರಡು ಮತಾಭಿಮಾನಿಗಳಿಗೆ ಭಿನ್ನಾಭಿಪ್ರಾಯ ಹೆಚ್ಚುಮಾಡಿ ವಿರೋಧವನ್ನು ವುಂಟುಮಾಡುವದೆ. ಕಡಿಯಿಂದ ಈಪುರಾಣ ನಡಿಯುವದರಿಂದ ಅಲ್ಪ ವಿದ್ಯಾವಂತರು, ಮತ್ತು ಸದಾಚಾರರು ಯಿವರ ಮತ ವಾತ್ಸಲ್ಯ ಅಣಗಿಸುವದು ಸಾಧ್ಯವಿಲ್ಲದೇ ಹೋಗಿ ಪ್ರಜಾಕ್ಷೇಮಕ್ಕೆ ಅಪಾಯಕರವಾದ ಅಲ್ಲರ, ಖೂನಿ ವಗೈರಾ ಕಠಿನ ತೊಂದರಿಗಳಿಗೆ ಕಾರಣ ವಾಗುತ್ತದೆ ಯಂತೆಂಮ ಅರ್ಜಿದಾರರು ವಿಜ್ಞಾಪಿಸಿಕೊಳ್ಳುತ್ತಾರೆ.

3. ಇದಲ್ಲದೆ ಲಿಂಗಾಯತರು ಯಿನ್ನ ಒಂದು ವಾರದ ವಳಗಾಗಿ ಬಸವ ಪುರಾಣದ ಮೆರವಣಿಗಿಯನ್ನು ಈ ಗ್ರಾಮದಲ್ಲಿ ನಡಿಸಲು ಯೇರ್ಪಾಟು ಮಾಡುವಹಾಗೆ ಸಂಬೆಕಿಯಾಗಿ ತಿಳಿಯುಬರುತ್ತದೆ. ಎಂದು ನಡಿಸುವದು ನಿಷ್ಕರ್ಷವಾಗಲಿಲ್ಲ. ಷುಮಾರು 20 ಸಾವಿರ ಮಂದಿ ಕಲ್ತು ಮೆರವಣಿಗಿ ನಡಿಸುವರೆಂತ ತೋರುತ್ತದೆ. ಕಾರಣ ಸದರಿ ಗ್ರಂಥವನ್ನು ಮೆರವಣಿಗಿಯಿಂದ ತೆಗದುಕೊಂಡು ಪದ್ಯಗಳು ಹೇಳುತ್ತಾ ಹೋಗುವದು ಗ್ರಾಮ ಪದ್ಧತಿಗೆ ವಿರೋಧವಾಗುತ್ತದೆ. ಕಡಿಯಿಂದ ವಾತ್ಸಲ್ಯಗಳು ಕೆಟ್ಟು ಅಲ್ಲರಿ, ಖೂನಿ ವಗೈರಾಗಳು ವಿಶೇಷವಾಗಿ ನಡಿಯಲಿಕ್ಕೆ ಕಾರಣಭೂತವಾಗುವದು.

4 ಷುಮಾರು 10 ವರುಷದ ಕೆಳಗೆ ಲಿಂಗಾಯತರು ಪೇಟಿಯಲ್ಲಿ ಬಸವ ಪುರಾಣವನ್ನು ಹೇಳಿಸುವದಕ್ಕೆ ಯತ್ನಪಟ್ಟರು. ಆ ಕಾಲದಲ್ಲಿ ಬ್ರಾಹ್ಮಣರು ಪೋಲೀಸು ಯಿನ್ಸ್ಪೆಕ್ಟರಾಗಿದ್ದ ಪ್ರಕೃತ ಶಿ|| ಐ|| ಡಿ|| ಯಲ್ಲಿರುವ ಅಬ್ದುಲ್ ಕರೀಂಸಾಹೇಬರಿಗೆ ಫಿರ್ಯಾಧಿ ಮಾಡಲು ಲಿಂಗಾಯತರು ಬಸವ ಪುರಾಣ ಪಬ್ಲಿಕ್ಕಾಗಿ

ಹೇಳಿಸುವದಿಲ್ಲವೆಂತಲೂ, ಮೆರವಣಿಗಿ ಮಾಡುವದಿಲ್ಲವೆಂತಲೂ ಒಪ್ಪಿದ್ದರು. ಆಗಿನ ಕಥಿ ಆ ರೀತಿ ಮುಗಿಯಿತು. ಪ್ರಕೃತದಲ್ಲಿ ಪೋಲೀಸಿನವರು ಅರ್ಜೀದಾರರಿಗೆ ಸಹಾಯಮಾಡಿ ಪ್ರಜಾ ಕ್ಷೇಮ ವುಂಟುಮಾಡುವ ರೀತಿ ತೋರಲಿಲ್ಲಾ.

5. ಕಾರಣ ಧೊರಿಗಳವರು ಖುದ್ದು ಈ ವಿಷಯದಲ್ಲಿ ವಿಚಾರ ನಡಸಿ ಬಸವ ಪುರಾಣ ಯೆಲ್ಲಿ ಹೇಳಿಸಕೂಡದೆಂತಲೂ, ಮೆರವಣಿಗಿ ಎಂದಿಗೂ ಆಗಬಾರದೆಂತಲೂ, ಕ್ರಿ॥ಪ್ರೊ॥ಕೋ॥ 144 ಶೆಕ್ಷನ್ ಅನುಸರಿಸಿ ಹುಕುಂ ಜಾರೀ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಇದಲ್ಲದೆ ಯಿದರಲ್ಲಿ ನಮೂದಿಸಿರುವ ಜನಗಳ ಮೇಲೆ ಇಂಡಿಯನ್ ಪಿನಲ್ ಕೋಡ್ದು 153 ಎ ಶೆಕ್ಷನ್ ಪ್ರಕಾರ ಚರ್ಯ ನಡಸೋಹಾಗೆ ಲೋಕಲ್ ಗವರ್ನಮೆಂಟಿನವರಿಗೆ ಶಿಫಾರಸ್ಸು ಮಾಡಬೇಕೆಂದು ಬೇಡುತ್ತಾರೆ. ಇದಲ್ಲದೆ ಬಸವಪುರಾಣದಲ್ಲಿ ಕೇವಲ ರಾಜಭಕ್ತಿವುಳ್ಳವರ ಅತಿದೂಷಣ ಪ್ರಮೇಯ ಭಾಗವನ್ನು ಕನ್ನಡದಲ್ಲಿ ಯಿರಲೀ, ಸಂಸ್ಕೃತದಲ್ಲಿ ಯಿರಲೀ ನಿಷೇಧಿಸಬೇಕೆಂದು ಪ್ರಾರ್ಥನೆ.

(Sd) B. Bheema Rao, Pleader for petitioners,
11-12-15.

(ಸಹಿ) ಜೋಯಿಸ ಬೋ॥ಶಾ॥ಶು, 1
,, ಡೂರ್ಕ ಗೋಪಾಲಾಚಾರ್ಯ. 2
,, ರಾಘವೇಂದ್ರಗೌಡು. 3
,, ವಿಡಪನಕಲ್ಲು ವೆಂಕೋಬಶಾಸ್ತ್ರಿ. 4
,, ಕಾರ್ಲಹಳ್ಳಿ ಹುಚ್ಚಾಚಾರು. 5
,, Padmanabi Narasimhachar. 6
,, ಕಾ॥ ಗುರುವೇಂಕಟಚಾರಿ. 7
,, ಬಿಗ್ನಾವಿ ವೇದಾಂದ್ರಾಚಾರು. 8
,, ಕಾರ್ಡಿಗಿ ಶ್ರೀನಿವಾಸಾಚಾರು. 9
,, B. Bheema Rao. 10
,, ಮಠದ ಗುರುರಾಯಾಚಾರು. 11
,, ವರದ ಗುರಾಯಾಚಾರು. 12
,, ಬಿಗ್ನಾವಿ ಹನುಮಂತಾಚಾರು. 13
,, ಕೊಂಬಿ ಪ್ರೊಂಪಾಪತಿ ಶಾಸ್ತ್ರಿ. 14
,, ರಾಯಿಬಿ ಪೂರ್ಣಾಚಾರು. 15
,, P. Raghavendra Rao. 16
,, ಹರ್ಪನಹಳ್ಳಿ ಗೋಪಾಲಾಚಾರು. 17

" ಕ॥ ರಾಮಾಶಾಸ್ತ್ರಿ. 18

" ಬೋಳಿಬಿಂದು ಮಾಧವಾಚಾರು 19

" ವಿಶ್ವಾಮಿತ್ರ ನರಸಿಂಹಾಚಾರು. 20

" S. R. Kakubal. 21

" In Sanskrit. 22

" In Maharati. 23

" ಕಂಪ್ಲಿ ಜೋಯಿಸ ಶೇಷಗಿರಿ ಆಚಾರು. 24

" ಬಳ್ಳಾರಿ ರಾಮಾಚಾರ್ಯ. 25

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಅರ್ಜಿದಾರರ ಪರ 1-ನೇ ಸಾಕ್ಷಿಯ ಕೈಫಿಯತ್ತು.

ಹೆಸರು:— ಆರ್. ಶ್ರೀನಿವಾಸರಾವು, ತಂದೆಯ ಹೆಸರು ವೆಂಕಣ್ಣ, ಗ್ರಾಮ ರಾಮಸಾಗರ, ವೃತ್ತಿ ಡಿ॥ ಬೋ॥ ಮೆಂಬರು - ಭೂಸ್ವಾಮಿ, ಮತ ಬ್ರಾಹ್ಮಣ, ಕುಲ ಹಿಂದು, ವಯಸ್ಸು 36.

ತಾ॥ 3-1-1916.

3-1-16-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟು ಪ್ರಕಾರ ಪ್ರಮಾಣ ಪೂರ್ವಕವಾಗಿ ಕೊಟ್ಟ ಕೈಫಿಯತು.

ನಾನು ರು. 1200 ಸರ್ಕಾರು ಹಣ ಕೊಡುತ್ತೇನೆ. ಕಂಪ್ಲಿ ರಾಮಸಾಗರ ಗಳಲ್ಲಿ ನನಗೆ ಮನಿಗಳುಂಟು. 36 ವರುಷಗಳ ಲಾಗಾಯಿತು ಅಲ್ಲಿ ನಾನು ಕಾಪುರ ಮಾಡುತ್ತೇನೆ. ಕಂಪ್ಲಿ ಗ್ರಾಮದಲ್ಲಿ ಬಸವ ಪುರಾಣದ ಮೆರವಣಿ ಉತ್ಸವವನ್ನು ನಾನು ಎಂದು ನೋಡಿಲ್ಲ. ಕಂಪ್ಲಿ ಗ್ರಾಮದಲ್ಲಿ ತೋಟದ ದೇವರ ಮಠದೊಳಗೆ 10 ವರುಷದ ಕೆಳಗೆ ಬಸವ ಪುರಾಣ ಪ್ರೋದಿ ಹೇಳಬೇಕೆಂಬುವ ಸಂಭವ ಬಂದಿತ್ತು. ಬ್ರಾಹ್ಮಣರಾದ ನಾವು ಆಕ್ಷೇಪಣೆಮಾಡಿ ಜಿಲ್ಲಾ ಪೋಲೀಸು ಸೂಪರಿಂಟೆಂಡಂಟಿಗೂ ಡಿ॥ ಮೇಜಿಸ್ಟ್ರೇಟಿಗೂ ಅರ್ಜಿಕೊಟ್ಟು ಯಿದ್ದೆವು. ಹಾಲಿ ಮದ್ರಾಸಿನಲ್ಲಿ ಶಿ॥ ಐ॥ ಡಿ॥ ಡಿಪಾರ್ಟ್ಮೆಂಟಿನಲ್ಲಿರುವ ಅಬ್ದುಲ್ ಕರೀಂಸಾಹೇಬರವರಿಗೆ ಅದು ಕಳುಹಿಸಲ್ಪಟ್ಟಿತು. ಅವರು ಮೆರವಣಿಯನ್ನು ನಿಂದ್ರಿಸಿದರು. ಅವರು ಬರುವದ ರೊಳಗೆ ಬಸವ ಪುರಾಣ ಪ್ರೋದುವದು ಮುಗದಿತ್ತು. ಅಂದಿನಿಂದ ಬಸವ ಪುರಾಣವು ಪ್ರೋದುವದಾಗಲಿ, ವುತ್ಸವವಾಗಲಿ ಜರಗಲಿಲ್ಲ. ಹತ್ತು ವರುಷಕ್ಕಿಂತ ಮುಂಚಿತ ವಾಗಿ ಬಸವ ಪುರಾಣ ಪ್ರೋದುವದು ಯಾವ ಬಹಿರಂಗವಾದ ವ ತಗಳಲ್ಲಿ ಜರಗಲಿಲ್ಲ. ಕೋಟೆಯೊಳಗಿರುವ ಮಹಂತಸ್ವಾಮಿ ಮಠದೊಳಗೆ ಒಂದು ಬಸವ ಪುರಾಣ ಪ್ರೋದ ಲ್ಪಟ್ಟಿತು.

ಮಹಂತಸ್ವಾಮಿಗಳವರು ಅಲ್ಲೇ ವಾಸಮಾಡುತ್ತಾರೆ. ಅಲ್ಲಿ ಕನ್ನಡ ಸಾಲಿ ಯಾವದು ಯಿಲ್ಲ. ಅಲ್ಲಿ ಯಾವ ದೇವರು ಯಿಲ್ಲ. ಸ್ವಾಮಿಗಳು ತಮ್ಮ ದೇವರನ್ನೇ ಪೂಜಿಸುತ್ತಾರೆ. ಮಠದೊಳಗೆ ಮತ್ತು ಯಾವಕಾರ್ಯವು ಜರುಗುವದಿಲ್ಲ. ಮಠ ಬಹಳ ದೊಡ್ಡದು. ಯಾವ ಮತಸ್ಥರೇ ಅಗಲಿ ಮಠದೊಳಗೆ ಹೋಗಬಹುದು. ಮಹಂತಸ್ವಾಮಿಗಳವರಿಗೆ ಪ್ರತ್ಯೇಕ ಕೋಣೆಗಳು ಕೆಲವು ಉಂಟು. ಆ ಕೋಣೆಗಳನ್ನು ನಾನು ನೋಡಿಲ್ಲ. ಸಭೆ ಕಲಿಯುವ ಚಾವಡಿ ಮಾತ್ರ ನಾನು ನೋಡೀನಿ. ನಾನು ಕಂಪ್ಲಿಯಲ್ಲಿ ಕರಣಂ ಕೆಲಸವನ್ನು ಆಗ್ಯಾಗ್ಗೆ ನೋಡುತಿದ್ದೆನು. ಆ ಗ್ರಾಮದ ಜನ ಸಂಖ್ಯ 9000. ಲಿಂಗಾಯತರು 1500, ಬ್ರಾಹ್ಮಣರು 200, ಬ್ರಾಹ್ಮಣರ ವಿಧಿಗಳಿಗೆ ಅನುಸರಿಸತಕ್ಕ ವೈಶ್ಯರು - ಕ್ಷತ್ರಿಯರು 5000, ನೆಪ್ವಾರು 2000, ವೇಶ್ಯಜನರು 350, ಮಿಕ್ಕವರು ಸುಮಾರು 600 – 700, ಬ್ಯಾಡರು ಸುಮಾರು 2000. ಲಿಂಗಾಯತ ಮತವನ್ನು ಅನುಸರಿಸುವರರು ಯಷ್ಟುಜನರೋ ನನಗೆ ತಿಳಿಯದು. ಸುಮಾರು 3000 ಮಹಮ್ಮದೀಯ ಜನರು ಯಿರಬಹುದು. ಸುಮಾರು 1500 ಮಾದಿಗರು ಯಿರಬಹುದು. ಮೂರು ತಿಂಗಳ ಲಾಗಾಯಿತು ಬಸವ ಪುರಾಣ ಓದಲ್ಪಟ್ಟಿತು. ಬ್ರಾಹ್ಮಣರ ವಿಧಿಗೆ ಅನುರಿಸತಕ್ಕ ಬ್ರಾಹ್ಮಣೇತರರು ಆ ಮಠಕ್ಕೆ ಹೋಗುವದಿಲ್ಲ. ಈಗ ಪ್ರೋದುವ ಬಸವ ಪುರಾಣದ ಪ್ರತಿ ಒಂದು ನನ್ನಲ್ಲಿ ಯಿದೆ, (ಯಗ್ಜಿಬಿಟ್ಟು ಪಿ ಬಿ.) ಯಗ್ಜಿಬಿಟ್ಟು ಪಿ. ಸಂಸ್ಕೃತ ಭಾಷದಲ್ಲಿಯೂ, ಯಗ್ಜಿಬಿಟ್ಟು ಬಿ. ಕನ್ನಡಭಾಷೆಯಲ್ಲಿಯು ಅವೆ. ಮ॥ ರಾ॥ ರಾ॥ ಕೋಲಾಚಲಂ - ವೆಂಕಟರಾಯರ ಗುಮಾಸ್ತನು ನನ್ನ ಸಮಕ್ಷಮ ಅರ್ಜಿಯನ್ನು ತರ್ಜುಮೆ ಮಾಡಿದನು. ಆ ಅರ್ಜಿಯ ತರ್ಜಿಮೆ ಯಗ್ಜಬಿಟ್ಟು ಶಿ. ಶಿ. 1. ಮೆರವಣಿ ನಡದರೆ ಗದ್ದಲವು ಮತ್ತು ಬಡಿದಾಟವು ಆಗುತ್ತದೆ. ಮಾರಾಮಾರಿಕೂಡ ಅಗಬಹುದು. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಲಿಂಗಾಯತರ ಸಂಗಡ ಝಗಳ ಮಾಡಬಹುದು. ಲಿಂಗಾಯತರು ಯೇನು ಯಿಲ್ಲ ಯೆಂತ ಹೇಳಿದರು. ಉತ್ಸವಕಾಲದಲ್ಲಿ ಝಗಳ ನಡಿಯಬಹುದು. ಒಂದು ವೇಳೆ ಪುಸ್ತಕವನ್ನು ಮೆರವಣಿ ಮಾಡಿದಾಗ್ಯೂ ಝಗಳ ನಡಿಯಬಹುದು. ಈ ಪುರಾಣ ಓದುವದಕ್ಕಿಂತ ಮುಂಚಿತವಾಗಿ ನಮ್ಮಗೂ, ಲಿಂಗಾಯತರಿಗೂ ಯಾವ ವಿಧವಾದ ಮನಸ್ತಾಪವು ಯಿದ್ದಿಲ್ಲ. ಶಾಸ್ತ್ರಿಗಳು (ಶಿ. ಪಿ. 2.) ಕಂಪ್ಲಿ ಗ್ರಾಮದವರಲ್ಲ. 3 ತಿಂಗಳ ಲಾಗಾಯಿತು ಅವರು ಕಂಪ್ಲಿಯಲ್ಲಿ ವಾಸಮಾಡುತಿದ್ದಾರೆ. ಹತ್ತು ಹನ್ನೆರಡು ವರುಷದ ಲಾಗಾಯಿತು ಬಸವ ಪುರಾಣದಲ್ಲಿ ನನಗೆ ಸ್ವಲ್ಪ ಪರಿಶ್ರಮ ವುಂಟು. ನಾನು ಅದನ್ನ ಒಂದೆರಡು ಸಾರಿ ಪ್ರೋದಿರುವೆನು. ಇತರ ಬ್ರಾಹ್ಮಣರು ಕೂಡ ಪ್ರೋದಿದ್ದಾರೆ. ಬಸವ ಪುರಾಣದ ಪ್ರತಿಗಳು ಯೆಲ್ಲಿಯಾದರು ತರಬಹುದು. ಕಂಪ್ಲಿಯಲ್ಲಿ ಹತ್ತು ವರುಷದಕ್ಕಿಂತ ಮುಂಚಿತವಾಗಿ ಯಾವ ಸ್ಥಳದಲ್ಲೇ ಅಗಲಿ ಯಾವಾಗೇ ಆಗಲಿ ಬಸವ ಪುರಾಣವು ಓದಲ್ಪಟ್ಟಿಲ್ಲ. ಈ ಜಿಲ್ಲಾಕ್ಕೆ ಸೇರಿದ ಯಲ್ಲಾ ತಾಲೂಕುಗಳ ಪರಿಚಯ ನನಗುಂಟು; ಬಸವ ಪುರಾಣವು ಓದುವದರಿಂದ ತಗುಲುವ ಖರ್ಚಿನ ಬಗ್ಯೆ ನನಗೆ ತಿಳಿಯದು. ಬಳ್ಳಾರಿವಳಗೆ ಶಿದ್ದಾರಡ್ಡಿ

ನನಗೆ ಪರಿಚಯು. ಕಂಪ್ಲಿಗೆ ನಾಲ್ಕು ಮೈಲು ಧೂರದಲ್ಲಿರುವ ಯುಮ್ಮಿಗನೂರು
ಬಳ್ಳಾರಿಗೆ 15 ಮೈಲು. ಮತ್ತು ಕಂಪ್ಲಿ ಮುದ್ದಾಪುರ ಗ್ರಾಮಗಳು ನನಗೆ ಗೊತ್ತು
ತಾಳೂರು, ಗಾಡಿಗನೂರು ಕೂಡ ನನಗೆ ಗೊತ್ತು. ಈ ಯಾವ ಗ್ರಾಮಗಳಲ್ಲಿ ಬಸವ
ಪುರಾಣದ ಮೆರವಣಿ ಜರಗಲಿಲ್ಲ. ಈ ಗ್ರಾಮಗಳಲ್ಲಿ ಬಸವ ಪುರಾಣವನ್ನು ಯಾರಾ
ದರು ಪ್ರೇದಿರ ಬಹುದು. ಹೊಸಪೇಟೆಯಲ್ಲಿ ಬಹಿರಂಗವಾಗಿ ಪುರಾಣವು ಪ್ರೇದಿದ್ದೇ
ಆಗಲಿ ಅಥವಾ ಮೆರವಣಿ ಆಗಲಿ ಜರಿಗಿದಂತೆ ನನ್ನಗೆ ತಿಳಿಯದು. ಕಂಪ್ಲಿಕ್ಕಿಂತಲೂ
ಬಳ್ಳಾರಿ ಹೊಸಪೇಟೆಯಲ್ಲಿ ಬ್ರಾಹ್ಮಣ ಜನರು ಜಾಸ್ತಿ ಯಿದ್ದಾರೆ ಕಂಪ್ಲಿಯಲ್ಲಿ ಜರಿಗಿದ
ಬಸವ ಪುರಾಣಕ್ಕೆ ನಾನು ಯೆಂದು ಹೋಗಲಿಲ್ಲ. ಬ್ರಾಹ್ಮಣರು ಮತ್ತು ಯಜ್ಞೋ
ಪವಿತ್ರವನ್ನು ಧರಿಸಿದ ಯಿತರರು ಯಾರೇ ಆಗಲಿ ಬಸವ ಪುರಾಣವನ್ನು ಕೇಳಲಿಕ್ಕೆ
ಹೋಗುವದಿಲ್ಲ. ಅರ್ಜಿಯಲ್ಲಿ ದಸ್ಕತು ಮಾಡಿದವರೆಲ್ಲರು ಬ್ರಾಹ್ಮಣರೇ. ಬ್ರಾಹ್ಮಣ
ರೆದಿರಿಗೆ ಓದಿದ ಯಗ್ಜಿಬಿಟ್ಟು ಶಿ. ಶಿ. 1 ಯಲ್ಲಿರುವ ಅಂಶಗಳನ್ನು ನಾನು ಕೇಳ
ಲಿಲ್ಲ. ಸ್ವಾಮಿಗಳವರು ಆಕ್ಷೇಪಣೆ ಮಾಡಿದರೆ ನಾವು ಮಠದೊಳಗೆ ಹೋಗುವದಿಲ್ಲ.
ಈ ಮಠದ ಸ್ವಾಮಿಗಳವರನ್ನು ನಾವು ಸನ್ಮಾನಿಸುವದಿಲ್ಲ. ಅವರನ್ನು ನಾವು ಪೂಜಿ
ಸುವದಿಲ್ಲ. ಮಠದೊಳಗೆ ನಾವು ಯಾವ ವಿಧವಾದ ಕಾರ್ಯಗಳನ್ನು ಮಾಡುವದಿಲ್ಲ.

ಶಿವಭಕ್ತರಲ್ಲದೆ ಯಿತರರ ಯೆದಿರಿಗೆ ಯಾರು ಬಸವ ಪುರಾಣವನ್ನು ಓದಕೂಡ
ದೆಂದು ಲಿಂಗಾಯತರ ಶಾಸ್ತ್ರಗಳು ನಿಷೇಧಿಸುವ ವಿಷಯವು ನನಗೆ ತಿಳಿಯದು.

ವ್ಯಾಸ ಮಹಾಋಷಿಗಳ ಗ್ರಂಥಗಳನ್ನು ನಾವು ಸನ್ಮಾನಿಸುತ್ತೇವೆ. ಅವರ
ಗ್ರಂಥಗಳು ಪ್ರಮಾಣೀಕ ಗ್ರಂಥಗಳೆಂದು ಹೇಳುವಷ್ಟು ನಾನು ಶಕ್ತನಲ್ಲ. ಅವರ
ಪುರಾಣಗಳನ್ನು ನಾನು ಓದಿಲ್ಲ. ವ್ಯಾಸನ ತೋಳು ಕಡಿದು ಹಾಕಿದ ವಿಷಯವು (ಶಿ ii)
ವ್ಯಾಸ ಮಹಾಋಷಿಯ ಪುರಾಣದಲ್ಲಿದ್ದರೆ ಆ ಭಾಗವು ನನಗೆ ಅರ್ಥವಾಗದು. ಬುದ್ಧಿ
ವಂತರಿಗೆ ತಿಳಿಯ ಬಹುದು. (ಶಿ. ಎ) ಬೇರೇ ಯಾವ ಸಂಸ್ಕೃತ ಪುರಾಣ
ದಲ್ಲಿರುವದೋ ನನಗೆ ತಿಳಿಯದು. ಈ ಭಾಗವು (ಶಿ. ಡಿ.) ಯಿರತಕ್ಕ
ಅಧ್ಯಾಯವನ್ನು ನಾನು ಓದಿಲ್ಲ. ಈ ವಿಷಯವು (ಶಿ. ಶಿ.) ಯಾವದು ನನಗೆ
ಗೊತ್ತಿಲ್ಲ. ಮಹಾ ಭಾರತ, ರಾಮಾಯಣ ಪಾವನವಾದ ಗ್ರಂಥಗಳು. ನಮ್ಮಗಳ
ದೇವಾಲಯದಲ್ಲಿ ಪಠಿಸಿದರೆ ನಮಗೆ ಮೋಕ್ಷಸಾಧನೆ. ಅಪುರೂಪವಾಗಿ ಆ ಗ್ರಂಥ
ಗಳನ್ನು ಓದುವದು. ಅಂಥಾ ಗ್ರಂಥಗಳನ್ನು 5-6 ಸಾರಿ ದೇವಾಲಯದಲ್ಲಿ ಓದಿದ್ದು
ಕೇಳೀನಿ. ರಾಮಾಯಣ ಪುರಾಣವು ಮುಗಿಸುವದಕ್ಕೆ 2 ತಿಂಗಳು ಬೇಕಾಗುತ್ತದೆ.
ಹತ್ತು ವರುಷಕ್ಕೆ ಮುಂಚೆ ಯಿ ಬಸವ ಪುರಾಣವನ್ನು ಯೆಷ್ಟು ದಿವಸದಲ್ಲಿ ಮುಗಿ
ಸಿದ್ದು ನಾನು ಹೇಳಲಾರೆ. ಆಗ್ಗೆ ಆ ಉತ್ಸವವನ್ನು ನಿಂದ್ರಿಸಿದ ವಿಷಯವಾಗಿ ನನ್ನಲ್ಲಿ
ಯಾವ ದಾಖಲೆಯು ಯಿಲ್ಲ. ಅವಶ್ಯಕತೆ ಯಿದ್ದಲ್ಲಿ ನಾವೆಲ್ಲರು ಬಲತ್ಕಾರದಿಂದಲೂ
ಪ್ರಯತ್ನ ಪೂರ್ವಕದಿಂದಲೂ ಮೆರವಣಿ ನಿಂದ್ರಿಸುತ್ತೇವೇ. ಪರ ಮತಸ್ಥರು ಯಾರು
ಮೆರವಣಿಗೆಯನ್ನು ನಿಂದ್ರಿಸುತ್ತೇವೆ ಯೆಂದು ಹೇಳಲಿಲ್ಲ.

ಅಡ್ಡ ಸವಾಲು :—

ಕಂಪ್ಲಿಯಲ್ಲಿ ಮಹಾ ಭಾರತ, ರಾಮಾಯಣ ಪುಸ್ತಕಗಳ ಮೆರವಣಿ ಬಜಾರ ಗಳಲ್ಲಿ ಯೆಂದಿಗೂ ಜರಗಿಲ್ಲ. ರಾಮಾಯಣ ಮಹಾ ಭಾರತಗಳಲ್ಲಿ ಯಾವ ವಿಧವಾದ ಅಶ್ರಾವ್ಯವಾಕ್ಯಗಳಿದ್ದಂತೆ ನಾನು ಕೇಳಿಯಿಲ್ಲ.

(ಸಹಿ) ಆರ್. ಶ್ರೀನಿವಾಸರಾವು.

ಕೋರ್ಟಿನಲ್ಲಿ ನಾನು ಹೇಳಿದ ಪ್ರಕಾರ ಬರೆದಿದ್ದನ್ನು ನಾನು ಓದಿಕೊಂಡು ಸರಿ ಯೆಂದು ಒಪ್ಪಿಕೊಂಡು ಯಿದ್ದೇನು.

(ಸಹಿ) ಡಿ. ಜಿ. ಪ್ಲಿನ್ಸ್,
ಜಾಯಿಂಟು ಮೇಜಿಸ್ಟ್ರೇಟು.

ಪುನರ್ವಿಚಾರಣೆ :— 26-4-1916.

ನಾನು ರಾಜೀನಾಮೆ ದಸ್ಕತು ಮಾಡಿದ್ದೇನು (ಯಗ್ಜಿಬಿಟ್ಟ 3.) ಬಸವ ಪುರಾಣದ ಮೆರವಣಿಯನ್ನು ಮಾಡುವದಕ್ಕೆ ಆಕ್ಷೇಪಿಸಿದ ಅರ್ಜಿಯನ್ನು ವಾಪಸು ತೆಗದುಕೊಂಡು ಯಿದ್ದೇನು. 8-4-16 ನಾನು ವೆಂಕೋಬರಾವು ಉಭಯರು ಕಲತು ಅಚ್ಚಪ್ಪ ಸ್ವಾಮಪ್ಪ ಅವರ ಸಂಗಡ ಮಾತನಾಡಿ ಮೆರವಣಿಗಾಗಿ ಆಕ್ಷೇಪಿಸಿದ ವಿಷಯವನ್ನು ರದ್ದ ಮಾಡಿದೆ. ಪದ್ಧತಿ ಪ್ರಕಾರ ಉತ್ಸವವನ್ನು ಹೊರಡಿಸಿ ಬ್ರಾಹ್ಮಣರನ್ನು ಯಾವ ವಿಧವಾದ ದೂಷಣೆಮಾಡದ ಪಕ್ಷದಲ್ಲಿ ಕೋಟೆವಳಗೆ ಯಿರುವ ವೀರಭದ್ರಸ್ವಾಮಿ ದೇವಾಲಯದವರಿಗೂ ಮಠದಿಂದ ಉತ್ಸವವನ್ನು ಹೊರಡಿಸಬಹುದೆಂದು ನಾನು ಹೇಳಿದೆ. ಅಚ್ಚಪ್ಪ ಸ್ವಾಮಪ್ಪ ಯಿದಕ್ಕೆ ಒಪ್ಪಿದನು. 19-ನೇ ತಾರೀಖಿನ ವಳಗಾಗಿ ಯಿತರ ಬ್ರಾಹ್ಮಣರನ್ನು ಕೂಡ ಅರ್ಜಿಯನ್ನು ವಾಪಸು ತೆಗದುಕೊಳ್ಳುವಂತೆ ಹೇಳಲು ಪ್ರಯತ್ನಿಸುತ್ತೇನೆ ಯೆಂದು ಹೇಳಿದೆನು. ಈಗ ಆ ಬ್ರಾಹ್ಮಣರು ಯಾರು ಒಪ್ಪದೆ ನನಗೆ ಪ್ರತಿ ಕಕ್ಷಿಯಾಗಿರುವರು. ಜಾಯಿಂಟು ಮೇಜಿಸ್ಟ್ರೇಟರವರು ಮೆರವಣಿ ಹೊರಡಿಸುವದಕ್ಕೆ ಉತ್ತರವು ಕೊಟ್ಟಲ್ಲಿ ನನ್ನ ಸ್ವಂತಕ್ಕೆ ಯಾವ ಆಕ್ಷೇಪಣೆಯು ಯಿಲ್ಲ.

ಅರ್ಜಿದಾರರ ವಕೀಲರ ಅಧ್ವ ಸವಾಲು :—

ಮಠಕ್ಕೂ ಗುಡಿಗೂ 50, 60 ಗಜಗಳ ಧೂರ ಫ್ರುಂಟು. ಅವು ಯೆರಡು ಕೋಟೆವಳಗಿವೆ, ಲಿಂಗಾಯಿತರ ಮನಿಗಳು ವಿನಹ ಮತ್ತು ಯಾರ ಮನಿಗಳು ಮಠಕ್ಕು ಗುಡಿಗೂ ಮಧ್ಯ ಯಿಲ್ಲ. ನಾನು ರಾಮುಸಾಗರದ ಕಾಪುರಸ್ಥನು.

ಯಗ್ಜಿಬಿಟ್ಟು 3 ಬರಿಯುವದಕ್ಕಿಂತ ಮುಂಚಿತ ಯಿತರ ಬ್ರಾಹ್ಮಣರ ಸಲಹಗಳನ್ನು ನಾನು ಕೇಳಲಿಲ್ಲ. ಅರ್ಜಿವಳಗೆ ನಾನು ದಸ್ಕತು ಮಾಡಲಿಲ್ಲ. ಅರ್ಜೀದಾರರ ವ್ಯಾಜ್ಯವು ನಡಿಸುವದಕ್ಕಾಗಿ ಹಣ ವಸೂಲು ಮಾಡಿದ ಯಗ್ಜಿಬಿಟ್ಟು ಡಿ. ಯನ್ನುವ ಚಂದಾಪಟ್ಟಿಯಲ್ಲಿರುವ ಅಕ್ಷರಗಳು ನನ್ನವೆ. ನನ್ನ ಮಗನಿಗೂ, ನನ್ನ ಅಣ್ಣನ ಹೆಂಡತಿಗೂ ಜರಿಗಿದ ವಿವಾದ ವಿಷಯದಲ್ಲಿ ಅಚ್ಚಪ್ಪ ಸ್ವಾಮಪ್ಪ ಪಂಚಾಯಿತದಾರನಾಗಿದ್ದಾನೆ. ನನ್ನ ಕುಟುಂಬದ ಯಾವದಾಸ್ತಿ ಯಿ ವ್ಯಾಜ್ಯದಲ್ಲಿ ಬಿದ್ದದೆ. ನನ್ನ ಅಣ್ಣನ ಹೆಂಡತಿಗೆ 7500 ರೂಪಾಯಿಗಳು ಕೊಡುವಂತೆ ಅಚ್ಚಪ್ಪ ಸ್ವಾಮಪ್ಪ ಪಂಚಾಯತಿ ನಿರ್ಧರಿಸಿದನು. ತೀರ್ಪು ಯಿನ್ನು ಸಂಪೂರ್ಣವಾಗಿ ಬರದು ಯಿಲ್ಲ. ತೀರ್ಪು ನಕಲು ಮಾತ್ರ ಬರದು ಅದೆ. ತೀರ್ಪು ನಕಲು 1915 ಸಂ॥ರದಲ್ಲಿ ಬರದದೆ. ಮೆರವಣಿಯ ಆಕ್ಷೇಪಣಿಯ ಅರ್ಜಿಯನ್ನು ವಾಪಸು ತೆಗದುಕೊಂಡರೆ ನನಗೆ 7500 ರೂಪಾಯಿಗಳು ನಾಲ ಕೊಡುತ್ತೇನೆಂದು ಅಚ್ಚಪ್ಪ ಸ್ವಾಮಪ್ಪ ಮಾತುಕೊಟ್ಟು ಯಿಲ್ಲ.

ಕೌಂಟರು ಅರ್ಜೀದಾರರ ವಕೀಲರ ಸವಾಲು :—

ನಾಲ್ಕು ವರುಷದ ಲಾಗಾಯಿತು ಈ ವ್ಯಾಜ್ಯವು ನಮ್ಮ ಕುಟುಂಬದಲ್ಲಿ ನಡಿಯುತ್ತಿದೆ. 1915 ಸಂ॥ರ ನವಂಬರು ತಿಂಗಳಲ್ಲಿ ಅಚ್ಚಪ್ಪ ಸ್ವಾಮಪ್ಪನು ಪಂಚಾಯತದಾರನಾಗಿ ಏರ್ಪಟ್ಟನು. ಈಗ ವಿಚಾರಣೆಯಲ್ಲಿರುವ ಅರ್ಜಿಯನ್ನು 1915 ಸಂ॥ ಡಿಶಂಬರಲ್ಲಿ ಬರದದೆ. 1915 ಸಂ॥ರ ಡಿಶಂಬರು ತಿಂಗಳಲ್ಲಿ ಯಗ್ಜಿಬಿಟ್ಟು ಡಿ. ಯನ್ನುವ ಚಂದಾಪಟ್ಟಿ ತಯಾರು ಮಾಡಲ್ಪಟ್ಟಿತು. ನನಗೆ ಕಂಪ್ಲಿಯಲ್ಲಿ ಆಸ್ತಿ ಫುಂಟು. ಅದೇ ಗ್ರಾಮದಲ್ಲಿ ಒಂದು ಮನಿ ಅದೆ. ನಾನು ಕಂಪ್ಲಿಯಲ್ಲಿಯು, ರಾಮುಸಾಗರದಲ್ಲಿಯು ಕೂಡ ಕಾಪುರ ಯಿರುತ್ತೇನೆ. ಕಂಪ್ಲಿ ಪೇಟೆವಳಗೆ ಬಸವೇಶ್ವರನ ಗುಡಿ ಅದೆ. ಮಠದಿಂದ ಬಸವೇಶ್ವರನ ಗುಡಿ ವರಿಗೂ ಮೆರವಣಿಯನ್ನು ಹೊರಡಿಸುವದಕ್ಕೆ ಒಪ್ಪಲಿಲ್ಲ. ವೀರಭದ್ರಸ್ವಾಮಿ ಗುಡಿಯವರಿಗೆ ಮಾತ್ರ ಹೊರಡಿಸಬೇಕೆಂಬದಾಗಿ ಒಪ್ಪಿದರು. ನಮ್ಮ ಕುಟುಂಬದ ವ್ಯಾಜ್ಯದಲ್ಲಿ

ಅಚ್ಚಪ್ಪ ಸ್ವಾಮಪ್ಪನ ಪಿನಣ್ಣ ಯಿನ್ನು ಮೂರುಮಂದಿ ಪಂಚಾಯಿತದಾರರಿರುವರು. ಈ ಅರ್ಜಿ ಕೊಡುವದಕ್ಕೆ ಮುಂಚಿತವಾಗಿಯೇ ಪಂಚಾಯಿತಿ ತೀರ್ಪು ನಕಲು ಬರಿಯುಲ್ಪಟ್ಟಿತು. ಆ ತೀರ್ಪಿಗೂ ಈಗ ಪ್ರಕೃತ ಅರ್ಜಿಗೂ ಯಾವ ವಿಧವಾದ ಸಮ್ಮಂಧವಿಲ್ಲ.

(ಸಹಿ) ಆರ್. ಶ್ರೀನಿವಾಸರಾವು.

ಕೋರ್ಟಿನಲ್ಲಿ ನಾನು ಹೇಳಿದ್ದನ್ನು ಬರದಮೇಲೆ ಓದಿ ವೊಪ್ಪಿಕೊಂಡಿದ್ಧೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪ್ಯಾಟ ಡಿವಿಜನ್ ಜಾಯಿಂಟು ಮೆಜಿಸ್ಟ್ರೇಟುರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು 1

ಅರ್ಜಿದಾರರ ಪರ 2-ನೇ ಸಾಕ್ಷಿಯ ಕೈಫಿಯತ್ತು.

ಹೆಸರು :— ಹುಚ್ಚಾಚಾರು, ತಂದೆಯ ಹೆಸರು ಶ್ರೀನಿವಾಸಾಚಾರು, ಗ್ರಾಮ ಕಂಪ್ಲಿ ತಾಲೂಕು ಹೊಸಪೇಟಿ, ವೃತ್ತಿ ಯಿನಾಂದಾರು, ಮತ ಬ್ರಾಹ್ಮಣ ಕುಲ ಹಿಂದು ವಯಸ್ಸು 38.

3-1-1916.

3-1-1916-ನೇ ಸಂ॥ರ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಕೊಟ್ಟ ಕೈಫಿಯತ್ತು.

ನಾನು ಕಂಪ್ಲಿ ಕಾಪುರಸ್ತನು. ಆ ವೂರಲ್ಲಿ 28 ವರುಷದ ಲಾಗಾಯಿತು ಬಿಟ್ಟೇನಿ ನನಗೆ ಸಂಸ್ಕೃತ ಬರುತ್ತದೆ, ಸಂಸ್ಕೃತವು ಕೂಡ ಪ್ರಾಕೃತ ಬಲ್ಲೆನು

ಸಂಸ್ಕೃತ ಭಾಷೆಯನ್ನು ಕನ್ನಡದಲ್ಲಿ ತರ್ಜುಮೆ ಮಾಡ ಬಲ್ಲೆನು. 1-2 ನಂಬರು ಅರ್ಜಿಯಲ್ಲಿ ನಾನು ದಸ್ಕತು ಮಾಡಿದ್ದೇನೆ. ಶಿ. ಶಿ. 1 ಅಂಶಗಳನ್ನು ಅರ್ಜಿಯಲ್ಲಿ ಸೇರಿಸಬೇಕೆಂದು ನಾನೇ ಹೇಳಿದೆನು. ಎ. ಬಿ. ಯೆಗ್ಜಿಬಿಟ್ಟುಗಳನ್ನು ನಾನು ಓದಿದೆನು. ಕೋರ್ಟಿನಲ್ಲಿ ಯೆಗ್ಜಿಬಿಟ್ಟಾಗಿ ದಾಖಲು ಮಾಡಲು ನಾನು ವಕೀಲರಿಗೆ ಕೊಟ್ಟೆನು. ಕಂಪ್ಲಿ ಯಲ್ಲಿ ಬ್ರಾಹ್ಮಣರ ಪರವಾಗಿ ಅನೇಕ ಮತಸ್ತರು ವುಂಟು. 28 ವರುಷದ ಲಾಗಾಯಿತು ಕಂಪ್ಲಿಯಲ್ಲಿ ಬ ಸ ವ ಪು ರಾ ಣ ಓದಿದಂತೆ ಯಿಲ್ಲ. 11 ವರುಷದ ಕೆಳಗೆ ಪ್ರಯತ್ನ ಪಟ್ಟಂತೆ ಕಾಣುತ್ತದೆ. ಪೋಲೀಸು ಯಿನ್ಸ್ಪೆಕ್ಟರು ಅಬ್ದುಲ್ ಕರೀಂಸಾಹೇಬರವರಿಂದ ಮೆರವಣಿ ನಿಂದ್ರಿಸಲ್ಪಟ್ಟಿತು. ಡಿಸಂಬರು ರಜಾ ದಿನಗಳಲ್ಲಿ ಬಸವ ಪುರಾಣದ ಮೆರವಣಿ ಹೊರಡುವದೆಂದಾಗ ವಾರ್ತೆಯಿತ್ತು. ಯೆಗ್ಜಿಬಿಟ್ಟು ಎ. ಬಿ. ಪುಸ್ತಕಗಳನ್ನು ಧ್ವಂಸ ಮಾಡಬೇಕೆಂತಲು ಅಥವ ಶಿ. ಶಿ. 1 ರೊಳಗೆ ಯಿರುವ ಭಾಗಗಳನ್ನು ಕೆಡಿಸಬೇಕೆಂತಲು ಸರ್ಕಾರದೊಳಗೆ ನಾನು ಅರ್ಜಿ ಕೊಟ್ಟೆನು. ಈ ವಿಷಯವಾಗಿ ನಾನು 500, 600 ರೂಪಾಯಿಗಳವರಿಗೆ ಖರ್ಚು ಮಾಡಿದೆನು. ಬ್ರಾಹ್ಮಣರಲ್ಲಿಯು, ನೇಕಾರರಲ್ಲಿಯು, ಯಿನ್ನು ಅನೇಕರಲ್ಲಿ ಚಂದಾ ಹಣವನ್ನು ವಸೂಲು ಮಾಡಿಸಿದೆನು. ಮೆರವಣಿ ಜರಿಗಿದ್ದಾದರೆ ನಾವು ಮತ್ತು ಯಿತರರು ಯಲ್ಲಾರು ಬಲತ್ಕಾರದಿಂದ ನಿಂದ್ರಿಸಬೇಕೆಂದು ಮಾತನಾಡಿದಿವಿ. ಲಿಂಗಾಯಿತರು ಏನು ಹೇಳದಲೆ ಬಾಯಿ ಮುಚ್ಚಿಕೊಂಡು ಮೆರವಣಿ ಹೊರಡಿಸಿದಾಗ್ಯು ಆಕ್ಷೇಪಣ ಕರವಾದ ಅಂಶಗಳು ಪುಸ್ತಕದಲ್ಲಿರುವದರಿಂದ ಅಂಥಾ ಪುಸ್ತಕದ ಮೆರವಣಿ ಆಕ್ಷೇಪಣೆಕರವೆ. ನೆ ವ್ವಾ ರು ದೇವಾಂಗದವರೆಂದು ಕರಿಯಲ್ಪಡುತ್ತಾರೆ. ಅವರ ಪೈಕಿ 1000 ಜನ ಯಿದ್ದಾರೆ ನಾನು ಹುಟ್ಟುವದಕ್ಕಿಂತ ಮುಂಚೆ 40 ವರುಷದ ಕೆಳಗೆ ದೇವಾಂಗದವರಿಗೂ ಲಿಂಗಾಯಿತರಿಗೂ ಮಾರಾಮಾರಿ ಜರಿಗಿದಂತೆ ನಾನು ಕೇಳೇನಿ. ಆ ಉಭಯ ಮತಸ್ಥರಿಗೂ ಕಕ್ಷೆ ಅದೆ.

ಅಡ್ಡ ಸವಾಲು.—

ದೇವಾಂಗದವರು ಬ್ರಾಹ್ಮಣರ ಶಿಷ್ಯರು. ಕಂಪ್ಲಿವಳಗೆ ಅವರ ಸ್ವಂತ ಮಠವು ಅದೆ. ಆ ಮಠದಲ್ಲಿ ಅವರ ಗುರುವು ಯಿರುತ್ತಾನೆ. ಆ ಗುರುವು ದೇವಾಂಗದ ಮತಸ್ಥನು ಹವ್ಯ ಕವ್ಯಾದಿಗಳಿಗೆ ಅವರು ಬ್ರಾಹ್ಮಣ ಪುರೋಹಿತರನ್ನ ಕರಿಯುತ್ತಾರೆ. ನಾವೆಲ್ಲರು ಮಧ್ವ ಮತಸ್ಥರು. ದಸ್ಕತ್ತು ಮಾಡಿದಪೈಕಿ ಶಿವ ಭಕ್ತರು ಕೂಡ ವುಂಟು ಉತ್ಸವ ಹೊರಡಿಸುತ್ತಾರೆಂದು ಕೇಳದ ತಕ್ಷಣವೇ ನಾವು ಅರ್ಜಿಗಳು ಕೊಟ್ಟೆವಿ. ಬ್ರಾಹ್ಮಣರೆಲ್ಲರು ವಂದು ಮೀಟಿಂಗು ಮಾಡಿಕೊಂಡಿವಿ. ಮತ್ತು ಯಿತರರ ಸಂಗಡಕೂಡ ಶೇರಿಕೊಂಡು ಈ ವಿಷಯ ಸರ್ವರು ಮಾತನಾಡಿವಿ. ಮಠ ದೊಳಗೆ ಹೇಳಿದ ಪುರಾಣವನ್ನು ಕೇಳಲಿಕ್ಕೆ ನಾನು ಯೆಂದು ಹೋಗಿಲ್ಲ. ಯಾವ ಲಿಂಗಾಯಿತರು ಆಕ್ಷೇಪಣ ಕರವಾದ ಭಾಗವನ್ನು ನನಗೆ ಓದಿ ಹೇಳಲಿಲ್ಲ ಯಿತರ

ಯಾವ ಬ್ರಾಹ್ಮಣರ ಮುಂದೆ ಓದಿ ಹೇಳಿದ್ದು ನನಗೆ ತಿಳಿಯದು. ಇತರ ಬ್ರಾಹ್ಮಣರು ಯಾರಾದರೂ ಆ ಲಿಂಗಾಯಿತರ ಮಠಕ್ಕೆ ಹೋದ ಸಂಗತಿ ನನಗೆ ತಿಳಿಯದು. ಈ ಬಸವ ಪುರಾಣವನ್ನು ಓದುವದಿಕ್ಕಿಂತ ಮುಂಚಿತವಾಗಿ ಯೀ ಪುರಾಣದ ವಿಷಯವು ನನಗೆ ತಿಳಿಯದು. ಅರ್ಜಿ ಬಳ್ಳಾರಿಯಲ್ಲಿ ಬರಿಯಲ್ಪಟ್ಟಿತು. ಬ್ರಾಹ್ಮಣೇತರರು ಕೂಡ ಅರ್ಜಿ ಕೊಡುವ ವಿಷಯದಲ್ಲಿ ಸೇರಿರುವರು. ಚಂದಾ ಕೊಡುವವರು ಯೆಷ್ಟು ಜನರೋ ನನಗೆ ತಿಳಿಯದು. ಅರ್ಜಿಯನ್ನು ಬರುಸುವದಕ್ಕೆ ಬಳ್ಳಾರಿಗೆ ಹೋದವರು ಬ್ರಾಹ್ಮಣರು.

ಬ್ರಾಹ್ಮಣರಕ್ಕಿಂತಲೂ ಬ್ರಾಹ್ಮಣೇತರರೇ ಜಾಸ್ತಿ ಜನರು ಯಿದ್ದಾರೆ. ಬಸವ ಪುರಾಣದಲ್ಲಿರುವ ಅಂಶಗಳನ್ನು ಬ್ರಾಹ್ಮಣೇತರರು ಆಕ್ಷೇಪಿಸಿದ್ದಾರೆ. ಈ ಆಕ್ಷೇಪಣೆ ಮಾಡಿದವರು ಯಾರೋ ನನಗೆ ತಿಳಿಯದು. ಅವರುಗಳ ಹೆಸರು ಕೂಡ ನನಗೆ ತಿಳಿಯದು. ನಮ್ಮ ವಕೀಲರಿಗೆ ಬ್ರಾಹ್ಮಣೇತರರ ಹೆಸರುಗಳು ನಾನು ಹೇಳಿಯಿಲ್ಲ. ಅರ್ಜಿ ಕೊಟ್ಟಿದ್ದು ಯಾವ ಬ್ರಾಹ್ಮಣೇತರರೆಂಬದಾಗಿ ನನಗೆ ತಿಳಿಯದು. ವ್ಯಾಸ ಮಹಾಋಷಿಯ ಪುರಾಣವನ್ನು ನಾವು ಸನ್ಮಾನಿಸುತ್ತೇವೆ. 18 ವ್ಯಾಸ ಪುರಾಣದ ಹೆಸರುಗಳನ್ನು ನಾನು ಹೇಳಬಲ್ಲೆನು. ಅದರಪೈಕಿ ಒಂದು ಸ್ಕಾಂದ ಪುರಾಣವದೆ. ಶಿ. ಬಿ. ಯೆನ್ನುವ ಪುರಾಣವು ವ್ಯಾಸ ಪುರಾಣದಲ್ಲಿ ಬಂದಿದ್ದೇ ಆದರೇ ನನಗೆ ಬಹಳ ಆಶ್ಚರ್ಯಕರವಾಗುತ್ತದೆ. ಮತ್ತು ಮನಸ್ಸಿಗೆ ತಾಪವಾಗುತ್ತದೆ. ಶಿ. ಶಿ. ಮತ್ತು ಡಿ. ಗಳ ಸಾರಾಂಶವು ನನಗೆ ಗೊತ್ತುಂಟು. ಅವು ಕಾಳಿದೇವನ ಕಥೆಯಲ್ಲಿ ಬರುತ್ತವೆ ಈ ಅಧ್ಯಾಯದಲ್ಲಿ ಯಾವ ವಿವಾದವುಯಿಲ್ಲ. ಆ ಅಧ್ಯಾಯದಲ್ಲಿ ಬ್ರಾಹ್ಮಣರು ಲಿಂಗಾಯತರನ್ನ ಯಾವವಿಧವಾಗಿ ದೂಷಣೆ ಮಾಡುವದಿಲ್ಲ. ಮಧ್ವ ಮತಸ್ಥರ ಪುರಾಣಗಳಲ್ಲಿ ಶಿವ ಭಕ್ತರ ದೂಷಣೆಯುಯಿಲ್ಲ. ಶಿವನನ್ನು ಪ್ರಜಾಪತಿಯನ್ನಾಗಿ ಹೋಲಿಸಿಲ್ಲ ನನಗೆ ಯಿಂಗ್ಲೀಷು ತಿಳಿಯದು. 2-ನೇ ನಂಬರುಳ್ಳ ಅರ್ಜಿಯನ್ನು ಕೊಡುವವಕ್ಕಿಂತ ಮುಂಚಿತವಾಗಿ ನಮಗುನ್ನೂ ಬ್ರಾಹ್ಮಣೇತರರಿಗುನ್ನೂ ಯಾವ ವಿಧವಾದ ಸಲಹೆಗಳು ನಡಿಯಲಿಲ್ಲ. ನಮ್ಮ ಪುರಾಣಗಳು ಲಿಂಗಾಯಿತ ಮತವಲ್ಲಿಯೂ ಲಿಂಗಾಯಿತರ ಪುರಾಣಗಳು ನಮ್ಮ ಮತವಲ್ಲಿಯು ಹೇಳುವದಿಲ್ಲ. ಬಸವ ಪುರಾಣದಲ್ಲಿಯ 33 ಲಿಂದ 36 ವರಿಗೂ ಯಿರುವ ಅಧ್ಯಾಯಗಳನ್ನೂ ಯಿಗ್ಜಿಬಿಟ್ಟು ಬಿ. ಯೆನ್ನುವ 35-ನೇ ಅಧ್ಯಾಯವನ್ನು ನಾನು ಓದಿದನು. ಅವು ಯಾರ ಮಾತುಗಳೋ ನನಗೆ ತಿಳಿಯವು. ಈ ಭಾಗಗಳಲ್ಲಿ ಲಿಂಗಾಯಿತರ ದೂಷಣೆಯಿಲ್ಲ. ಶಿ. ವಿ. ಯೆನ್ನುವದು ವ್ಯಾಸ ಪುರಾಣದಲ್ಲಿಯಿಲ್ಲ. ಬ್ರಾಹ್ಮಣೇತರರ ಪೈಕಿ ಯಾರು ಬಸವ ಪುರಾಣವನ್ನು ಕೇಳಲಿಕ್ಕೆ ಹೋಗಿರುವರೋ ಅವರ ಹೆಸರುಗಳು ನನಗೆ ತಿಳಿಯವು. ಅಥವಾ ನಮ್ಮಗೆ ಚಂದಾ ಕೊಟ್ಟವರು ಯಾರೋ ನನಗೆ ತಿಳಿಯವು. ಚಂದಾ ಕೊಟ್ಟವರ ಪಟ್ಟಿ ಯಾರಲ್ಲಿರುವದೋ ನನಗೆ ತಿಳಿಯದು. ಅವಶ್ಯಕ ಯಿದ್ದಲ್ಲಿ ಬಲತ್ಕಾರದಿಂದ ಮರವಣಿಗೆಯನ್ನು ನಿಲ್ಲಿಸುವದಕ್ಕಾಗಿ ನಾವು ಮಾಡಿದಿವಿ.

ಪುನರ್ವಿಮರ್ಶನ:—

ನಾನು 18 ವ್ಯಾಸ ಪುರಾಣಗಳನ್ನು ಓದಿರುವೆನು. ಲಿಂಗಾಯತರಿಗೆ ದೂಷಣಕರವಾದ ಅಂಶವು ಯಾವದುಯಿಲ್ಲ.

(ಸಹಿ.) ಮಧ್ವಾಚಾರ್ಯ,
ಕೊರ್ಲಹಳ್ಳಿ.

ಕೋರ್ಟಿನಲ್ಲಿ ಹೇಳಿದಪ್ರಕಾರ ಬರದಿದ್ದನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ.) ಡಿ. ಜಿ. ಬ್ಲಿಸ್.
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ತಾಲೂಕ್ಯ ಜಾಯಿಂಟ್ಯ ಮೇಜಸ್ಟ್ರೇಟು ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಕೇಸು ನಂ॥ I.

ಅರ್ಜಿದಾರರ ಪರ 3-ನೇ ಸಾಕ್ಷಿಯ ಕೈಫಿಯತು.

ಹೆಸರು - ಶಂಕರ್ಭಟ್ಟ, ತಂದೆ ಹೆಸರು - ಕೃಷ್ಣಭಟ್ಟ, ಗ್ರಾಮ - ಹೊಸಪೇಟೆ ತಾಲೂಕು - ಹೊಸಪೇಟೆ, ಮತ - ಸ್ಮಾರ್ತ ಬ್ರಾಹ್ಮಣ, ವೃತ್ತಿ - ಬಾಲಿಕ ಪಾಠಶಾಲೋಪಾಧ್ಯಾಯ, ಕುಲ - ಹಿಂದು ವಯಸ್ಸು 32.

ತಾ॥ 22-1-1916.

1916-ನೇ ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

1904-ನೇ ವರ್ಷದಲ್ಲಿ ನಾನು ಕಂಪ್ಲಿಯಲ್ಲಿ ಯೂನಿಯನ್ ಕ್ಲಾರ್ಕ್ ಆಗಿದ್ದೆನು. ನಾನು ಕಂಪ್ಲಿಯಲ್ಲಿ ಸುಮಾರು ಹನ್ನೆರಡು ತಿಂಗಳು ಇದ್ದು 1905ರಲ್ಲಿ ಆ ಪೂರನ್ನು ಬಿಟ್ಟೆನು. ನಾನು ಬಸವ ಪುರಾಣವನ್ನು ಓದಿದ್ದೇನೆ, ಮುಖ್ಯವಾಗಿ ನಾನು ಶೈವಮತಸ್ಥನು. ನಾನು ಕಂಪ್ಲಿಯಲ್ಲಿದ್ದಾಗ ಬಸವ ಪುರಾಣವನ್ನು ಓದುತ್ತಿದ್ದರು. ಆದರೇ ಬ್ರಾಹ್ಮಣರು ಮತ್ತು ಅವರ ಕಡೆಯವರು ಮೆರವಣಿಗೆ ಮಾಡಕೂಡದೆಂತ ಆಕ್ಷೇಪಿಸುತ್ತಿದ್ದರು. ಪೋಲೀಸು ಇನ್ಸ್‌ಪೆಕ್ಟರು ಮೆರವಣಿಗೆಯನ್ನು ನಿಲ್ಲಿಸಿದನು.

ಅಡ್ಡ ಸವಾಲು.—

ಮೆರವಣಿಗೆ ಮಾಡಕೂಡದೆಂತ ಆಕ್ಷೇಪಿಸಿದವರಲ್ಲಿ ನಾನೊಬ್ಬನು. ಯಾವ ತಿಂಗಳಲ್ಲಿ ಆಕ್ಷೇಪಣೆಯು ಪ್ರಾರಂಭವಾಯಿತೋ ನಾನು ಹೇಳಲಾರೆನು. ಆಕ್ಷೇಪಣೆಯ ಅರ್ಜಿಗೆ ನಾನು ರುಜು ಮಾಡಲು ಒಪ್ಪಲಿಲ್ಲ (ರುಜು ಮಾಡಲಿಲ್ಲ). ಆ ಅರ್ಜಿಗೆ ಜವಾಬು ಹೇಳಲು ಕರೆಕಳಿಸಿದ್ದ ಲಿಂಗಾಯತರ ಹೆಸರುಗಳನ್ನು ನಾನು ಹೇಳಲಾರೆನು. ಆಗ ಜಾರಿಗೆ ತಂದ ಆರ್ಡರಿನ ನಕಲು ನನ್ನಲ್ಲಿಲ್ಲ. ಬರವಣಿಗೆಯಲ್ಲಿ ಆರ್ಡರು ಇತ್ತೆಂಬುದೇ ನಾನು ಹೇಳಲಾರೆನು.

ನನಗೆ ಸಂಸ್ಕೃತ ತಿಳಿಯುತ್ತೆ. ವಿಷ್ಣುವಿಗೆ "ಅಧೋಕ್ಷಜ" ನೆಂದು ಹೆಸರುಂಟು. "ಸಪ್ತಮ್ಯಾಂ ಜನೇರ್ಡಃ" ಎಂಬ ಪಾಣಿನಿಯ ಸೂತ್ರ ಒಂದುಂಟು. ಈ ವಾಕ್ಯದಲ್ಲಿ "ಜನ" ಎಂಬ ಪ್ರತ್ಯಯವು "ಜ" ಎಂದು ಬದಲಾಯಿಸಲ್ಪಟ್ಟು (ಬದಲಾಗಿ) "ಹುಟ್ಟೋಣ" ಎಂಬ ಅರ್ಥವನ್ನು ಕೊಡುತ್ತದೆ. ಉದಾಹರಣೆ - ಸರಸಿಜ - ಸರೋವರದಿಂದ ಹುಟ್ಟಿದ್ದು.

"ಅಕ್ಷ್ಣೋಽದರ್ಶನಾತ್" ಎಂಬ ಪಾಣಿನಿಯ ಸೂತ್ರ ಒಂದು ಇದೆ. ಇದರಲ್ಲಿ "ಅಕ್ಷಿ" "ಅಕ್ಷ್ಣ" ಇವು ಸಮಾಸ ಪದಗಳಲ್ಲಿ ಒಂದಾಗ "ದೃಷ್ಟಿ" ಎಂಬ ಅರ್ಥವನ್ನು ಕೊಡುತ್ತದೆ. 'ಬಿಲ" "ರಂಧ್ರ" ಎಂಬ ಅರ್ಥವನ್ನು ಕೊಡುವಾಗ "ಅಕ್ಷ" ಎಂಬ ರೂಪದಿಂದಲೇ ಇರುತ್ತೆ. "ಗವಾಕ್ಷ" = ಕಿಟಕಿ ("ಸೂರ್ಯ ಕಿರಣಗಳಿಗಾಗಿರುವ ರಂಧ್ರ")

ಹದಿನೆಂಟು ಮಹಾಪುರಾಣಗಳಲ್ಲಿ ಶಿವ ರಹಸ್ಯವು ಒಂದಿಲ್ಲ. ಶಿವ ರಹಸ್ಯದಿಂದ ತೆಗೆದ ಒಂದು ವಾಕ್ಯವು ಪದ್ಮಪುರಾಣದಲ್ಲಿ ಹೀಗೆ ಇರುವದು, "ಅತನ ಅಧೋರಂಧ್ರದಿಂದ ಜನಿಸಿದ ಕಾರಣ ನನಗೆ ಅಧೋಕ್ಷಜನೆಂದು ಹೆಸರು." [ಪದ್ಮಪುರಾಣದಂತ ಒಂದು ಪುಸ್ತಕದಲ್ಲಿ ಈ ವಾಕ್ಯವು ಕಂಡು ಬಂತು.]

ಸ್ಕಾಂದಪುರಾಣವು ಹದಿನೆಂಟು ಮಹಾಪುರಾಣಗಳಲ್ಲಿ ಒಂದು. ವೇದಗಳಿಗೆ ವಿರೋಧವಾಗಿಲ್ಲದ ಪಕ್ಷದಲ್ಲಿ ಸ್ಕಾಂದಪುರಾಣದಲ್ಲಿನ ಸಾಧಕ ವಾಕ್ಯಗಳನ್ನು ಅಂಗೀಕರಿಸುತ್ತೇವೆ.

ಸ್ಕಾಂದಪುರಾಣದ ಒಂದು ಭಾಗಕ್ಕೆ "ಕಟಿಕಲಿ" ಎಂದು ಹೆಸರು.

ಈ ಕೆಳಗೆ ಕಂಡ ವಿಷ್ಣುವಿನ ದಶಾವತಾರಗಳನ್ನು ನಾನು ಒಪ್ಪುತ್ತೇನೆ.

(1) ಮತ್ಸ್ಯ = ಮೀನು. (2) ಕೂರ್ಮ = ತಾಬೇಲು. (3) ವರಾಹ = ಹಂದಿ, (4) ನೃಸಿಂಹ = ಅರ್ಧ ಮನುಷ್ಯ - ಅರ್ಧ ಸಿಂಹ. (5) ವಾಮನ = ಗಿಡ್ಡ ಮನುಷ್ಯ. (6) ಪರಶುರಾಮ = ಕೊಡಲಿ ಹಿಡಿದ ರಾಮ. (7) ಶ್ರೀರಾಮ (8) ಕೃಷ್ಣ. (9) ಬುದ್ಧ. (10) ಕಲ್ಕಿ - ಪಾಪನಾಶಕನು.

6–7–8–9-ನೇ ಅವತಾರಗಳು ಮನುಷ್ಯಾವತಾರಗಳು.

ಬ್ರಹ್ಮನ ದೇಹವು ಕೇವಲ ದೈವ ಸಂಬಂಧವಾದದ್ದೇ ಹೊರತು ಪಂಚಭೂತ ಸಂಬಂಧ ವಾದದ್ದಲ್ಲ. ಆದ್ದರಿಂದ ಅದು ಬಹಳ ಶ್ರೇಷ್ಠವಾದದ್ದು.

ಸ್ಕಾಂದಪುರಾಣದಲ್ಲಿ ನನಗೆ ತೋರಿಸಿದ ವಚನವನ್ನು ನಾನು ಓದಿದ್ದೇನೆ. ಅದು ವ್ಯಾಸ ಶೌನಕರ ಸಂವಾದ ವಿಷಯವಾಗಿದೆ.

ಪುನರ್ವಿಮರ್ಶನೆ :—

ಸ್ಕಾಂದಪುರಾಣದ ವಚನಗಳಿಗೂ, ಬಸವ ಪುರಾಣದ ವಚನಗಳಿಗೂ ಸಂಬಂಧ ವಿಲ್ಲ.

(ಸಹಿ) ಜಿ. ಶಂಕರಭಟ್ಟ.

ಕೋರ್ಟಿನಲ್ಲಿ ಹೇಳಿದ ಪ್ರಕಾರ ಬರೆದಿದ್ದನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಬಿ. ಜಿ. ಬ್ಲಿನ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪ್ಯಾಟೆ ಡಿವಿಜನ್ ಜಾಯಿಂಟು ಮ್ಯಾಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಲೇನಿಯಸ್ ಅರ್ಜಿ ನಂಬರು 1.

ಅರ್ಜಿದಾರರ ಪರ 4-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ರಾಮಸಿಂಗ್, ತಂದೆ ಹೆಸರು - ದುರ್ಗಪ್ಪ, ಗ್ರಾಮ - ಕಂಪ್ಲಿ, ತಾಲೂಕು ಹೊಸಪೇಟೆ, ಮತ - ಕ॥ ಬ್ರಾಹ್ಮಣ, (ಕನೂಜ ದೇಶದ ಬ್ರಾಹ್ಮಣ) ವೃತ್ತಿ - ಸೇಧ್ಯ, ಕುಲ - ಹಿಂದು, ವಯಸ್ಸು 55.

ತಾ॥ 22--1-1916.

1916-ನೇ ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ನಾನು ಬ್ರಾಹ್ಮಣರ ವಿಧಿಯನ್ನನುಸರಿಸಿ ನಡೆಯತಕ್ಕ ಬ್ರಾಹ್ಮಣರ ಶಿಷ್ಯನು. ನನ್ನ ಗುರುಗಳು ಕೂಡ ಬ್ರಾಹ್ಮಣರೇ. ನಾನು ಬಸವ ಪುರಾಣವನ್ನು ಪ್ರೋದುವದು ಕೇಳೇನಿ. 10-12 ವರುಷಗಳ ಕೆಳಗೆ ಬಸವ ಪುರಾಣದ ಮೆರವಣಿಗೆಯನ್ನು ಹೊರಡಿಸುವದಾಗಿ ಪ್ರಯತ್ನಪಟ್ಟಿದ್ದು ನಾನು ಬಲ್ಲೆನು. ಆಕ್ಷೇಪಣೆ ಮಾಡಿದ ಜನಗಳ ಪೈಕಿ ನಾನೊಬ್ಬನು. ಕಂಪ್ಲಿಯಲ್ಲಿ ನಮ್ಮ ಮತಸ್ಥರ ಮನಿಗಳು 10-15 ವುಂಟು. ಈಗ ಪ್ರಕೃತ ಜರುಗುವ ಮೆರವಣಿ ಉತ್ಸವವನ್ನು ಅಡ್ಡಿ ಮಾಡುವದಕ್ಕೆ ಚಂದಾ ಹಾಕಿದಿವಿ.

ಅಡ್ಡ ಸವಾಲು:—

ಬ್ರಾಹ್ಮಣರು ಆಕ್ಷೇಪಣೆ ಮಾಡಿದ್ದರಿಂದ ನಾವು ಕೂಡ ಮೆರವಣಿಗೆಯನ್ನು ಆಕ್ಷೇಪಿಸಿದಿವಿ. ಮತದಲ್ಲಿ ನಾವು ಬ್ರಾಹ್ಮಣರೇ. ಬಸವ ಪುರಾಣದಲ್ಲಿ ಏನದೆ ಅನ್ನುವದು ನನಗೆ ತಿಳಿಯದು. ಬ್ರಾಹ್ಮಣರು ಬಸವ ಪುರಾಣದಲ್ಲಿ ಯಾವ ಭಾಗ ಆಕ್ಷೇಪಿಸಿದ್ದು ನನಗೆ ತಿಳಿಯದು. 10-12 ವರುಷದ ಕೆಳಗೆ ಮೆರವಣಿ ವಿಷಯವಾಗಿ ಬರಹ ಮೂಲಕ ಆಕ್ಷೇಪಣೆ ಮಾಡಿದ ಸಂಗತಿ ನನಗೆ ತಿಳಿಯದು. ಬ್ರಾಹ್ಮಣರ ಅರ್ಜಿಯನ್ನು ಯಾವ ಲಿಂಗಾಯತ ಜನರು ಆಕ್ಷೇಪಣೆ ಮಾಡಿದ್ದು ನನಗೆ ತಿಳಿಯದು.

10-12 ವರುಷದ ಕೆಳಗೆ ಕಂಪ್ಲಿ ವಳಗೆ ತೋಟಪ ಮಠದಲ್ಲಿ ಬಸವ ಪುರಾಣ ಓದಿದರು. ನಾನು ಹೋಗಿ ಕೇಳಲಿಲ್ಲ. ಈ ವರುಷ ಮಹಂತಸ್ವಾಮಿ ಯವರ ಮಠದಲ್ಲಿ ಬಸವ ಪುರಾಣವನ್ನು ಓದುವ ಕಾಲಕ್ಕೆ ಕೂಡ ಹೋಗಲಿಲ್ಲ. ಮೊದಲಿನಿಂದ ಅಂದರೆ (8-10 ದಿನಗಳಿಂದ) ನನ್ನನ್ನು ಸಾಕ್ಷಿಯಾಗಿ ಕರಿಯುತ್ತಾರೆಂದು ನನಗೆ ತಿಳಿಯಿತು. ನಾನು 2 ರೂಪಾಯಿ ಚಂದಾ ಹಣವನ್ನು ಕೊಟ್ಟೇನಿ. ಅದಕ್ಕೆ ರಶೀದಿ ನನ್ನಲ್ಲಿಲ್ಲ. ನನ್ನ ಗುರುವಾದ ಭೋಗಪ್ಪಗೆ ಚಂದಾ ಹಣವನ್ನು ಕೊಟ್ಟೇನಿ. ಬ್ರಾಹ್ಮಣರು ಆಕ್ಷೇಪಣೆ ಮಾಡದೆ ಯಿದ್ದ ಪಕ್ಷಕ್ಕೆ ಮೆರವಣಿ ಮಾಡಲಿಕ್ಕೆ ನನ್ನ ಆಕ್ಷೇಪಣೆಯು ಯಿಲ್ಲ. ನನಗೆ 4 ಯಕರೆ ಭೂಮಿ ಅದೆ. ಪ್ರಕೃತ ಕಂಪ್ಲಿಯಲ್ಲಿರುವ ಬಳ್ಳಾರಿ ವೆಂಕೋಬರಾಯರ ಭೂಮಿಯನ್ನು ನಾನು ಸಾಗುವಳಿ ಮಾಡುತ್ತೀನಿ. ಆತನು ಬ್ರಾಹ್ಮಣನು. ನಾನು 2 ರೂಪಾಯಿ ಚಂದಾ ಹಣವನ್ನು 2 ತಿಂಗಳ ಕೆಳಗೆ ಕೊಟ್ಟೆನು. ನಮ್ಮ ಮತದ ಪೈಕಿ ನಾನೇ ಮುಖ್ಯಸ್ಥನು. ನನಗೆ ಭೀಮಸಿಂಗು ಅನ್ನುವ ಒಬ್ಬ ಅಣ್ಣನು ಯಿದ್ದನು. ಉಭಯರು ಕೂಡಿ ಯಿದ್ದೀವಿ. ನಮ್ಮ ಮನಿವಳಗೆ ತುರಕರ ಪೀರ್ಲ್ಲಗಳನ್ನು ಯಿಡಲಿಲ್ಲ. ತುರಕರಿಗೂ ಲಿಂಗಾಯತರಿಗೂ ಝಗಳ ಯಿತ್ತು. ನಮ್ಮ ಅಣ್ಣ ಭೀಮಸಿಂಗ್ ತುರಕರ ಪರವಾಗಿ ಸಾಕ್ಷ್ಯ ಕೊಟ್ಟದ್ದು ನನಗೆ ತಿಳಿಯದು. ನಾನು 50 ರೂಪಾಯಿ ಸರ್ಕಾರು ಹಣವನ್ನು ಕೊಡುತ್ತೇನು. ಲಿಂಗಾಯತರು ಮೆರವಣಿಯಲ್ಲಿ ಯೇನು ಮಾಡುತ್ತಾರೋ ನನಗೆ ತಿಳಿಯದು. ಪ್ರಕೃತ ಮೆರವಣಿಯನ್ನು ಬ್ರಾಹ್ಮಣರು ಆಕ್ಷೇಪಿಸುತ್ತಾರಾದ್ದರಿಂದ ನಾನು ಕೂಡ ಆಕ್ಷೇಪಣೆ ಮಾಡುತ್ತೇನೆ. ಇದು ಮತ ವಿಷಯವಾದ ಅಂಶವು. ಚಂದಾ ಹಣವನ್ನು ವಸೂಲು ಮಾಡುವದಕ್ಕಾಗಿ ಯಾವ ವಿಧವಾದ ಮೀಟಿಂಗು ಜರಗಲಿಲ್ಲ.

ಪುನರ್ವಿಮರ್ಶನೆ:—

ಕಂಪ್ಲಿ ಬ್ರಾಹ್ಮಣರಿಗೂ ನಮಗೂ ಭೋಜನಾದಿಗಳಾಗಲಿ ಅಥವಾ ವಿವಾಹ ಸಮ್ಮಂದವಾಗಲಿ ಯಿರುವದಿಲ್ಲ.

(ಸಹಿ) ಪೂಜಾರಿ ರಾಮಸಿಂಗ್,

ಕೋರ್ಟಿನಲ್ಲಿ ನಾನು ಹೇಳಿದ್ದನ್ನು ಓದಿ ಒಪ್ಪಿಕೊಂಡು ಯಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಸ್ಟ್ರೇಟುರವರ ಕೋರ್ಟು.

1916 ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಅರ್ಜಿದಾರರ ಪರ 5-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಲಕ್ಷ್ಮಣಶಿಂಗು, ತಂದೆ ಹೆಸರು - ಭೀಮಶಿಂಗು, ಗ್ರಾಮ - ಕಂಪ್ಲಿ, ತಾಲೂಕು - ಹೊಸಪೇಟೆ, ಮತ - ರಜಪುತು, ವೃತ್ತಿ - ಪೋಲೀಸು ಪಿಂಚಿನಿದಾರು, ಕುಲ - ಹಿಂದು, ವಯಸ್ಸು 54.

ತಾ। 22-1-1916.

1916-ನೇ ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

5 ವರುಷದ ಕೆಳಗೆ ನನಗೆ ಪಿಂಚನಿ ಆಗಿದೆ. 11-12 ವರುಷದ ಕೆಳಗೆ ಕಂಪ್ಲಿಯಲ್ಲಿ ನಾನು ಸ್ಟೇಷನ್ ರೈಟರು ಆಗಿದ್ದೆನು. ನನಗೆ ಬ್ರಾಹ್ಮಣರೇ ಗುರುಗಳು, ನಾನು ಕ್ಷತ್ರಿಯ. ನಾನು ಬ್ರಾಹ್ಮಣರ ವಿಧಿಯನ್ನು ಅನುಸರಿಸುತ್ತೇನೆ. 11 ವರುಷದ ಕೆಳಗೆ ಲಿಂಗಾಯತರ ಮಠದಲ್ಲಿ ಪುರಾಣವನ್ನು ಪ್ರೋದಿದರು. ಆಗ್ಗೆ ಮೆರವಣಿಯನ್ನು ಹೊರಡಿಸುವದಕ್ಕೆ ಕೂಡ ಪ್ರಯತ್ನ ಪಟ್ಟರು. ಬ್ರಾಹ್ಮಣರು, ಬ್ರಾಹ್ಮಣರಿಗೆ ಬೇಕಾದವರು ಆಕ್ಷೇಪಣೆ ಮಾಡಿದರು. ಪೋಲೀಸು ಯಿನ್‌ಸ್ಪೆಕ್ಟರು ಮೆರವಣಿಯನ್ನು ನಿಂದ್ರಿಸಿದರು. ಆ ದಿನದಿಂದ ಈ ದಿನದ ವರಿಗೂ ಪುರಾಣವು ನಿಂತದೆ. ಈ ಪ್ರಕೃತ ಮೆರವಣಿಗೆ ನನ್ನ ಆಕ್ಷೇಪಣೆ ವುಂಟು. ಬ್ರಾಹ್ಮಣರ ಫಂಡಿಗಾಗಿ ನರಸಿಂಹಾಚಾರ್ಯರಿಗೆ ಚಂದಾ ಹಣವನ್ನು ಕೊಟ್ಟೆನು. ಪ್ರಕೃತ ನಾನು ದನಗಳ ವ್ಯಾಪಾರವನ್ನು ಮಾಡುತ್ತೇನು.

ಅಡ್ಡ ಸವಾಲು :—

ಕಂಪ್ಲಿಯಲ್ಲಿ ಸಬ್ ರಿಜಿಸ್ಟ್ರಾರು ಆಫೀಸುವಳಗೆ ನನ್ನ ಮಗನು ಜವಾನನು. ಸಬ್ ರಿಜಿಸ್ಟ್ರಾರು ಬ್ರಾಹ್ಮಣನು. ನಾನು ಬಸವ ಪುರಾಣವನ್ನು ಓದಿ ಯಿಲ್ಲ. ಕೇಳಿ ಯಿಲ್ಲ. 10 ವರುಷದ ಕೆಳಗೆ ಯಾವ ಬ್ರಾಹ್ಮಣರು ಮೆರವಣಿಯನ್ನು ಕುರಿತು ಆಕ್ಷೇಪಣೆ ಮಾಡಿದ ವಿಷಯವು ನನಗೆ ಜ್ಞಾಪಕವಿಲ್ಲ. ಅಬ್ದುಲ್ ಕರೀಂಸಾಹೇಬು ರವರು ಯಾವ ಲಿಂಗಾಯತರನ್ನು ಕರಿಸಿದ್ದು ನನಗೆ ತಿಳಿಯದು.

ಬಸವ ಪುರಾಣದೊಳಗಿನ ಕೆಲವು ಭಾಗಗಳು ಆಕ್ಷೇಪಣಕರವೆಂದು ಕೆಲವು ಮಂದಿ ಬ್ರಾಹ್ಮಣರು ನನಗೆ ಹೇಳಿದರು. ಮೆರವಣಿ ಹೊರಡಿಸುವದಕ್ಕೆ ಬ್ರಾಹ್ಮಣರು ಒಪ್ಪಿದಲ್ಲಿ ನನ್ನ ಆಕ್ಷೇಪಣೆ ಯಾವದೂ ಯಿಲ್ಲ. ಮೆರವಣಿವಳಗೆ ಲಿಂಗಾಯಿತರು ಯೇನು ಮಾಡುವದು ನನಗೆ ತಿಳಿಯದು. ನಾಲ್ಕನೇ ಸಾಕ್ಷಿಯು ನಾನು ಒಂದೇ ಮತಸ್ಥರು. 4-ನೇ ಸಾಕ್ಷಿಗೂ ನನಗೂ ವಿವಾಹ ಬಾಂಧವ್ಯ ವುಂಟು.

(ಸಹಿ) ಲಕ್ಷ್ಮಣಲಿಂಗು,

ಕೋರ್ಟಿನಲ್ಲಿ ಬಹಿರಂಗವಾಗಿ ಬರಿಸಿದ ಕೈಫಿಯತ್ತು ಓದಿ ಒಪ್ಪಿಕೊಂಡಿದ್ದೇನು.

ಡಿ. ಜಿ. ಬ್ಲೆಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟುರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿಯ ನಂಬರು I.

ಅರ್ಜಿದಾರರ ಪರ 6-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಚಿರಡಿಗ ಚೋಳಪ್ಪ, ತಂದೆಯ ಹೆಸರು - ಕಂದಪ್ಪ, ಗ್ರಾಮ-ಕಂಪ್ಲಿ, ತಾಲೂಕು ಹೊಸಪೇಟೆ, ಮತ - ಕ್ಷತ್ರಿಯ, (ಕ್ಷತ್ರಿಯ ಮತದ ಪೈಕಿ ಯಿದು ಒಂದು ಮತ) ವೃತ್ತಿ - ಕಬ್ಬಿನ ಗಾಣಗಳಿಂದ ಜೀವನ, ಕುಲ - ಹಿಂದು, ವಯಸ್ಸು 55.

ತಾ॥ 22-1-1916.

1916 ಸಂ॥ರ ಜನವರಿ 22-ನೇ ತೇದಿ 1873 ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಹೇಳಿದ ಕೈಫಿಯತ್ತು.

ನಾನು ಬ್ರಾಹ್ಮಣರ ಶಿಷ್ಯನು. ನಾನು ಜನಿವಾರವನ್ನು ಧರಿಸೇನಿ. 10 ವರ್ಷದ ಕೆಳಗೆ ಕಂಪ್ಲಿಯಲ್ಲಿ ಬಸವ ಪುರಾಣವನ್ನು ಓದಿದರು. ಬ್ರಾಹ್ಮಣರು ಆಕ್ಷೇಪಣೆ ಮಾಡಿದ್ದರಿಂದಲೂ ಪೋಲೀಸು ಇನ್ಸ್‌ಪೆಕ್ಟರವರು ನಿಬಂಧಿಸಿದ್ದರಿಂದಲೂ ಮೆರವಣಿ ಜರಗಲಿಲ್ಲ. ಆಗ್ಗ್ಯೆ ತೋಟದ ಮಠದಲ್ಲಿ ಪುರಾಣವನ್ನು ಓದಿದರು. ಈಗ ಮಹಂತಸ್ವಾಮಿ ಮಠದಲ್ಲಿ ಪುರಾಣವನ್ನು ಓದಿದರು. ಪ್ರಕೃತ ಮೆರವಣಿಯನ್ನು ಹೊರಡಿಸುವದಕ್ಕೆ ಬ್ರಾಹ್ಮಣರು ಯಿನ್ನು ಅನೇಕರು ಆಕ್ಷೇಪಣೆ ಮಾಡಿದರು. ನಮ್ಮ ಕ್ಷತ್ರಿಯರ ಮನಿಗಳು 10 12 ಉಂಟು. ಬ್ರಾಹ್ಮಣರ ಫಂಡಿಗೆ ನಾನು ಚಂದಾ ಕೊಟ್ಟೇನು.

ಅಡ್ಡ ಸವಾಲು:—

ಬ್ರಾಹ್ಮಣರು ಹೇಳಿದ ವಿಷಯಗಳು ವಿನಹಾ ಬಸವ ಪುರಾಣದೊಳಗಿನ ಬೇರೆ ಯಾವ ಅಂಶಗಳು ನನಗೆ ಯಾವದೂ ತಿಳಿಯದು.

ಬಸವ ಪುರಾಣ ದೊಳಗಿನ ಯಾವ ಭಾಗವು ತಮ್ಮಗೆ ದೂಷಣಕರವೆಂದು ಬ್ರಾಹ್ಮಣರು ನನಗೆ ಹೇಳಲಿಲ್ಲ. ಲಿಂಗಾಯತರು ಮೆರವಣಿ ವಳಗ ಯೇನು ಮಾಡುವದು ನನಗೆ ತಿಳಿಯದು. ಚಿಡಿರಿಗ ಕುಟುಂಬಗಳು 4-6 ಯಿವೆ. ನಾವು ಯಿತರ ಕ್ಷತ್ರಿಯರ ಸಂಗಡ ಭೋಜನಾದಿಗಳು ಮಾಡುವದಿಲ್ಲ. ತಿಂಗಳ ಕೆಳಗೆ ನಾನು ರು. 3 ಚಂದಾ ಹಣವನ್ನು ಕೊಟ್ಟೇನು. ಅದಕ್ಕೆ ನನ್ನಲ್ಲಿ ರಶೀದಿ ಯಿಲ್ಲ. ಬ್ರಾಹ್ಮಣರು ಮೆರವಣಿಯನ್ನು ಹೊರಡಿಸುವದಕ್ಕೆ ಒಪ್ಪಿದಲ್ಲಿ ನನ್ನ ಆಕ್ಷೇಪಣೆಯಿಲ್ಲ. ಲಿಂಗಾಯತರಿಗು ಬ್ರಾಹ್ಮಣರಿಗು ಜರಿಗಿದ ಅದ್ದಾವಾಲಕಿ ಕೇಸಿನ ವಿಷಯದಲ್ಲಿ ಗಿರಿಯಪ್ಪನು ಲಿಂಗಾಯತರ ಪರವಾಗಿ ಸಾಕ್ಷತ್ವ ಕೊಟ್ಟನು. ಅವನಿಗೆ ಬಹಿಷ್ಕಾರವನ್ನು ಹಾಕಿ ಜುಲ್ಮಾನವನ್ನು ಹಾಕಿ ಮತ್ತು ನಮ್ಮ ಮತದಲ್ಲಿ ಸೇರಿಸಿ ಕೊಂಡೆವು. ಅವನು ಬಹಿಷ್ಕೃತನಾಗಿದ್ದ ಕಾಲದಲ್ಲಿ ನಾವು ಅವನ ಸಂಗಡಸೇರಲಿಲ್ಲ.

(ಸಹಿ) ಬೋಳಪ್ಪ.

ಬಹಿರಂಗವಾದ ಕೋರ್ಟಿನಲ್ಲಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೆಜಿಸ್ಟ್ರೇಟರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು 1.

ಅರ್ಜಿದಾರರ ಪರ 7-ನೇ ಸಾಕ್ಷಿಯು ಕೈಫಿಯತ್ತು.

ಹೆಸರು - ಯೇಣ್ಣೆ ಲಿಂಗಣ್ಣ, ತಂದಿಯ ಹೆಸರು - ಕೃಷ್ಣಪ್ಪ, ಗ್ರಾಮ -ಕಂಪ್ಲಿ, ತಾಲೂಕು - ಹೊಸಪೇಟೆ, ಮತ - ಕೋಮಟಿ (ವೈಶ್ಯ) ಕುಲ - ಹಿಂದು, ವೃತ್ತಿ ವ್ಯಾಪಾರ, ವಯಸ್ಸು 30.

ತಾ॥ 22-1-1916.

1916 ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ನಾನು ವರ್ತಕ ವ್ಯಾಪಾರದಿಂದಲೂ, ವ್ಯವಸಾಯ್ಯದಿಂದಲೂ ಜೀವನ ಮಾಡುತ್ತೇನು. 150 ರೂಪಾಯಿ ಸರ್ಕಾರು ಹಣ ಕೊಡುತ್ತೇನು. ನಾನು ಬ್ರಾಹ್ಮಣರ ಶಿಷ್ಯನು. ನಾರಾಯಣಾಚಾರ್ಯರಾದ ಬ್ರಾಹ್ಮಣನೇ ನಮ್ಮ ಮತದ ಗುರುವು. 10-12 ವರುಷದ ಕೆಳಗೆ ಬಸವ ಪುರಾಣದ ಮೆರವಣಿಯನ್ನು ಹೊರಡಿಸುವದಕ್ಕೆ ಪ್ರಯತ್ನ ಪಟ್ಟರು. ಬ್ರಾಹ್ಮಣರು ಅವಕ್ಕೆ ಆಕ್ಷೇಪಣೆ ಮಾಡಿದರು. ಅಬ್ದುಲ್ ಕರೀಂಸಾಹೇಬರು ಆ ಮೆರವಣಿಯನ್ನು ನಿಂದ್ರಿಸಿದರು. ಆಗ್ಗ್ಯೆ ಕೋಮಟರನ್ನ ವಿಚಾರಣೆ ಮಾಡಿದ ಸಂಗತಿ ನನಗೆ ತಿಳಿಯದು. ಈಗ ಲಿಂಗಾಯತರು ಬಸವ ಪುರಾಣದ ಮೆರವಣಿಯನ್ನು ಹೊರಡಿಸುವದಕ್ಕೆ ಪ್ರಯತ್ನ ಪಡುತ್ತಾಯಿದ್ದಾರೆ. ಬ್ರಾಹ್ಮಣರು ನಮ್ಮ ಜನಗಳ ಪೈಕಿ ಅನೇಕರು ಮೆರವಣಿ ವಿಷಯ ಆಕ್ಷೇಪಣೆ ಮಾಡಿದರು. ನಾನು ಬ್ರಾಹ್ಮಣರ ಫಂಡಿಗೆ ನಾಲ್ಕು ರೂಪಾಯಿ ಚಂದಾ ಕೊಟ್ಟೇನು. ಸುಮಾರು 30 ವೈಶ್ಯರ ಮನಿಗಳು ಅವೆ. ಎಷ್ಟು ಜನರು ಚಂದಾ ಕೊಟ್ಟದ್ದು ನನಗೆ ತಿಳಿಯದು.

ಅಡ್ಡ ಸವಾಲು.—

ಬಸವ ಪುರಾಣದ ವಿಷಯವು ನನಗೆ ಯಾವದು ಗೊತ್ತಿಲ್ಲ. ಬಸವ ಪುರಾಣ ದೊಳಗಿನ ಯಾವ ಭಾಗವು ಆಕ್ಷೇಪಣೆ ಕರವ್ರೋ ನನಗೆ ತಿಳಿಯದು. ಅಬ್ದುಲ್ ಕರೀಂಸಾಹೇಬರವರ ಜೊತೆಗೆ ಯಾವ ಬ್ರಾಹ್ಮಣರು ಆಕ್ಷೇಪಣೆ ಮಾಡಿದರೋ

ನನಗೆ ತಿಳಿಯದು. ಆ ಸಮಯದಲ್ಲಿ ಯಾವ ಲಿಂಗಾಯತರನ್ನು ಅಬ್ದುಲ್ ಕರೀಂ ಸಾಹೇಬರವರು ವಿಚಾರಣೆ ಮಾಡಿದರೋ ನನಗೆ ತಿಳಿಯದು. ತಿಂಗಳ ಕೆಳಗೆ ಚಂದಾ ಹಣವನ್ನು ನಾನು ಕೊಟ್ಟೇನು. ಇದಕ್ಕಾಗಿ ಮೀಟಿಂಗು ಮಾಡಲಿಲ್ಲ. ಆದರೆ ಚಂದಾ ಹಣವನ್ನು ನಾನು ನಮ್ಮ ಮನಿವಳಗೆ ಕೊಟ್ಟೇನು. ಮೆರವಣಿ ಹೊರಟರೆ ನಾನು ಆಕ್ಷೇಪಣೆ ಮಾಡುತ್ತೇನೆ. ಆಗಲಿ ಝಗಳ ಮಾಡತಕ್ಕವನಲ್ಲ. ಕೋಮಟರಾದ ನಾವು ಝಗಳ ಮಾಡುವವರಲ್ಲ. ಬ್ರಾಹ್ಮಣರಿಗೆ ಆಕ್ಷೇಪಣೆ ಯಿಲ್ಲದಿದ್ದರೆ ನನ್ನ ಆಕ್ಷೇಪಣೆಯು ಯಿರೋದಿಲ್ಲ. ಈ ಮೆರವಣಿ ವಿಷಯವಾಗಿ ನಮ್ಮ ಕೋಮಟಿಗರ ಅಭಿಪ್ರಾಯವು ನನಗೆ ತಿಳಿಯದು. ಅಡ್ಡ ಪಾಲಕಿ ಕೇಸಿನ ವಿಷಯದಲ್ಲಿ ಲಿಂಗಾಯತರಿಗೆ ನಾನು ಪ್ರತಿಕೂಲವಾಗಿ ಸಾಕ್ಷತ್ವ ಕೊಟ್ಟೆನು.

(ಸಹಿ) ಯೆಣ್ಣಿ ಶಿಂಗಣ್ಣ.

ಬಹಿರಂಗವಾದ ಕೋರ್ಟಿನಲ್ಲಿ ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಸ್ಟ್ರೇಟರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಅರ್ಜಿದಾರರ ಪರ 8-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಯೆಣ್ಣಿ ಹನುಮಂತಪ್ಪ, ತಂದೆಯ ಹೆಸರು - ಸೀಲಪ್ಪ, ಗ್ರಾಮ ಕಂಪ್ಲಿ, ತಾ॥ ಹೊಸಪೇಟೆ, ಕುಲ - ವೈಶ್ಯ, ವೃತ್ತಿ - ಕಮಿಷನ್ ಏಜಂಟು ಮತ್ತು ವ್ಯವಸಾಯ, ಮತ - ಹಿಂದು, ವಯಸ್ಸು 40.

ತಾ॥ 22--1--1916.

1916 ಸಂ॥ರ ಜನವರಿ ತಿಂಗಳು 22-ನೇ ತೇದಿ 1873ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಪೂರ್ತಿ ಬರಿಸಿದ ಕೈಫಿಯತ್ತು.

20 ರೂಪಾಯಿ ಯಿರ್ಕಂಟಾಕ್ಸ್ ಷುಮಾರು ರು. 100 ಸರ್ಕಾರು ಹಣ ಕೊಡುತ್ತೇನು. 10-11 ವರುಷದ ಕೆಳಗೆ ಲಿಂಗಾಯತರು ಮೆರವಣಿಯನ್ನು ಹೊರಡಿಸುವದಕ್ಕೆ ಪ್ರಯತ್ನಪಟ್ಟ ಸಂಗತಿ ನನಗೆ ಗೊತ್ತು ಅದೆ. ಆದರೆ ಮೆರವಣಿ ಹೊರಡಲಿಲ್ಲ. ಬ್ರಾಹ್ಮಣರು, ಕೋಮಟರು, ಬ್ರಾಹ್ಮಣರಿಗೆ ಬೇಕಾದವರೆಲ್ಲರು ಆಕ್ಷೇಪಣೆ ಮಾಡಿದರು. ನಾನು ಕೂಡ ಆಕ್ಷೇಪಣೆ ಮಾಡಿದೆನು. ಬಸವ ಪುರಾಣದಲ್ಲಿ ಬ್ರಾಹ್ಮಣರ ದೂಷಣೆ ಯಿರೋದರಿಂದ ಪ್ರಕೃತ ಜರುಗುವ ಮೆರವಣಿ ವಿಷಯದಲ್ಲಿ ನಾನು ಆಕ್ಷೇಪಣೆ ಮಾಡಿದೆನು. ಈ ಸಂಗತಿ ನಮ್ಮ ಗುರುಗಳು ಹೇಳಿದರು. ನಾನು ರು. 3 ಬ್ರಾಹ್ಮಣರಿಗೆ ಚಂದಾ ಕೊಟ್ಟೆನು. ಮಹಜರುನಲ್ಲಿ ನಾನು ದಸ್ಕತ್ತು ಮಾಡಿದೆನು.

ಅಡ್ಡ ಸವಾಲು :—

ಬಸವ ಪುರಾಣದಲ್ಲಿ ಯಾವ ವಿಧವಾದ ಬ್ರಾಹ್ಮಣರ ದೂಷಣೆ ಯಿರುವದೋ ನನಗೆ ತಿಳಿಯದು. ಚಂದಾ ವಸೂಲು ಮಾಡುವದಕ್ಕಾಗಿ ಒಂದು ಮೀಟಿಂಗು ಮಾಡಿದರು. ಆ ಮೀಟಿಂಗಿಗೆ ನಾನು ಹೋಗಿದ್ದೆನು. 7-ನೇ ಸಾಕ್ಷಿ ಕೂಡ ಮೀಟಿಂಗಿಗೆ ಬಂದು ಯಿದ್ದನು. ಚಂದಾ ಹಣವನ್ನು ನಾನು ನನ್ನ ಅಂಗಡಿವಳಗೆ ಕೊಟ್ಟೆನು. ವಂದು ಚಂದಾ ಪಟ್ಟಿಯನ್ನು ಕೂಡ ತಯಾರು ಮಾಡಿದ್ದರು. 7-ನೇ ಸಾಕ್ಷಿ ರು. 4 ಚಂದಾ ಕೊಟ್ಟಿರುವನು. ನಾನು ನನ್ನ ಲೆಖ್ಖದ ಬುಕ್ಕಿನಲ್ಲಿ ಖರ್ಚು ಹಾಕಿದೆನು. ನಮ್ಮ ಮತದವರೆಲ್ಲರು ಈ ಮೆರವಣಿ ವಿಷಯದಲ್ಲಿ ಆಕ್ಷೇಪಣೆ ಮಾಡಿದರು. ಮೆರವಣಿ ಜರಗಿದಲ್ಲಿ ನಾವು ಝಗಳ ಮಾಡುವದಿಲ್ಲ. ಬ್ರಾಹ್ಮಣರು ಝಗಳ ಮಾಡಿದರೆ ನಮ್ಮಗೆ ಆಗ್ರಹ ಬಂದು ನಾವು ಝಗಳ ಮಾಡುತ್ತೇವೆ. ಅಡ್ಡಪಾಲಿಕಿ ಕೇಸಿನ ವಿಷಯದಲ್ಲಿ ನಾನು ಸಾಕ್ಷತ್ವ ಕೊಟ್ಟಿಲ್ಲ. ತುಕಕರ ಪರವಾಗಿ ನಾನು ಸಾಕ್ಷತ್ವ ಹೇಳಲಿಲ್ಲ. ಅವರು ನನ್ನನ್ನು ಸಾಕ್ಷಿ ಬರಸಿದ್ದರು. ಆದರೆ ನನ್ನನ್ನು ವಿಚಾರಣೆ ಮಾಡಲಿಲ್ಲ. ಕೋಮಟರಲ್ಲಿ 2 ಕಕ್ಷಿಗಳುಂಟು.

(ಸಹಿ) ಯಣ್ಣೆ ಹನುಮಂತಪ್ಪ.

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜೆ. ಬ್ಲಿಸ್.
ಜಾಯಿಂಟು ಮೇಜಸ್ಟ್ರೇಟು.

ಹೊಸಪ್ಯಾಟೆ ಡಿವಿಜನ್ ಜಾಯಿಂಟು ಮ್ಯಜಿಸ್ಟ್ರೇಟುರವರ ಕೋರ್ಟು.

1916-ನೇ ಸಂ॥ರದ ಮಿಸಲೇನಿಯಸ್ ಅರ್ಜಿ ನಂಬರು 1.

ಅರ್ಜಿದಾರರ ಪರ 9-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಹರೀಶ್ವರಪ್ಪ, ತಂದೆ ಹೆಸರು - ಪ್ರೊಂಪಣ್ಣ, ಗ್ರಾಮ - ಕಂಪ್ಲಿ, ತಾಲೂಕು - ಹೊಸಪೇಟೆ, ಕುಲ - ದೇವಾಂಗ (ನೇಕಾರ) ವೃತ್ತಿ - ಲೋಕಲ್ ಫಂಡು ಕಂಟ್ರಾಕ್ಟರು, ಮತ - ಹಿಂದು, ವಯಸ್ಸು 35.

ತಾ॥ 22-1-1916.

1916-ನೇ ಸಂ॥ತ ಜನವರಿ 22-ನೇ ತೇದಿ 1873-ನೇ ಸಂ॥ದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ನಮ್ಮ ಮತದವರೇ ನಮ್ಮ ಗುರುಗಳು. ಆದರೆ ಹವ್ಯ ಕವ್ಯಾದಿಗಳಿಗೆ ಬ್ರಾಹ್ಮಣರನ್ನು ಕರೆಯುತ್ತೇವೆ. ನಮ್ಮಗೆ ಜನಿವಾರ ವುಂಟು. ಲಿಂಗಾಯುತರಿಗೆ ಯಿಲ್ಲ. ನನಗೆ 7-8 ಮಗ್ಗಗಳುಂಟು. ಲೋಕಲ್‌ಫಂಡು ಕಂಟ್ರಾಕ್ಟು ಕೂಡ ಮಾಡುತ್ತೇನು. ಕಂಪ್ಲಿವಳಗೆ 100 ನಮ್ಮ ಜನರ ಮನಿಗಳುಂಟು. 30-32 ವರುಷದ ಕೆಳಗೆ ಮೆರವಣಿ ಜರಿಗಿತು. ಲಿಂಗಾಯುತರು ಆಕ್ಷೇಪಣೆ ಮಾಡಿದರು. ಅಲ್ಲರಿಕೂಡ ಜರಿಗಿತು. 16-17 ಲಿಂಗಾಯುತ ಜನರು ಶಿಕ್ಷಿಸಲ್ಪಟ್ಟರು. ಆ ದಿನ ದಿಂದ ಈ ದಿನದವರಿಗೂ ಮತ ಸಂಬಂಧವಾದ ಝಗಳಗಳು ಅವೆ. 10-11 ವರುಷದ ಕೆಳಗೆ ಲಿಂಗಾಯುತರು ಮೆರವಣಿಯನ್ನು ಹೊರಡಿಸುವದಕ್ಕೆ ಪ್ರಯತ್ನ ಪಟ್ಟರು. ಪೋಲೀಸಿನವರು ಹೊರಡದಂತೆ ನಿಂದ್ರಿಸಿದರು. ಪ್ರಕೃತ ಮೆರವಣಿ ನಮ್ಮ ಬಜಾರದೊಳಗೆ ಯೆಂದಿಗೂ ಹೋಗಕೂಡದು. ಬೇರೆ ಬಜಾರದಲ್ಲಿ ಹೋದರೆ ನಮ್ಮ ಆಕ್ಷೇಪಣೆ ಯಾವದು ಯಿಲ್ಲ. ಬ್ರಾಹ್ಮಣರ ಫಂಡಿಗೆ ನಾನು ಚಂದಾ ಹಣವನ್ನು ಕೊಡಲಿಲ್ಲ.

ನಮ್ಮಗಳ ಮೆರವಣಿ ಲಿಂಗಾಯುತರ ಬಜಾರದಲ್ಲಿ ಹೋಗಕೂಡದೆಂದು ಆಕ್ಷೇಪಣೆ ಮಾಡಿದರೆ ಅವರ ಮೆರವಣಿ ನಮ್ಮ ಬಜಾರದೊಳಗೆ ಹೋಗಕೂಡದೆಂದು ನಾವು ಕೂಡ ಆಕ್ಷೇಪಣೆ ಮಾಡುತ್ತೇವೆ.

ಅಡ್ಡ ಸವಾಲು :—

ಲಿಂಗಾಯತರು ನಮ್ಮ ಬಜಾರದಲ್ಲಿ ಮೆರವಣಿಗೆಯನ್ನು ಹೊರಡಿಸುತ್ತೇವೆಂದು ಹೇಳಿಲ್ಲ. ನಮ್ಮ ಜನರು ಯಾರು ಬ್ರಾಹ್ಮಣರ ಫಂಡಿಗೆ ಚಂದಾ ಕೊಡಲಿಲ್ಲ.

(ಸಹಿ) ಶೀಲವಂತರ ಹರೀಶ್ವರಪ್ಪ.

ಬಹಿರಂಗವಾದ ಕೋರ್ಟಿನಲ್ಲಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲೆಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ತಾಲೂಕು ಜಾಯಿಂಟು ಮೇಜಿಸ್ಟ್ರೇಟು ರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿ ನಂ॥ I.

ಅರ್ಜಿದಾರರ ಪರ 10-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಕುರುಬ ಭೀಮಪ್ಪ, ತಂದೆ ಹೆಸರು - ನಾಗಪ್ಪ, ಗ್ರಾಮ - ಕಂಪ್ಲಿ, ತಾಲೂಕು - ಹೊಸಪೇಟೆ, ಕುಲ - ಕುರುಬ, ವೃತ್ತಿ - ವ್ಯವಸಾಯ, ಮತ - ಹಿಂದು, ವಯಸ್ಸು 60.

ತಾ॥ 22-1-1916.

1916-ನೇ ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ನಾವು ಕುರುಬರವನು. ನಾನು ಪಟ್ಟಾ ಭೂಮಿಗಳನ್ನು ಬಿತ್ತಿ ಬೆಳೆಯುತ್ತೇನೆ. ರು. 12 ಹಣ ಕೊಡುತ್ತೇನೆ. ಇತರರ ಭೂಮಿಗಳನ್ನು ಕೂಡ ಮಾಡುತ್ತೇನೆ.

ನಮ್ಮ ಕುರುಬರ ಮನಿಗಳು 30-40 ಅವೆ. ನಮ್ಮ ಮತಕ್ಕೆ ಬೇರೆ ಗುರುವು ಯಿರುವರು. ಆದರೆ ಮದಿವಿಗಳ ಕಾಲಗಳಲ್ಲಿ ಬ್ರಾಹ್ಮಣರನ್ನು ಕರಿಯುತ್ತೇವೆ. ಮೆರವಣಿ ಹೊರಡಿಸುವುದಕ್ಕೆ ನನ್ನ ಆಕ್ಷೇಪಣೆ ಯೇನು ಯಿಲ್ಲ.

ಅಡ್ಡ ಸವಾಲು :—

8-10 ವರ್ಷದ ಕೆಳಗೆ ಮದ್ಲಾಪುರ ಗ್ರಾಮದಲ್ಲಿ ಯಾವ ಮೆರವಣಿ ಜರಿಗಿದ್ದು ನನಗೆ ತಿಳಿಯದು. ನಾವು ಲಗ್ನ ಕಾರ್ಯಗಳನ್ನು ಜರಿಗಿಸಿತಕ್ಕ ಬಸವಣ್ಣ ದೇವರ ಗುಡಿ ಲಿಂಗಾಯತರಿಗೆ ಸೇರಿ ಅದೆ. ಬಸವ ಪುರಾಣವಾಗಲಿ ಯಾವ ಪುರಾಣವೇ ಆಗಲಿ ಓದಿ ಹೇಳುವುದಕ್ಕೆ ನನ್ನ ಆಕ್ಷೇಪಣೆ ಯಿಲ್ಲ. ಮೆರವಣಿ ಹೊರಡಿಸುವುದಕ್ಕೆ ನಮ್ಮ ಜನರು ಯಾರು ಆಕ್ಷೇಪಣೆ ಮಾಡುವುದಿಲ್ಲ.

(ಸಹಿ) ಕುರುಬರ ಭೀಮಪ್ಪ,

ಕೋರ್ಟಿನಲ್ಲಿ ನಾನು ಹೇಳಿದ್ದನ್ನು ಓದಿ ಒಪ್ಪಿಕೊಂಡು ಯಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮ್ಯಾಜಿಸ್ಟ್ರೇಟರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿಯ ನಂಬರು 1.

ಕೌಂಟರು ಅರ್ಜಿದಾರರ ಪರ 1-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಚಂದ್ರಶೇಖರಶಾಸ್ತ್ರಿ, ತಂದೆಯ ಹೆಸರು - ಶಿವರುದ್ರಪ್ಪ, ಗ್ರಾಮ- ಕಂಪ್ಲಿ, ತಾಲೂಕು ಹೊಸಪೇಟೆ, ಮತ - ಲಿಂಗಾಯಿತರ ಗುರು ಕುಲ - ಹಿಂದು, ವಯಸ್ಸು 48.

ತಾ॥ 22-1-1916.

1916 ಸಂ॥ರ ಜನವರಿ 22-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣ ಮಾಡಿ ಬರ್ಸಿದ ಕೈಫಿಯತ್ತು.

ಕಂಪ್ಲಿಯಲ್ಲಿ ಬಸವಪುರಾಣವನ್ನು ನಾನು ಓದುತ್ತಾ ಯಿದ್ದೆನು. ನಾನು ಮೈಸೂರು ಯಿಲಾಖೆ ಡಾವಣಗೇರಿ ಕಾಪುರಸ್ತನು. ಬಸವಪುರಾಣದಲ್ಲಿ ಬರ ದಿದ್ದನ್ನು ನಾನು ಓದಿ ಅರ್ಥವನ್ನು ಹೇಳುತ್ತೇನೆ. ನಾನು ಹೆಚ್ಚು ಕಡಿಮೆಯಾಗಿ ಹೇಳುವದಿಲ್ಲ. 1369-ನೇ ಸಂ॥ದಲ್ಲಿ ಬಸವ ಪುರಾಣವು ಬರದು ಅದೆ. ಆ ಲಾಗಾಯತು ಲಿಂಗಾಯತರು ತಮ್ಮ ಮಠಗಳಲ್ಲಿ ಓದಿಸುವದು ವಾಡಿಕೆಯಲ್ಲಿ ಅದೆ. ಓದಿದ ತರು ವಾಯ ಆ ಪುರಾಣದ ಮೆರವಣಿಯನ್ನು ಹೊರಡಿಸುವದು ಕೂಡ ವಾಡಿಕೆಯಲ್ಲಿದೆ. ನಾನು 26 ವರುಷಗಳ ಲಾಗಾಯತು ಬಸವಪುರಾಣವನ್ನು ಓದಲಿಕ್ಕೆ ಪ್ರಾರಂಭಿ ಸಿದ್ದೇನು.

ಪ್ರಶ್ನೆ :— ಯಾವ ಯಾವ ಸ್ಥಳಗಳಲ್ಲಿ ಬಸವ ಪುರಾಣವನ್ನು ನೀವು ಪ್ರೋದಿರುವಿರಿ? (ಈ ಪ್ರಶ್ನೆವನ್ನು ಅರ್ಜಿದಾರರ ಪರ ವಕೀಲರು ಆಕ್ಷೇಪಣೆ ಮಾಡಿರುತ್ತಾರೆ.)

ಉತ್ತರ :— 2 ವರುಷದ ಕೆಳಗೆ ಬಳ್ಳಾರಿ ತಾ॥ ಶೀವರಗಡ್ಡಿ ಗ್ರಾಮದಲ್ಲಿ ಪ್ರೋದಿರು ತ್ತೇನು. 3 ತಿಂಗಳವರಿಗೂ ಓದಲ್ಪಟ್ಟಿತು ಕೊಟ್ಟೂರು ಸ್ವಾಮಿಗಳವರ ಮಠ ದಲ್ಲಿ ಓದಲ್ಪಟ್ಟಿತ್ತು. ತರುವಾಯ ಗ್ರಾಮದ ಬಾಜಾರುಗಳಲ್ಲಿ ಮೆರವಣಿ ಮಾಡ ಲ್ಪಟ್ಟಿತು. ಸಾಯಂಕಾಲ 7 ಘಂಟೆಯಿಂದ ರಾತ್ರಿ 11 ಘಂಟೆವರಿಗೂ ಮೆರ ವಣಿ ನಡಿಯಿತು. ಮೆರವಣಿಯನ್ನು ಯಾರು ಆಕ್ಷೇಪಣೆ ಮಾಡಲಿಲ್ಲ.

2. 12 ವರುಷದ ಕೆಳಗೆ ಧಾರ್ವಾಡ ಜಿಲ್ಲಾ ಶಿರೋಳ ಗ್ರಾಮದಲ್ಲಿ ನಾನು ಓದಿದೆನು. ತರುವಾಯ 4 ಘಂಟೆವರಿಗೂ ಮೆರವಣಿ ನಡೆಯಿತು. ಯಾರಾಕ್ಷೇಪಣೆಯು ಯಿರಲಿಲ್ಲ

3. 7 ವರುಷದ ಕೆಳಗೆ ಧಾರ್ವಾಡ ಜಿಲ್ಲಾ ಪೈಕಿ ಬಟಗೇರಿ ಗ್ರಾಮದಲ್ಲಿ ಓದಲ್ಪಟ್ಟಿತು. ಮೆರವಣಿ ಕೂಡ ಮಾಡಲ್ಪಟ್ಟಿತು. ಯಾರು ಆಕ್ಷೇಪಣೆ ಮಾಡಲಿಲ್ಲ.

4. 8 ವರುಷದ ಕೆಳಗೆ ಬಿಜಾಪೂರು ಜಿಲ್ಲಾ ಪೈಕಿ ಜೀಳಗಿ ಗ್ರಾಮದಲ್ಲಿ ಓದಲ್ಪಟ್ಟಿತು. ಮೆರವಣಿ ನಡಿಯಿತು. ಯಾರು ಆಕ್ಷೇಪಣೆ ಮಾಡಲಿಲ್ಲ.

5. 14 ವರುಷದ ಕೆಳಗೆ ಧಾರ್ವಾಡ ಜಿಲ್ಲಾ ಪೈಕಿ ರಾಣಿಗನೂರು ಗ್ರಾಮದಲ್ಲಿ ಓದಿ ಮೆರವಣಿಗೆ ಕೂಡ ಮಾಡಲ್ಪಟ್ಟಿತು. ಯಾರು ಆಕ್ಷೇಪಣೆ ಮಾಡಲಿಲ್ಲ.

6. 15-16 ವರುಷದ ಕೆಳಗೆ 2 ಸಾರಿ ಮೈಸೂರು ಯಿಲಾಖೆ ದಾವನಗೆರಿಯಲ್ಲಿ ಓದಿ ಮೆರವಣಿ ಮಾಡಲ್ಪಟ್ಟಿತು.

ನಾನು ಓದಿದ ಬಸವ ಪುರಾಣವನ್ನು ಯೆಗ್ಜಿಬಿಟ್ಟ ಬಿ. ಯೆಂಬುವದನ್ನು ಯೆರಡು ವಂದೇ. ಈ ಬಸವ ಪುರಾಣದ ಗ್ರಂಥಕರ್ತನು ಈ ಪುಸ್ತಕದ ಆಖೈರಿಗೆ ಅಧ್ಯಾಯಗಳ ಸಂಖ್ಯೆಯನ್ನು, ಪದ್ಯಗಳ ಸಂಖ್ಯೆಯನ್ನು ಬರದು ಯಿರುತ್ತಾನೆ. ಈ ಪುಸ್ತಕದಲ್ಲಿ 61 ಅಧ್ಯಾಯಗಳು 3623 ಪದ್ಯಗಳು ಅವೆ. ಈ 3623 ಪದ್ಯಗಳು ಭೀಮ ಕವಿ 1369-ನೇ ಸಂ॥ರಲ್ಲಿ ಬರದು ಯಿರುತ್ತಾನೆ. ನಮ್ಮ ಮತ ಗ್ರಂಥಗಳ ಪೈಕಿ ಯಿದು ಬಹಳ ಪವಿತ್ರವಾದ ಗ್ರಂಥವು. ದೇವರ ಸನ್ನಿಧಿಯನ್ನು ಸೇರಿ ಐಕ್ಯವಾಗಿ ಮೋಕ್ಷ ಸಂಪಾದನೆ ಮಾಡುವ ವಿಷಯವು ಹೇಳುತ್ತದೆ. ಅನೇಕ ಭಕ್ತರ ಚರಿತ್ರಗಳು ಮತಸಮಂಧವಾದ ಆಚರಣೆಗಳು ಕೂಡವುಂಟು. ಯಿತರೆ ಮತಸ್ಥರನ್ನು ದೂಷಣೆ ಮಾಡುವದಕ್ಕಾಗಿ ಈ ಪುರಾಣವನ್ನು ನಾವು ಓದುವದಿಲ್ಲ. ಕಂಪ್ಲಿ ಗ್ರಾಮಕ್ಕೆ ನಾನು ಬರುವದಕ್ಕಿಂತ ಮುಂಚಿತ ಯಿತರ ಮತಸ್ಥರಿಗೆ ಯೀ ಪುರಾಣವು ದೂಷಣಕರವಾದದ್ದೆಂದು ನನಗೆ ತಿಳಿಯದು. 4 ತಿಂಗಳ ಲಾಗಾಯಿತು ನಾನು ಕಂಪ್ಲಿ ಗ್ರಾಮದೊಳಗೆ ಯಿದ್ದೇನು. ಲಿಂಗಾಯಿತರ ವಿನಹಾ ಯಿತರ ಮತಸ್ತರನ್ನು ಪುರಾಣ ಕೇಳಲಿಕ್ಕೆ ನಾವು ಕರೆಸಲಿಲ್ಲ.

ಬಸವಪುರಾಣವು ಲಿಂಗಾಯಿತರ ಪಠಿಯಂಬದ ಮಾತ್ರವ ರಚಿಸಲ್ಪಟ್ಟದ್ದಾಗಿದೆ. ಬಸವ ಪುರಾಣವು ಹತ್ತು ಸೂತ್ರ ಪುರಾಣಗಳ ಆಧಾರದಮೇಲೆ ಬರೆಯಲ್ಪಟ್ಟಿದೆ.

ನಾವು ಲಿಂಗವನ್ನು ಪೂಜಿಸುತ್ತೇವೆ. ಲಿಂಗದ ಅಧೋಭಾಗವನ್ನು ವಿಷ್ಣುವೆಂದು ಭಾವಿಸುತ್ತೇವೆ. ಲಿಂಗದ ಮಿಕ್ಕಭಾಗವನ್ನು ಪೀಠದಿಂದ ಪ್ರತ್ಯೇಕವಾಗಿ ಪೂಜಿಸಲಾಗದು.

ವಿಷ್ಣುವನ್ನು ಈಶ್ವರನ ಶಕ್ತಿಯಾಗಿ ನಾವು ಭಾವಿಸುತ್ತೇವೆ. ಬ್ರಹ್ಮನ ಅಂಗಾಂಗಳನ್ನು ಮನುಷ್ಯರ ಅಂಗಾಂಗಗಳಿಗಿಂತ ಅಧಿಕವೆಂದು ಹೇಳುತ್ತೇವೆ. ಬ್ರಹ್ಮನ ದೇಹದಲ್ಲಿ ರಕ್ತ, ಮಾಂಸ, ಮೂತ್ರ ಇತ್ಯಾದಿಗಳಿಲ್ಲ. ಬ್ರಹ್ಮನ ಅಧೋರಂಧ್ರವು ಮನುಷ್ಯರ ಅಧೋರಂಧ್ರದ ಹಾಗಿಲ್ಲ. ಜನನವೇ ಇಲ್ಲದ ಶಿವನು ಜನ್ಮವುಳ್ಳ ವಿಷ್ಣುವಿಗಿಂತ ಅಧಿಕನೆಂದು ತೋರಿಸುವದಕ್ಕಾಗಿ ಈ ವಾಕ್ಯವು ಹೇಳಲ್ಪಟ್ಟಿದೆ.

(ಸಹಿ.) ಟಿ. ಯಂ. ಚಂದ್ರಶೇಖರಶಾಸ್ತ್ರಿ.

ಕೋರ್ಟಿನಲ್ಲಿ ಬಹಿರಂಗವಾಗಿ ಬರಿಸಿದ ಕೈಫಿಯತ್ತು ಓದಿ ಒಪ್ಪಿಕೊಂಡಿದ್ದೇನೆ.

ಸಿ. ಜಿ. ಪ್ರಿನ್ಸ್,
ಜಾಯಿಂಟು ಮೆಜಿಸ್ಟ್ರೇಟು.

ತಾ। 25-2-1916.

ಮುಖ್ಯ ವಿಮರ್ಶನೆ ಪ್ರಾರಂಭ:—

ಬ್ರಹ್ಮನು ತನ್ನ ಅಂಗಗಳಿಂದ ಮನುಷ್ಯರನ್ನು ಇತರ ಅನೇಕ ಮೃಗಗಳನ್ನು ಸೃಷ್ಟಿಸಿದನು. ವೈಷ್ಣವ ಮತಸಂಬಂಧವಾದ ಭಾಗವತ ಪುರಾಣವನ್ನು ವ್ಯಾಸರು ಬರೆದಿದ್ದಾರೆ. ವಿಷ್ಣುವಿನ ಅವತಾರಗಳ ಪೈಕಿ ವರಾಹನ ಅವತಾರವು ಒಂದು. ವರಾಹನು ಬ್ರಹ್ಮನ ನಾಶಿಕದಿಂದಲೂ ರುದ್ರನು ಬ್ರಹ್ಮನ ಮುಂದಲೆಯಿಂದಲೂ ಹುಟ್ಟಿದಂತೆ ಭಾಗವತದಲ್ಲಿ ಹೇಳಿದೆ. ಬ್ರಹ್ಮನು ವಿಷ್ಣುವಿನ ನಾಭಿಯಿಂದ ಹುಟ್ಟಿದನು.

ಬ್ರಹ್ಮ - ವಿಷ್ಣು - ರುದ್ರರ ಉತ್ಪತ್ತಿಯನ್ನು ಬೇರೆ ಬೇರೆ ಪುರಾಣಗಳಲ್ಲಿ ಬೇರೆ ಬೇರೆ ವಿಧವಾಗಿ ಹೇಳಿದೆ. ಶಿವ ಪುರಾಣದಲ್ಲಿ ಈ ಮೂರು ದೇವರುಗಳೂ ಮಹೇಶ್ವರನ ಅಧೀನರೆಂದು ಹೇಳಿದ್ದಾರೆ. "ಅಧೋಕ್ಷಜ" ಎಂಬ ಪದವು. "ಅಧ" (ಕೆಳಗಿನ) "ಅಕ್ಷ" (ಇಂದ್ರಿಯ) "ಜ" ಇವುಗಳಿಂದ ಬಂದಿದೆ. ಆ ಮಾತಿಗೆ "ಅಧೋ ಇಂದ್ರಿಯದಿಂದ ಹುಟ್ಟಿದ" ಎಂದರ್ಥ.

"ಅಕ್ಷ" ಎಂಬ ಪದಕ್ಕೆ "ಇಂದ್ರಿಯ" ಎಂಬ ಅರ್ಥವು ನಿಘಂಟು ಗ್ರಂಥಗಳಲ್ಲಿದೆ.

ಇತರ ಮತಸ್ಥರ ಮನಸು ನೋಯಿಸುವದಕ್ಕಾಗಿ ನಾವು [illegible] ಪುರಾಣವನ್ನು ಎಂದು [illegible]

ಲಿಂಗಾಯತರು " ಓಂ " ಎಂಬ ಪವಿತ್ರಪದವನ್ನು ಧ್ಯಾನಿಸುತ್ತಾರೆ. ಈ ಪದದ ಒಂದು ಭಾಗಕ್ಕೆ "ವಿಷ್ಣು" ವೆಂದರ್ಥ.

ಮಹೇಶ್ವರನಲ್ಲಿ ಭಕ್ತಿ ಯಿಡಬೇಕೆಂದು ನಮ್ಮ ಮತವು ಹೇಳುವುದೇ ಹೊರತು ಇತರ ಮತಗಳನ್ನು ದೂಷಿಸುವದಿಲ್ಲ.

ಲಿಂಗಾಯತ ಭಕ್ತರಲ್ಲಿ ಅನೇಕರು ಬ್ರಾಹ್ಮಣರಾಗಿದ್ದರು. (1) ಬಸವನೇ ಸ್ಮಾರ್ತ ಬ್ರಾಹ್ಮಣನಾಗಿ ಹುಟ್ಟಿದನು. (2) ವೃದ್ಧ ಭಟ್ಟಯ್ಯ, (3) ಕೆಂಬಾವಿ ಭೋಗಯ್ಯ, (4) ಹರಿಹರ ಶಿವಾಚಾರಿ, (5) ರಾಘವಾಂಕ ಇವರಲ್ಲದೆ ಇನ್ನೂ ಅನೇಕರಿರುವರು.

ಅನೇಕ ಗ್ರಂಥಗಳಲ್ಲಿ ಲಿಂಗಾಯತರನ್ನು ಅವಮಾನಕರವಾಗಿ ಭಾಷಿಸಿದ್ದಾರೆ. ವಿಶ್ವಗುಣಾದರ್ಶ 254-ನೇ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ.

ಶಂಕರಾಚಾರ್ಯನ ಕಾರ್ಯಗಳನ್ನು ಕುರಿತು ಹೇಳುವ "ಶಂಕರ ದಿಗ್ವಿಜಯ" ವೆಂಬ ಗ್ರಂಥ ಒಂದಿದೆ. ಅದರಲ್ಲಿ ಶೈವರನ್ನು ದೂಷಣೆ ಮಾಡಿದ್ದಾರೆ. ಶಂಕರ ದಿಗ್ವಿಜಯವನ್ನು ಸ್ಮಾರ್ತ ಬ್ರಾಹ್ಮಣರು ಗೌರವಿಸುತ್ತಾರೆ. ಇತರ ವೈಷ್ಣವರ ಮತ ಗ್ರಂಥಗಳಾದ ಮಧ್ವ ವಿಜಯ ಮಣಿ ಮಂಜರಿಯಲ್ಲಿ ಇತರ ಮತಗಳನ್ನು ದೂಷಣೆ ಮಾಡಿದ್ದಾರೆ.

"ಜ್ಞಾನ ದೇವ ಚರಿತ್ರೆ" ಯಲ್ಲಿ ಜ್ಞಾನದೇವನು ವೇದಗಳನ್ನು ಒಂದು ಕೋಣನಿಂದ ಓದಿಸಿದಂತೆ ಹೇಳಿದೆ.

ಸ್ಮಾರ್ತರು ಶಂಕರ ದಿಗ್ವಿಜಯವನ್ನು ಮೆರವಣಿಗೆ ಮಾಡುವುದಕ್ಕಾಗಲಿ ಮಾಧ್ವರು ಮಧ್ವವಿಜಯವನ್ನು ಮೆರವಣಿಗೆ ಮಾಡುವುದಕ್ಕಾಗಲಿ ನಾನು ಆಕ್ಷೇಪಿಸುವದಿಲ್ಲ.

(ಸಹಿ) ಟಿ. ಯಂ. ಚಂದ್ರಶೇಖರಶಾಸ್ತ್ರಿ.

ಕೋರ್ಟಿನಲ್ಲಿ ನಾನು ಹೇಳಿದ್ದನ್ನು ಓದಿ ಒಪ್ಪಿಕೊಂಡು ಸಹಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಿಸ್ಟ್ರೇಟು ರವರ ಕೋರಟ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂ॥ I.

ಕೌಂಟರು ಅರ್ಜಿದಾರರ ಪರ 2-ನೇ ಸಾಕ್ಷಿಯ ಕೈಫಿಯತು.

ಹೆಸರು - ಮಹಂತಸ್ವಾಮಿ, ತಂದೆ ಹೆಸರು - ವಿರುಪಾಕ್ಷಪ್ಪ, ಗ್ರಾಮ - ಕಂಪ್ಲಿ, ತಾಲೂಕು - ಹೊಸಪೇಟೆ, ಮತ - ಲಿಂಗಾಯತ ವೃತ್ತಿ - ಯಿನಾಂದಾರು, ಕುಲ - ಹಿಂದು, ವಯಸ್ಸು 30.

ತಾ॥ 25-2-1916.

1916-ನೇ ಸಂ॥ರ ಫಿಬ್ರವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ಪುರಾಣವನ್ನು ನನ್ನ ಮಠದಲ್ಲಿ ಓದಿದರು. ಆ ಮಠಕ್ಕೆ ನಾನೇ ಅಧಿಪತಿ. ನಾನು ಬ್ರಹ್ಮಚಾರಿ. ಲಿಂಗಾಯಿತರ ಭಕ್ತರಿಗೆ ನಾನು ಭೋದನೆ ಮಾಡುತ್ತೇನೆ. ಸಮಸ್ತ ಲಿಂಗಾಯತ ಭಕ್ತರ ಮೋಕ್ಷ ಸಾಧನೆಗಾಗಿ ಈ ಪುರಾಣವನ್ನು ಓದುವದಕ್ಕೆ ಏರ್ಪಾಟು ಮಾಡಿಸಿದೆನೇ ಆಗಲಿ ಯಿತರ ಮತಸ್ಥರನ್ನು ದೂಷಣೆ ಮಾಡುವದಕ್ಕೆ ಸರ್ವಥಾ ಅಲ್ಲವು. ಇತರ ಮತಸ್ಥರಮೇಲೆ ನನಗೆ ಅಸೂಯವಿಲ್ಲ. ಕಂಪ್ಲಿಯಲ್ಲಿ ಯಿರುವ ಬ್ರಾಹ್ಮಣರಿಗೂ ನನಗೂ ಸ್ನೇಹವಿಲ್ಲ. ಬಸವ ಪುರಾಣವನ್ನು ಕೇಳಲಿಕ್ಕೆ ಯಿತರ ಮತಸ್ಥರನ್ನು ನಾನು ಕರಿಸಲಿಲ್ಲ. ಬಸವ ಪುರಾಣವನ್ನು ಓದುವ ಕಾಲದಲ್ಲಿ ಯಿತರ ಮತಸ್ಥರ ದೂಷಣೆಯನ್ನು ಕುರಿತು ಓದಲಿಲ್ಲ. ನಾನು ರು. 700 ಸರ್ಕಾರು ಹಣವನ್ನು ಕೊಡುತ್ತೇನೆ.

ಸರ್ಕಾರು ಸವಾಲು :—

ಹೋದ ವರುಷ ಕಂಪ್ಲಿಯಲ್ಲಿ ಮಬ್ಬ ಅಲಿಂಗಿಯನ್ನು ಲಿಂಗಾಂಗಿಯಾಗಿ ಮಾಡಿದರು. ಅದಕ್ಕೆ ಹಿಂದಿನ ವರುಷದಲ್ಲಿ ಯಾರನನ್ನು ಮಾಡಲಿಲ್ಲ. ಯಾರನ್ನೇ ಆಗಲಿ ಲಿಂಗಾಯತರ ಮತವನ್ನು ಅವಲಂಭಿಸೆಂದು ಭೋಧಿಸಲಿಲ್ಲ.

ಅಡ್ಡ ಸವಾಲು :—

ಬಸಪ್ಪನನ್ನು ಲಗ್ನ ಮಾಡಿಕೊಂಡಮೇಲೆ ಪುಷ್ಪವತಿ ಪಬ್ಬ ರೆಡ್ಡೇರ ಹೆಣ್ಣುಮಗಳು ಲಿಂಗಧಾರಣ ಮಾಡಿಸಿಕೊಂಡು ಬಸಪ್ಪನ ಲಗ್ನವಾದಳು. ನಾನು ಕಂಪ್ಲಿಯಲ್ಲಿ 15-20 ವರುಷದ ಲಾಗಾಯತು ಯಿದ್ದೇನೆ. ಇತರರು ಯಾರು ಲಿಂಗಾಂಗಿಯಾಗಿರುವದು ನನಗೆ ತಿಳಿಯದು. ವೇದಗಳು ಪವಿತ್ರವಾದ ಪುಸ್ತಕಗಳು. ನಾನು ಯಜುರ್ವೇದವನ್ನು ಸಂಸ್ಕೃತದಲ್ಲಿ ಓದಿದ್ದೇನೆ. ಆ ವೇದದಲ್ಲಿ ನನಗೆ ತಿಳಿದಮಟ್ಟಿಗೆ ವಿಷ್ಣುವಿನನ್ನು ಅಧೋಕ್ಷಜ ಯೆಂದು ಹೇಳಲ್ಪಟ್ಟ ಭಾಗವು ಯಾವದು ಯಿಲ್ಲ. ವೇದಗಳಲ್ಲೇ ಆಗಲಿ ಅಥವಾ ನಾನು ಓದಿದ ಯಾವ ಪುಸ್ತಕಗಳಲ್ಲೇ ಆಗಲಿ ಆಕ್ಷೇಪಣಕರವಾದ ಭಾಗವು ಅಂದರೆ ಯುಗ್ಮಬಿಟ್ಟು ‘ಶಿ’ ವಳಗೆಬರುವದಿಲ್ಲ. ಶಿವ ಭಕ್ತರ ಮನೆಗಳನ್ನು ಕಾಯುವಂಥಾ ನಾಯಿಗಳೇ ಬ್ರಾಹ್ಮಣರೆಂದು ವೇದಗಳಲ್ಲೇ ಆಗಲಿ ಅದವಾ ಯಿನ್ನು ಯಾವ ಪುಸ್ತಕದೊಳಗೇ ಆಗಲಿ ನಾನು ಓದಿಲ್ಲ. ಆಕ್ಷೇಪಣಕರವಾದ ಭಾಗವು ಅಂದರೆ ಯುಗ್ಮಬಿಟ್ಟ ‚ಶಿ’ ಬಸವ ಪುರಾಣದಲ್ಲಿ ಬರುತ್ತದೆ. ಆಕ್ಷೇಪಣಕರವಾದ ಭಾಗವು ಯಿತರ ಯಾವ ಪುಸ್ತಕದಲ್ಲಿ ಯಿದ್ದಂತೆ ನಾನು ನೋಡಿಲ್ಲ. ಕಂಪ್ಲಿವಳಗೆ ಬಸವ ಪುರಾಣದ ಮೆರವಣಿಯನ್ನು ನಾನು ಯಿದುವರೆಗೂ ನೋಡಿಲ್ಲ. ನಮ್ಮ ಮಠದೊಳಗೆ ಗರ್ಭಗುಡಿ ಯಾವದು ಯಿಲ್ಲ. ಪೂಜೆಗಾಗಿ ಬೇರೆ ವಂದು ಕೋಣೆ ವುಂಟು. ಶಿವನ ವಿಗ್ರಹವನ್ನು ಯಿಡುವದಕ್ಕಾಗಿ ಬೇರೆ ಕೋಣೆಯಾವದು ಯಿಲ್ಲ. ಚಲೋ ಮತಸ್ಥರು ಯೆಲ್ಲರು ಬರಬಹುದು. ಮಾದಿಗರಿಗೆ ಮಾತ್ರ ಮನಾಹಿಂಪು. 1 ನೇ ಕೌಂಟರು ಅರ್ಜಿದಾರನು ಹಪ್ಪನಹಳ್ಳಿ ತಾ॥ ಪೈಕಿ ತೆಲಗಿ ಗ್ರಾಮದವರು. ಅಲ್ಲಿ ಯಿವರಿಗೆ ಆಸ್ತಿ ವುಂಟು. ಮೈಸೂರು ಯಿಲಾಖೆ ದಾವನಗೇರಿಯಲ್ಲಿ ಯಿವರಿಗೆ ವಂದು ಮಠ ವುಂಟು. ಮದ್ರಾಸು ಮುಂಬಾಯಿ ಹೈಕೋರ್ಟಿನವರು ಲಿಂಗಾಯುತರನ್ನು ಶೂದ್ರರೆಂದು ನಿರ್ಧರಿಸಲ್ಪಟ್ಟ ಸಂಗತಿ ನನಗೆ ತಿಳಿಯದು. ಲಿಂಗಾಯುತರನ್ನ ವೀರಶೈವ ಬ್ರಾಹ್ಮಣರೆಂದು ನಿರ್ಧರಿಸಲ್ಪಟ್ಟಿದ್ದಕ್ಕಾಗಿ ಮೈಸೂರು ಶೆನ್ಸಸ್ ಕಮಿಷನರ್ ಮೇಲೆ ವಂದು ಶಿವಿಲ್ ದಾವಾ ತಂದ ಸಂಗತಿ ನನಗೆ ತಿಳಿಯದು. ಕಂಪ್ಲಿಯಲ್ಲಿ ಬಸವ ಪುರಾಣವನ್ನು ಓದುವದು ಯಿನ್ನು ಮುಗಿದಿಯಿಲ್ಲ. 3-1-16 ತಾರೀಖಿನಿಂದ ನಿಂದ್ರಿಸಲ್ಪಟ್ಟಿತು. ಬಹಳ ಮಟ್ಟಿಗೆ ಮುಗಿಯುತಿಕ್ಕೆ ಬಂದ ಸಮಯದಲ್ಲಿ ಅರ್ಜಿಯನ್ನು ಕೊಟ್ಟರು. 1-ನೇ ಕೌಂಟರು ಅರ್ಜಿದಾರನು ಆಗಲೆ ಕಂಪ್ಲಿಯಿಂದ ಹೊರಟು ಹೋದನು. ಬಸವ ಪುರಾಣದ ಮೆರವಣಿಗೆಯನ್ನು ಹೊರಡಿಸಲು ಯಿಷ್ಟಪಟ್ಟ ಜನರ ಪೈಕಿ ನಾನೇ ಮುಖ್ಯಸ್ಥನು. ನಾನು ಬಸವ ಪುರಾಣದ ಮೆರವಣಿಗೆಯು ಹೊರಟದ್ದು ನಾನು ಯೆಂದು ನೋಡಿಲ್ಲ. ಆದರೆ ಅನೇಕ ಅಂಥಾ ಮೆರವಣಿಗೆಗಳು ಜರಿಗಿದ್ದು ಕೇಳಬಲ್ಲೆ. ನೈಜಾಂ ಯಿಲಾಖೆಯಲ್ಲಿ ಬಸವ ಪುರಾಣದ ಮೆರವಣಿಗೆಯು ಯಾರು ನಿಂದ್ರಿಸಲಿಲ್ಲ.

ಪುನಃಪ್ರಶ್ನೆ :—

1-ನೇ ಕೌಂಟರು ಅರ್ಜಿದಾರನು ಓದಿದಷ್ಟು ಮತ ಗ್ರಂಥಗಳನ್ನು ನಾನು ಓದಿಲ್ಲ. ಇಂತಹ ಮತಸ್ಥರು ಯಾರು ಬಸವ ಪುರಾಣವನ್ನು ಓದುವಕಾಲದಲ್ಲಿ ಇರಲಿಲ್ಲ. ಬಸವ ಪುರಾಣವು ಮುಗಿಯುವದು ಸ್ವಲ್ಪ ಉಳಿದದ್ದರಿಂದಲೂ, ಮುಗಿದ ಕೂಡ್ಲೇ ಮೆರವಣಿಗೆಯು ಹೊರಡಿಸಬೇಕಾದ್ದರಿಂದಲೂ 3-1-16-ನೇ ತಾರೀಖು ನಿಂದ್ರಿಸಲ್ಪಟ್ಟು ಕೋರ್ಟಿನವರ ವುತ್ತರುವುಗಾಗಿ ನಿರೀಕ್ಷಣೆ ಮಾಡಬೇಕಾಯಿತು. ಉತ್ಸವವನ್ನು ಹೊರಡಿಸುವಂತೆ ಕೋರ್ಟಿನವರು ವುತ್ತರುವು ಕೊಟ್ಟಲ್ಲಿ ಬಸವ ಪುರಾಣವು ಮುಗಿಯುತ್ತದೆ. 1-ನೇ ಕೌಂಟರು ಅರ್ಜಿದಾರನೇ ಈ ಬಸವ ಪುರಾಣವನ್ನು ಮುಗಿಸುವಾತನು.

(ಸಹಿ) ಮಹಂತ ಮಠದ ಮಹಂತಸ್ವಾಮಿಗಳು.

ಕೋರ್ಟಿನಲ್ಲಿ ಹೇಳಿದ ಪ್ರಕಾರ ಬರದಿದ್ದನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟುರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿಯ ನಂಬರು I.

ಕೌಂಟರು ಅರ್ಜಿದಾರರ ಪರ 3-ನೇ ಸಾಕ್ಷಿಯ ಕೈಫಿಯತ್ತು.

ಹೆಸರು- ಕಮ್ಮಾರು ಅಯ್ಯಣ್ಣ. ತಂದೆಯ ಹೆಸರು - ನಾಗಲಿಂಗಪ್ಪ, ಗ್ರಾಮ- ಕಂಪ್ಲಿ, ತಾಲೂಕು ಹೊಸಪೇಟೆ, ಮತ - ಕಮ್ಮಾರ, ವೃತ್ತಿ, ಕಮ್ಮಾರ ಕುಲ-ಹಿಂದು, ವಯಸ್ಸು 26.

ತಾ॥ 25--2--1916.

1916-ನೇ ಸಂ॥ರ ಫೆಬ್ರವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣ ಮಾಡಿಬರ್ಸಿದ ಕೈಫಿಯತ್ತು.

2-ನೇ ಕೌಂಟರು ಅರ್ಜಿದಾರನನ್ನು ನಾನು ಬಲ್ಲೆನು. ಅವರ ಮಠದಲ್ಲಿ ಬಸವ ಪುರಾಣವನ್ನು ಓದಿದರು. ಬಸವ ಪುರಾಣದ ಮೆರವಣಿಗೆಯನ್ನು ಕುರಿತು ನನ್ನ ಆಕ್ಷೇಪಣೆಯಿಲ್ಲ ನನಗೆ ತಿಳಿದ ಮಟ್ಟಿಗೆ ನಮ್ಮ ಮತದವರು ಕೂಡ ಯಾರು ಆಕ್ಷೇಪಣೆ ಮಾಡುವದಿಲ್ಲ ಕಮ್ಮಾರರು, ಪಂಚಾಳರು ಒಂದೇ ಮತಸ್ಥರು. ಇವರ ಮನೆಗಳು ಕಂಪ್ಲಿಯಲ್ಲಿ 15-16 ಯಿರುತ್ತವೆ.

(ಸಹಿ) ಕಮ್ಮಾರ ಅಯ್ಯಪ್ಪ,

ಬಹಿರಂಗವಾದ ಕೋರ್ಟಿನಲ್ಲಿ ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 4-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಅಯಿಕೆಲ್ಲು ಗುರು ಶಿದ್ಧಪ್ಪ, ತಂದೆಯ ಹೆಸರು - ವೃಷಣ್ಣ, ಗ್ರಾಮ - ಕಂಪ್ಲಿ, ತಾಲೂಕು - ಹೊಸಪೇಟೆ, ಮತ - ಲಿಂಗಾಯಿತ, ವೃತ್ತಿ - ವ್ಯಾಪಾರ, ವ್ಯವಸಾಯ, ಕುಲ - ಹಿಂದು, ವಯಸ್ಸು 31.

ತಾ॥ 25--2--1916.

1916-ನೇ ಸಂ॥ರ ಫಿಬ್ರವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

1-2 ಕೌಂಟರು ಅರ್ಜಿದಾರರನ್ನು ನಾನು ಬಲ್ಲೆನು. 2-ನೇ ಕೌಂಟರು ಅರ್ಜಿದಾರರ ಮಠದಲ್ಲಿ ಪುರಾಣವು ಓದುತ್ತಿದ್ದರು. ನಾನು ಕೂಡ ಹೋಗುತ್ತಿದ್ದೆನು. ಅಲ್ಲಿ ಯಿತರ ಮತಸ್ಥರು ಯಾರು ಬರುತ್ತಿದ್ದಿಲ್ಲ. ಭಕ್ತಿಗೋಸ್ಕರವಾಗಿ ಬಸವ ಪುರಾಣವನ್ನು ಓದುತಿದ್ದರು. ಇತರ ಮತಸ್ಥರ ದೂಷಣೆಯು ಯಾವದು ಯಿರುವದಿಲ್ಲ. ಇತರ ಮತಸ್ಥರಿಗೆ ಮನಸ್ಸು ನೊಯ್ಯಿಸಬೇಕೆಂಬದಾಗಿ ಪುರಾಣವು ಓದಲಿಲ್ಲ. ರು. 30 ಯಿನ್‌ಕಂಟ್ಯಾಕ್ಸು, ರು. 120 ಸರ್ಕಾರು ಹಣ ಕೊಡುತ್ತೇನು.

ಅಡ್ಡ ಸವಾಲು:—

ಬಸವ ಪುರಾಣವನ್ನು ಓದುವದಕ್ಕಾಗಿ ನಾನು ಚಂದಾ ಹಣವನ್ನು ಕೊಡಲಿಲ್ಲ. ಕಂಪ್ಲಿಯಲ್ಲಿ 300-400 ಲಿಂಗಾಯತರ ಮನಿಗಳುಂಟು. 1-2 ಕೌಂಟರು ಅರ್ಜಿದಾರರು ಯಾವ ಲಿಂಗಾಯತರಿಗು ಪುರಾಣವನ್ನು ಕೇಳಲು ಬರುವದಕ್ಕಾಗಿ ಬರಹ ಮೂಲಕ ಪತ್ರಿಕೆಗಳನ್ನು ಕಳುಹಿಸಿ ಕರೆಸಲಿಲ್ಲ. ನಾನು ಬಸವ ಪುರಾಣವನ್ನು ಓದಿಲ್ಲ. ನನಗೆ ಪುರಸತ್ತು ಯಿದ್ದ ಕಾಲದಲ್ಲಿ ಪುರಾಣವನ್ನು ಕೇಳಲಿಕ್ಕೆ ಹೋಗುತ್ತಿದ್ದೆನು. ಕಂಪ್ಲಿಯಲ್ಲಿ ಬಸವ ಪುರಾಣದ ಮೆರವಣಿಯು ಆದದ್ದು ನಾನು ನೋಡಿಲ್ಲ.

(ಸಹಿ) ಅಯಿಕಲ್ಲು ಗುರು ಸಿದ್ಧಪ್ಪ,

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್.
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೆಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು 1.

ಕೌಂಟರು ಅರ್ಜಿದಾರರ ಪರ 5-ನೇ ಸಾಕ್ಷಿಯು ಕೈಫಿಯತ್ತು.

ಹೆಸರು - ಪಂಚ ಬಸಪ್ಪ, ತಂದೆ ಹೆಸರು - ವಿರುಪಣ್ಣ, ಗ್ರಾಮ - ಮುದ್ದಾಪುರ, ತಾಲೂಕು - ಹೊಸಪೇಟೆ, ಜಾತಿ - ದೇವಾಂಗ, ವೃತ್ತಿ - ನೇಯಿಕೆ, ಕುಲ - ಹಿಂದು, ವಯಸ್ಸು 60.

ತಾ॥ 25-2-1916.

1916-ನೇ ಸಂ॥ರ ಫಿಬ್ರವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಸಿದ ಕೈಫಿಯತ್ತು.

12 ವರುಷದ ಕೆಳಗೆ ನಮ್ಮ ಪುರದಲ್ಲಿ ಬಸವ ಪುರಾಣವನ್ನು ಓದಿದರು. ತರುವಾಯ ಮೆರವಣಿಗೆ ಕೂಡ ಜರಿಗಿತು. ಇತರ ಮತಸ್ಥರು ಯಾರು ಮೆರವಣಿಗೆಯನ್ನು ಕುರಿತು ಆಕ್ಷೇಪಣೆ ಮಾಡಲಿಲ್ಲ. ಈಗ ನಮ್ಮ ಪುರದಲ್ಲಿ ಬಸವ ಪುರಾಣದ ಮೆರವಣಿ ಹೊರಟ ಪಕ್ಷಕ್ಕೆ ಯಾರು ಆಕ್ಷೇಪಣೆ ಮಾಡುವದಿಲ್ಲ. ನಮ್ಮ ಪುರದಲ್ಲಿ 20 ದೇವಾಂಗದವರ ಮನೆಗಳುಂಟು.

ಅಡ್ಡ ಸವಾಲು.—

12 ವರುಷದ ಕೆಳಗೆ ನಮ್ಮ ಪುರದಲ್ಲಿ 2-3 ತಿಂಗಳವರಿಗೂ ನೀಲಮ್ಮನ ಮಠದಲ್ಲಿ ಬಸವ ಪುರಾಣವನ್ನು ಓದಿದರು. ನಾನು ಪುರಾಣವನ್ನು ಕೇಳಲಿಕ್ಕೆ ಹೋಗಲಿಲ್ಲ. ನಮ್ಮ ಸಂದಿನಲ್ಲಿ ಇರತಕ್ಕ ಅಜು ಬಾಜು ಜನರು ತಾವು ಪುರಾಣವನ್ನು ಕೇಳಿ ಬಸವ ಪುರಾಣವನ್ನು ಓದುತ್ತಾರೆಂಬದಾಗಿ ನನಗೆ ಹೇಳಿದ್ದರಿಂದ ಓದುದ್ದು ಬಸವ ಪುರಾಣವೆಂದು ನನಗೆ ತಿಳಿಯು ಬಂತು. ಮೆರವಣಿ ಪಲ್ಲಕ್ಕಿ ಮೆರವಣಿ ಆಗಿತ್ತು. ಪಾಲಿಕಿವಳಗೆ ಯಾವದಾದರು ಮೂರ್ತಿ ಅಥವಾ ಪುಸ್ತಕವಾದರು ಕೂತಿದ್ದರೋ ನನಗೆ ನೋಡಲಿಕ್ಕಾಗಲಿಲ್ಲ. ನಮ್ಮಗೂ ಲಿಂಗಾಯುತರಿಗೂ ಮನಸ್ತಾಪ ವುಂಟು. ಮೆರವಣಿ ನಮ್ಮ ಕೇರಿವಳಗೆ ಹೋಗಲಿಲ್ಲ. ಅದರ ಬಜಾರದಲ್ಲೇ ಹೋಯಿತು. 35 ವರುಷದ ಕೆಳಗೆ ಕಂಪ್ಲಿಯಲ್ಲಿ ಲಿಂಗಾಯುತರಿಗೂ, ದೇವಾಂಗದವರಿಗೂ ಅದ್ಭುತ ಅಲ್ಲರಿ ಜರುಗಿತು. ಲಿಂಗಾಯುತರ ದೇವರ ಮೆರವಣಿಯು ದ್ಯಾಗಳವೇ ಅಲ್ಲರಿಗೆ ಕಾರಣ.

ನಮ್ಮ ಗ್ರಾಮದಲ್ಲಿ 10-11 ವರುಷಗಳ ಕೆಳಗೆ ಬಸವ ಪುರಾಣದ ಮೆರವಣಿ ಜರಿಗಿತು. ಬಸವ ಪುರಾಣ ಓದುವದನ್ನು ನಾನು ಕೇಳಲಿಲ್ಲ. ಮೆರವಣಿಯನ್ನು ಕುರಿತು ಆಕ್ಷೇಪಣೆ ಬರಲಿಲ್ಲ, ಬಸವಣ್ಣನ ಗುಡಿಯಿಂದ ನೀಲಮ್ಮನ ಮಠದವರಿಗೂ ಮೆರವಣಿ ಮಾಡಿದರು.

ಅಡ್ಡ ಸವಾಲು.—

ನಮ್ಮ ಗ್ರಾಮದಲ್ಲಿ ನನ್ನದು ಒಂದೇ ಬಡಿಗೇರ ಮನಿ. ನಾನು ಲಿಂಗಾಯತನಲ್ಲ. ಬಸವ ಪುರಾಣವನ್ನು 2-3 ತಿಂಗಳು ಓದಿದರು. ಬಸವ ಪುರಾಣವನ್ನು ಕೇಳಲಿಕ್ಕೆ ಹೋದ ಅಜು ಬಾಜು ಜನಗಳಿಂದ ಬಸವ ಪುರಾಣವನ್ನು ಓದುತ್ತಾರೆಂದು ಕೇಳಿದೆನು. ಪಲ್ಲಕ್ಕಿ ಮೆರವಣಿ ನಡಿಯಿತು. ಪಲ್ಲಕ್ಕಿ ವಳಗೆ ಪುರಾಣದ ಪುಸ್ತಕಗಳು ಯಿಟ್ಟಾರೆಂದು ಲಿಂಗಾಯತರು ಹೇಳಿದರು. ಮೆರವಣಿ ಕಾಲದಲ್ಲಿ ಪೋಲೀಸಿನವರು ಯಾರು ಯಿದ್ದಿಲ್ಲ. ಆ ಊರು ಗೌಡನು ಹಾಜರಾಗಿದ್ದನು. ಆತನು ಲಿಂಗಾಯತ ಮತಸ್ಥನು. ಆ ಊರು ಶಾನಭೋಗನು 18 ವರುಷದ ಲಾಗಾಯತು ಆ ಗ್ರಾಮದಲ್ಲೇ ಯಿದ್ದಾನೆ. ಈತನು ಬ್ರಾಹ್ಮಣನು.

ಪುನರ್ವಿಮರ್ಶ:—

ಮೆರವಣಿ ಕಾಲದಲ್ಲಿ ಹಾಲಿ ಶಾನಭೋಗನ ತಂದೆಯು ಬದುಕಿದ್ದನು.

(ಸಹಿ) ಬಡಿಗೇರವೀರಪ್ಪಣ್ಣ,

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲೈನ್.
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಲೇನಿಯಸ್ ಅರ್ಜಿಯ ನಂಬರು I.

ಕೌಂಟರು ಅರ್ಜಿದಾರರ ಪರ 7-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಕಟ್ಟೆ ನಾಗಪ್ಪ. ತಂದೆಯ ಹೆಸರು - ವೀರಪ್ಪ, ಗ್ರಾಮ - ಮುದ್ದಾಪುರ, ತಾ॥ ಹೊಸಪೇಟೆ, ಮತ - ಕಬ್ಬೇರ, ವೃತ್ತಿ - ವ್ಯವಸಾಯ ಕುಲ - ಹಿಂದೂ, ವಯಸ್ಸು 35.

ತಾ॥ 25-2-1916.

1916-ನೇ ಸಂ॥ರ ಫೆಬ್ರವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣಮಾಡಿ ಬರೆಸಿದ ಕೈಫಿಯತ್ತು.

10-11 ವರುಷದ ಕೆಳಗೆ ಬಸವ ಪುರಾಣವನ್ನು ನಮ್ಮ ಗ್ರಾಮದಲ್ಲಿ ಓದಿದರು. ಆ ಪುರಾಣದ ಮೆರವಣಿಗೆಯು ಬಸವಣ್ಣ ಗುಡಿಯಿಂದ ನೀಲಮ್ಮನ ಮಠದವರಿಗೂ ಮಾಡಿದರು. ಮೆರವಣಿಗೆಯನ್ನು ಕುರಿತು ಯಾರು ಆಕ್ಷೇಪಣೆ ಮಾಡಲಿಲ್ಲ. ನಮ್ಮ ಮತದವರ ಮನೆಗಳು ಸುಮಾರು 40 ಮನೆಗಳಿವೆ.

ಅಡ್ಡ ಸವಾಲು:—

ಬಸವ ಪುರಾಣವನ್ನು 3 ತಿಂಗಳವರಿಗೂ ಓದಿದರು. ನಾನು ಆಗ್ಯಾಗ್ಗೆ 2-3 ಸಾರಿ ಪುರಾಣವನ್ನು ಕೇಳಲಿಕ್ಕೆ ಹೋಗಿದ್ದೆನು. ನಾನು ಲಿಂಗಾಯತ ಮತಸ್ಥನಲ್ಲ. ನಾನು ಪುರಾಣವನ್ನು ಕೇಳಲು ಹೋಗುವ ಕಾಲಕ್ಕೆ ಯಾರು ಆಕ್ಷೇಪಣೆ ಮಾಡಲಿಲ್ಲ. ನಾನು ಇತರ ಕಬ್ಬೇರ ಮತಸ್ಥರನ್ನು ಯಾರನ್ನು ನೋಡಲಿಲ್ಲ. ನಮ್ಮ ಊರಲ್ಲಿರುವ ಕಬ್ಬೇರು ಲಗ್ನ ಕಾಲಗಳಲ್ಲಿ ಗಂಗಾದೇವಿಯನ್ನು ಪೂಜೆ ಮಾಡುವದಕ್ಕಾಗಿ ಬಸವಣ್ಣ ಗುಡಿಗೆ ಹೋಗುತ್ತಾರೆ. ಬಸವ ಪುರಾಣದಲ್ಲಿ ಏನು ಓದಿದ್ದು ಅಥವಾ ಯಾರು ಓದಿದ್ದು ಹೇಳಲು ನನಗೆ ಜ್ಞಾಪಕ ಸಾಲದು. ಒಬ್ಬ ಓದಿದಾತನು ವೃತ್ತರಾದಿಯಾಗಿರಬಹುದು. ಪುರಾಣವನ್ನು ಓದಿದಾತನು 1-ನೇ ಕೌಂಟರು ಅರ್ಜಿದಾರನು. ಬಸವ ಪುರಾಣವನ್ನು ಪಲ್ಲಕ್ಕಿ ಒಳಗೆ ಮೆರವಣಿಗೆಮಾಡಿದರು. ಪಲ್ಲಕ್ಕಿ ಒಳಗೆ 2 ಪುಸ್ತಕಗಳು ಇದ್ದಂತೆಯು ಪಲ್ಲಕಿ ಮೇಲೆ ಪುಷ್ಪಗಳು ಚೆಲ್ಲಿದಂತೆಯು ಕಾಣಿಸಿದವು. ಬಾಜಾ ಬಜಂತ್ರಿಕೂಡ ಇತ್ತು, ಮೆರವಣಿಗೆಯನ್ನು ಹೊರಡಿಸುವದಕ್ಕೆ

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 9-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಬುರ್ರೆ ಬಸಪ್ಪ, ತಂದಿಯ ಹೆಸರು - ಭೀಮಪ್ಪ, ಗ್ರಾಮ - ಮುದ್ದಾಪುರ, ತಾಲೂಕು - ಹೊಸಪೇಟೆ, ಮತ - ಗೊಲ್ಲ, ವೃತ್ತಿ - ವ್ಯವಸಾಯ, ಕುಲ - ಹಿಂದು, ವಯಸ್ಸು 45.

ತಾ॥ 25-2-1916.

1916-ನೇ ಸಂ॥ರ ಫೆಬ್ರುವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಸಿದ ಕೈಫಿಯತ್ತು.

ನಾನು 60 ರೂಪಾಯಿ ಸರ್ಕಾರು ಹಣ ಕೊಡುತ್ತೇನೆ. ಮುದ್ದಾಪುರ ಗ್ರಾಮದಲ್ಲಿ ನಮ್ಮ ಮತದವರ ಮನಿಗಳು 20 ಕಿಂತಲು ಜಾಸ್ತಿ ಯಿರಬಹುದು. 12 ವರುಷಕೆಳಗೆ ನೀಲಮ್ಮನ ಮಠದಲ್ಲಿ ಬಸವ ಪುರಾಣವನ್ನು ಓದಿದರು. ಬಸವಣ್ಣನ ಗುಡಿಯಿಂದ ಮಠದವರಿಗೂ ಮೆರವಣಿ ಮಾಡಿದರು. ಇತರ ಮತಸ್ಥರಿಂದ ಆಕ್ಷೇಪಣೆ ಮಾಡಿದ ಸಂಗತಿ ನನಗೆ ತಿಳಿಯದು.

ಅಡ್ಡ ಸವಾಲು :—

ನಾವು ನೀಲಮ್ಮನನ್ನು ಬಸವಣ್ಣನನ್ನು ಪೂಜಿಸುತ್ತೇವು. ನಮ್ಮ ಕುಲದೇವರು ಆಂಜನೇಯಸ್ವಾಮಿ. ಈ ಎರಡು ದೇವರುಗಳ ಪೂಜಾರಿ ಲಿಂಗಾಯತ ಮತಸ್ಥನು. ನಾನು ಲಿಂಗಾಯತನಲ್ಲ. ನೀಲಮ್ಮನ ಮಠದೊಳಗೆ ಓದಿದ ಬಸವ ಪುರಾಣವನ್ನು ನಾನು ಕೇಳಲಿಕ್ಕೆ ಹೋಗಲಿಲ್ಲ. 40 ಗಜ ದೂರದಲ್ಲಿ ನಿಂತು ನಾನು ಮೆರವಣಿಯನ್ನು ನೋಡಿದೆನು. ಪಾಲಿಕಿಯನ್ನು ಯಾರು ಹೊತ್ತಿದ್ದರೋ ನನಗೆ ತಿಳಿಯದು. ಮಧ್ಯರಾತ್ರಿಯಲ್ಲಿ ಮೆರವಣಿ ಜರಿಗಿತು. ಪಾಲಕಿ ವಳಗೆ ಯೇನು ಯಿಟ್ಟಿದ್ದನ್ನು ನಾನು ನೋಡಲಿಲ್ಲ.

ಪುನರ್ವಿಮರ್ಶೆ:— ಯಿಲ್ಲ.

(ಸಹಿ) ಬಸಪ್ಪ.

ಕೋರ್ಟಿನಲ್ಲಿ ಹೇಳಿದ ಪ್ರಕಾರ ಬರದಿದ್ದನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಬಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 10-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ರಾರಾವಿ ಭೀಮಸೇನಪ್ಪ, ತಂದೆ ಹೆಸರು - ಅಯ್ಯಪ್ಪ. ಗ್ರಾಮ ತುರುವಿಹಾಳು, ತಾಲೂಕು - ಸಿನ್ನೂರು, ಹೈದರಾಬಾದು ಯಿಲಾಖೆ, ಮತ - ವೈಶ್ಯ. ವೃತ್ತಿ - ವ್ಯಾಪಾರ, ಕುಲ - ಹಿಂದು, ವಯಸ್ಸು 50.

ತಾ॥ 25--2--1916.

1916 ನೇ ಸಂ॥ರ ಫೆಬ್ರವರಿ 25-ನೇ ತೇದಿ 1873 ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

20-25 ವರುಷದ ಕೆಳಗೆ ನಮ್ಮ ವೂರಲ್ಲಿ ಬಸವ ಪುರಾಣವನ್ನು ಓದಿದರು. ಬಾಲಬಸಪ್ಪನ ಮಠದಲ್ಲಿ ಓದಿದರು. ಮಠದಿಂದ ವೂರು ಬಾಗಲವರಿಗೂ ಮೆರವಣಿ ಮಾಡಿದರು. ಯಾವ ಮತಸ್ಥರಿಂದಲೂ ಆಕ್ಷೇಪಣೆ ಬರಲಿಲ್ಲ.

ಅಡ್ಡ ಸವಾಲು:—

ತುರುವಿಹಾಳುನಲ್ಲಿ 700 ಮನೆಗಳುಂಟು. ನಾನು ಅದೇ ಗ್ರಾಮದಲ್ಲಿ ಯಿನ್ನು ಕಾಪುರ ಮಾಡುತ್ತೇನೆ. ಕಂಪ್ಲಿ ಗ್ರಾಮಕ್ಕೆ ವಂದು ಮೈಲು ಧೂರದಲ್ಲಿರುವ ಅಯೋಧ್ಯದಲ್ಲಿ ಕೂಡ ಯಿರುತ್ತೇನೆ. ತುರುವಿಹಾಳುನಲ್ಲಿ ಆಗಲಿ ಅಥವಾ ಅಯೋಧ್ಯದಲ್ಲಿ ಆಗಲಿ ನಾನು ಯಾರಿಗೂ ಸಾಲಯಿಲ್ಲ. ಕಂಪ್ಲಿ ಗ್ರಾಮದಲ್ಲಿ ಕೂಡ ನಾನು ಯಾರಿಗೂ ಬಾಕಿಯಿಲ್ಲ. ಕಂಪ್ಲಿವಳಗೆ ಅಂಗಡಿಯವರ ಸಂಗಡ ಸ್ವಲ್ಪ ವ್ಯಾಪಾರ ವುಂಟು.

ನನ್ನ ವ್ಯಾಪಾರದ ಬಂಡವಾಲ ರು. 50 ಅಥವಾ ರು. 100. ತಿಂಗಳಿಗೆ 5-6 ರೂಪಾಯಿ ವ್ಯಾಪಾರದಿಂದ ಸಂಪಾದನೆ ಮಾಡುತ್ತೇನೆ. ಕಂಪ್ಲಿಗೂ ತುರುವೀಹಾಳಿಗೂ 25 ಮೈಲು ದೂರ ಫಾಸಲೆ. ನಶಿಪುಡಿ ಗಡ್ಡೆಪ್ಪನು ನನ್ನನ್ನು ಕೋರ್ಟಿಗೆ ಕರಕೊಂಡು ಬಂದನು. ಆತನ ಬಂಡಿವಳಗೆ ಬಂದೆನು. ಯಿದಕ್ಕಾಗಿ ಆತನ ಸಂಗಡ ಏನು ಯಿಸಕೊಂಡಿಲ್ಲ. ಆತಗೆ ಉಪಕಾರಾರ್ಥವಾಗಿ ಬಂದೆನು. ಬಸವ ಪುರಾಣ

20-25 ವರುಷದ ಕೆಳಗೆ ನಮ್ಮ ಗ್ರಾಮದಲ್ಲಿ ಬಸವ ಪುರಾಣವನ್ನು ಓದಿದರು ಚನ್ನನಗೌಡನ ಮನಿಯಲ್ಲಿ ಓದಿದರು. ಕೋರ್ಟಿನಿಂದ [illegible] ನೋಟೀಸು [illegible]. ಯಾವ ಮತಸ್ಥರಿಂದಲೂ, ಆಕ್ಷೇಪಣೆ ಬರಲಿಲ್ಲ. ನಮ್ಮ ಊರಲ್ಲಿ 200 ಮನಿಗಳಿವೆ. ಅದರ ಪೈಕಿ 30 ಲಿಂಗಾಯುತರ ಮನಿಗಳಿವೆ. ಗ್ರಾಮದೊಳಗೆ ಬ್ರಾಹ್ಮಣರು, ಬ್ಯಾಡರು, ಕಬ್ಬೇರು, ವೈಶ್ಯರು, ಬಣಿಗೇರು ಯಿದ್ದಾರೆ. ಈ ಜನರ ಪೈಕಿ ಯಾರು ಆಕ್ಷೇಪಣೆ ಮಾಡಲಿಲ್ಲ.

ಅಡ್ಡ ಸವಾಲು:—

ನಮ್ಮ ಗ್ರಾಮದೊಳಗೆ ಒಂದು ಬ್ರಾಹ್ಮಣರ ಮನಿ ಅದೆ. ಅದೇ ಶಾನಭೋಗರ ಮನಿ, ಹಾಲಿ ಕರಣಂ ಗುಮಾಸ್ತ ಲಿಂಗಾಯುತನು. ಹಿಂದಲ ಶಾನಭೋಗನು ಮುದ್ದಾಪುರದಲ್ಲಿ ಕಾಪುರ ಮಾಡುತ್ತಾನೆ. ಪ್ರಕೃತ ನಮ್ಮ ಊರು ಒಳಗೆ ಯಾರು ಬ್ರಾಹ್ಮಣರು ಯಿಲ್ಲ. ಯಾವ ಕನ್ನಡ ವರುಷದಲ್ಲಿ ಪುರಾಣವನ್ನು ಓದಿದರೋ ನನಗೆ ಜ್ಞಾಪಕವಿಲ್ಲ. ನಾನು ಪ್ರತಿದಿನ ಹೋಗುತ್ತಿದ್ದನು. ಸ್ವಂತಂ ಯಿಲಾಖೆ ಪೈಕಿ ಬೆನ್ನೂರು ಗ್ರಾಮದ ನೈನಯ್ಯನವರು, ಬಸವ ಪುರಾಣವನ್ನು ಓದಿದರು. ಅವರು ಈಗ ಮೃತಪಟ್ಟಿದ್ದಾರೆ. ಈದಿನ ಚನ್ನನಗೌಡನು ಸಾಕ್ಷಿಯಾಗಿ ಬಂದಿದ್ದಾನೆ. 20-25 ವರುಷದ ಕೆಳಗೆ ಬಸವ ಪುರಾಣವನ್ನು ಓದಿದ ಕಾಲದಲ್ಲಿ ನಾವು ಯಲ್ಲರು ಚಂದಾ ಹಾಕಿದಿವಿ. ಮೆರವಣಿಗೆ ಕಾಲಕ್ಕೆ ಪೋಲೀಸಿನವರು ಯಾರು ಯಿದ್ದಿಲ್ಲ. ಗ್ರಾಮ ಮೇಜಸ್ಟ್ರೇಟು ಹಾಜರು ಆಗಿದ್ದನು. 4-ನೇ ಕೌಂಟರು ಅರ್ಜಿದಾರನು ನನ್ನನ್ನು ಯಿಲ್ಲಿ ಕರಕೊಂಡು ಬಂದನು.

ಪುನರ್ವಿಮರ್ಶನ:—

ಕರಣಂ ಸ್ವಾಮಿರಾವು (ಬ್ರಾಹ್ಮಣ) ಪುರಾಣವನ್ನು ಓದುವ ಕಾಲಕ್ಕೆ ಆ ಊರಲ್ಲಿದ್ದನು.

(ಸಹಿ) ಕಲ್ಯಾಣಿ ಕಲ್ಯಾಣಪ್ಪ,

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಪಿ. ಪಿ. [illegible]
ಜಾಯಿಂಟ್ ಮಾಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಸ್ಟ್ರೇಟುರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 12-ನೇ ಸಾಕ್ಷಿಯು ಕೈಫಿಯತ್ತು.

ಹೆಸರು - ಚನ್ನನಗೌಡು, ತಂದೆ ಹೆಸರು - ಬಸವನಗೌಡು, ಗ್ರಾಮ - ಬೆಳಗೋಡುಹಾಳು ತಾ॥ ಹೊಸಪ್ಯಾಟೆ, ಮತ - ಲಿಂಗಾಯತ, ವೃತ್ತಿ - ವ್ಯವಸಾಯ, ಕುಲ - ಹಿಂದು, ವಯಸ್ಸು 60.

ತಾ। 25--2--1916.

1916 ನೇ ಸಂ॥ರ ಫೆಬ್ರವರಿ 25-ನೇ ತೇದಿ 1873 ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

500-600 ರೂಪಾಯಿ ಸರ್ಕಾರು ಹಣ ಕೊಡುತ್ತೇನಿ. ನಮ್ಮ ಮನಿ ಪಳಿ ಅಂಗಳದೊಳಗೆ 20-21 ವರುಷದ ಕೆಳಗೆ ಬಸವ ಪುರಾಣವನ್ನು ಓದಿದೆರು. ಹನುಮಂತ ದೇವರ ಗುಡಿಯಿಂದ ಬಸವಣ್ಣ ದೇವರ ಗುಡಿವರಿಗೂ ಮೆರವಣಿ ಮಾಡಿದರು. ಆಕ್ಷೇಪಣೆ ಯಾವದೂ ಯಿರಲಿಲ್ಲ.

ಅಡ್ಡ ಸವಾಲು :—

ಕಂಪ್ಲಿ ಭೂಪಾ ಭೀಮರಾಯನನ್ನು ನಾನು ಬಲ್ಲೆನು. ಮೆರವಣಿ ನಡೆದ ಕಾಲಕ್ಕೆ ಆತನು ಶಾನಭೋಗನಾಗಿದ್ದಿಲ್ಲ. ಸ್ವಾಮಿರಾವು ಶಾನಭೋಗನಾಗಿದ್ದನು. ಆತನು 5-6 ವರುಷದ ಕೆಳಗೆ ಮೃತಪಟ್ಟನು. ಮೆರವಣಿ ನಡದ ಕಾಲದಲ್ಲಿ ಭೀಮನಗೌಡನು ಗ್ರಾಮ ಮೇಜಸ್ಟ್ರೀಟು ಆಗಿದ್ದನು. ಅವನು ನಮ್ಮ ದಾಯಾದಿ. ಕಂಪ್ಲಿಗೂ ನಮ್ಮ ಊರಿಗೂ 2 ಮೈಲು ದೂರ. ಕಂಪ್ಲಿ ಪೋಲೀಸಿನವರ ಕಡೆಯಿಂದ ಮೆರವಣಿ ಕೊಡುವದಕ್ಕೆ ನಾವು ಉತ್ತರವನ್ನು ಹೊಂದಲಿಲ್ಲ. ಗ್ರಾಮ ಮೇಜಿಸ್ಟ್ರೀಟನ ದೈರಿಯಲ್ಲಿ ಯಿದನ್ನು ಕುರಿತು ದಾಖಲೇ ಮಾಡಿದ ಸಂಗತಿ ನನಗೆ ತಿಳಿಯದು. ಹಾಲಿ ಕೆಲಸದಲ್ಲಿರುವ ಗ್ರಾಮ ಮೇಜಸ್ಟ್ರೀಟು ಭೀಮನಗೌಡನ ಮೊಮ್ಮಗ. ಈ ದಿನ ಆತನು ಯಿಲ್ಲಿಗೆ (ಹೊಸಪ್ಯಾಟೆ) ಬಂದಿಲ್ಲ.

ಪುನರ್ವಿಮರ್ಶನೆ:—

ಮೆರವಣಿಯನ್ನು ಕುರಿತು ಡೈರಿವಳಗೆ ದಾಖಲು ಮಾಡಬೇಕೆಂಬದಾಗಿರುವ ರೂಲ್ಸುಗಳು ನನಗೆ ತಿಳಿಯದು.

(ಸಹಿ) ಚನ್ನನಗೌಡ,

ಬಹಿರಂಗವಾದ ಕೋರ್ಟಿನಲ್ಲಿ ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿ ಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೇಜಸ್ಟ್ರೇಟು ರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂ॥ I.

ಕೌಂಟರು ಅರ್ಜಿದಾರರ ಪರ 13-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಪೊಂಪನಗೌಡ, ತಂದೆ ಹೆಸರು - ಗೂಳನಗೌಡ, ಗ್ರಾಮ - ಬೆಳಗೋಡುಹಾಳು, ತಾ॥ - ಹೊಸಪೇಟೆ, ಮತ - ಲಿಂಗಾಯತ, ವೃತ್ತಿ - ವ್ಯವಸಾಯ, ಕುಲ - ಹಿಂದು, ವಯಸ್ಸು 37.

ತಾ॥ 25-2-1916.

1916-ನೇ ಸಂ॥ರ ಫಿಬ್ರುವರಿ 25-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣ ಮಾಡಿ ಬರಿಸಿದ ಕೈಫಿಯತ್ತು.

ಷುಮಾರು 20 ವರುಷದ ಕೆಳಗೆ ನಮ್ಮ ಗ್ರಾಮದಲ್ಲಿ ಬಸವ ಪುರಾಣವನ್ನು ಓದಿದರು. ತರುವಾಯ ಈಶ್ವರ ದೇವಾಲಯದಿಂದ ಬಸವಣ್ಣನ ಗುಡಿವರಿಗೂ ಮೆರವಣಿ ಮಾಡಿದರು. ಯಾವ ಆಕ್ಷೇಪಣೆಯು ಬರಲಿಲ್ಲ. ನಾನು ರು. 100 ಸರ್ಕಾರು ಕಣ ಕೊಡುತ್ತೇನು.

ಅಡ್ಡ ಸವಾಲು.—

ಯಾವ ವರುಷದಲ್ಲಿ ಬಸವ ಪುರಾಣದ ಮೆರವಣಿ ಮಾಡಿದ್ದು ನಾನು ಸರಿಯಾಗಿ ಹೇಳಲಾರೆ. ನಮ್ಮ ತಂದೆಯು ಚಂದಾ ಕೊಟ್ಟದ್ದು ನನಗೆ ತಿಳಿಯದು. ಮೆರವಣಿ ಕಾಲದಲ್ಲಿ ಪೋಲೀಸಿನವರು ಬಂದೋಬಸ್ತಿಗೆ ಬಂದ ಸಂಗತಿ ನನಗೆ ತಿಳಿಯದು.
ಪುನರ್ವಿಮರ್ಶೆ:— ಇಲ್ಲ.

(ಸಹಿ) ಪೊಂಪನಗೌಡ,

ಬಹಿರಂಗವಾದ ಕೋರ್ಟಿನಲ್ಲಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್.
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916 ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 14-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಪುಳ್ಳೀಗದ್ದಿ ಕಲ್ಲು ಮಟ್ಟೆಪ್ಪ. ತಂದೆಯ ಹೆಸರು - ವೀರಭದ್ರಪ್ಪ, ಗ್ರಾಮ - ಚಿತ್ತವಾಡಗಿ, ತಾ॥ ಹೊಸಪೇಟೆ, ಮತ- ಲಿಂಗಾಯತ, ವೃತ್ತಿ-ವ್ಯಾಪಾರ, ಮುನಿಸಿಪಲ್ ಕೌನ್ಸಿಲರು, ಕುಲ - ಹಿಂದು, ವಯಸ್ಸು 60.

ತಾ॥ 26-2-1916.

1916-ನೇ ಸಂ॥ರ ಫಿಬ್ರವರಿ 26-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

ನಾನು ರು. 1000 ಸರ್ಕಾರದ ಹಣ ಮತ್ತು ರು. 118 ಯಿನಕಂಟ್ಯಾಕ್ಸು
ಕೊಡುತ್ತೇನೆ. 14-15 ವರುಷದ ಕೆಳಗೆ ನಮ್ಮ ಗ್ರಾಮದಲ್ಲಿರುವ ಕಲ್ಲು ಮಟ್ಟೆಪ್ಪನ
ಗುಡಿವಳಗೆ ಬಸವ ಪುರಾಣವನ್ನು ಓದಿದರು. ತರುವಾಯ ಊರಿನ ಸಮೀಪಕ್ಕೆ
ಮುಕ್ಕಾಲು ಮೈಲು ದೂರದಲ್ಲಿರುವ ವಂದು ಗುಡಿ ಯಿಂದ ಮಠದವರಿಗೂ ಮೆರ
ವಣಿಯು ಮಾಡಿದರು. ಇತರ ಮತಸ್ಥರು ಯಾರು ಆಕ್ಷೇಪಣೆ ಮಾಡಲಿಲ್ಲ. ಆಗ್ಗೆ 8
10 ಬ್ರಾಹ್ಮಣರ ಮನಿಗಳು ಯಿದ್ದವು. ಬ್ರಾಹ್ಮಣನೇ ಆ ಗ್ರಾಮದ
ಮೇಜಸ್ಟ್ರೇಟು. ಸುಮಾರು 80 ಲಿಂಗಾಯತರ ಮನಿಗಳು 30 ವೈಶ್ಯರು ಮನಿಗಳು
5-6 ರಂಗಾರೆ ಮನಿಗಳು 40-50 ಕುರುಬರವು 50 ತುರಕರ ಮನಿಗಳು
ಯಿದ್ದವು. ಮೂರು ತಿಂಗಳವರಿಗೂ ಪುರಾಣವನ್ನು ಓದಿದರು. ಪುರಾಣ
ವನ್ನು ಓದಿದ ಮೇಲೆ ಆ ಪುರಾಣದ ಮೆರವಣಿಯನ್ನು ಮಾಡದೆ ಯಿದ್ದರೆ ಅಮಂಗಳ
ಕರವು, ಚಿತ್ತವಾಡಿಗಿಯಲ್ಲಿ ಬಸವ ಪುರಾಣವನ್ನು ಓದಿದ ತರುವಾಯ ಸುಮಾರು
2-3 ವರುಷದ ಮೇಲೆ ಹೊಸಪೇಟಿವಳಗೆ ಬಸವ ಪುರಾಣವನ್ನು ಓದಿದರು. ಹೊಸ
ಪ್ಯಾಟಿವಳಗೆ 2-3 ತಿಂಗಳವರಿಗೂ ಓದಿದರು. ಮರಿ ಚನ್ನಪ್ಪನ ಮಠದಲ್ಲಿ ಓದಿದರು.
ಹೊಸಪ್ಯಾಟಿ ಬಜಾರದಲ್ಲಿ ಮಠದಿಂದ ಮೆರವಣಿ ಮಾಡಿದರು. ಈ 2 ಮೆರವಣಿ
ಯಲ್ಲಿಯು ಬಸವ ಪುರಾಣದ ಪುಸ್ತಕವನ್ನು ಪಾಲಿಕಿಯಲ್ಲಿಟ್ಟು ಮೆರವಣಿ ಮಾಡಿದರು.

ಅಡ್ಡ ಸವಾಲು :—

ನಾನು ಯಾರಿಗೂ ಬಾಕಿ ಯಿಲ್ಲ. ನಾಲ್ಕು ವರುಷದ ಕೆಳಗೆ ಚಿತ್ತವಾಡಿಗಿಯಲ್ಲಿ
ಅಡ್ಡಪಾಲಿಕಿಯನ್ನು ಹೊರಡಿಸಬೇಕೆಂಬ ಸಲಹವಿತ್ತು. ಹೊಸಪ್ಯಾಟಿ, ಚಿತ್ತವಾಡಗಿ
ಬ್ರಾಹ್ಮಣರು ಆಕ್ಷೇಪಣೆ ಮಾಡಿದರು. ಆ ವ್ಯಾಜ್ಯವು ಯಿನ್ನು ಹೈಕೋರ್ಟಿನಲ್ಲಿ ನಡಿ
ಯುತ್ತದೆ. ಬಸವ ಪುರಾಣದ ಮೆರವಣಿಯನ್ನು ಕುರಿತು ಪೋಲೀಸಿನವರ ಕಡಿ
ಯಿಂದ ನಾವು ಹುಕುಂ ತರಲಿಲ್ಲ. ಬಸವ ಪುರಾಣದ ಮೆರವಣಿ ಮಾಡಿದಂತೆ ಬರಹ
ಮೂಲಕವಾದ ಆಧಾರವು ಯಾವದು ಯಿಲ್ಲ. ಆ ಕಾಲದಲ್ಲಿ ಚಿತ್ತವಾಡಿಗಿಯಲ್ಲಿ
ಬ್ರಾಹ್ಮಣ ಮತಸ್ಥನಾದ ಸೂರಪ್ಪನು ಗ್ರಾಮ ಮೇಜಸ್ಟ್ರೇಟು ಆಗಿದ್ದನು ಪ್ರತಿ
ಮೆರವಣಿ ಹೊರಡಿಸುವದಕ್ಕೆ ಪೋಲೀಸಿನವರ ವುತ್ತರವು ಹೊಂದುವದು ವಾಡಿಕೆ
ಯಲ್ಲಿ ಯಿಲ್ಲ. ಮೆರವಣಿಯು ರಾತ್ರಿ 8-9 ಘಂಟೆ ಮಧ್ಯಕಾಲದಲ್ಲಿ ಜರಿಗಿತು. ಚಿತ್ತ
ವಾಡಿಗೆ ವಳಗೆ ಕಲ್ಲು ಮಟ್ಟೆಪ್ಪನ ತೇರು ನಾವು ಮಾಡುತ್ತೇವೆ. ಪೋಲೀಸಿನವರು
ಆ ಜಾತ್ರಿಗೆ ಬಂದೋಬಸ್ತಿಗೆ ಬರುತ್ತಾರೆ. ನಾನು ಶಾಸ್ತ್ರಿ ಅಲ್ಲ ಆದಕಾರಣ
ಬಸವ ಪುರಾಣ ದೊಳಗಿನ ಸಂಗತಿ ನನಗೆ ತಿಳಿಯದು. ಪುರಾಣವನ್ನು ಓದಿದ
ಮೇಲೆ ಮೆರವಣಿ ಹೊರಡಿಸದೆ ಯಿದ್ದರೆ ಅಮಂಗಳಕರವೆಂದು ನಮ್ಮ ಮತ ಗ್ರಂಥ
ಗಳಲ್ಲಿ ಯಿರೋ ಸಂಗತಿ ನನಗೆ ತಿಳಿಯದು. ಬಸವ ಪುರಾಣದಲ್ಲಿ ಮೆರವಣಿಯನ್ನು
ಕುರಿತು ಯಾವದು ಯಿಲ್ಲ.

ಪ್ರಶ್ನೆಮಾರ್ಗನೆ :—

ಬಸವ ಪುರಾಣದಲ್ಲಿ ಯಾವ ಯಾವ ಕಥೆಗಳು ಉಂಟೋ ನನಗೆ ತಿಳಿಯದು.

(ಸಹಿ) ಹುಲ್ಲಿಗಡ್ಡೆ ಕಲ್ಲು ಮಟ್ಟೆಪ್ಪ.

ಕೋರ್ಟಿನಲ್ಲಿ ಹೇಳಿದ ಪ್ರಕಾರ ಬರದಿದ್ದನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟುರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿಯ ನಂಬರು I.

ಕೌಂಟರು ಅರ್ಜಿದಾರರ ಪರ 15-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಗುತ್ತಿ ಗಡ್ಡೆಪ್ಪ. ತಂದೆಯ ಹೆಸರು - ತೋಟಪ್ಪ, ಗ್ರಾಮ - ಹೊಸಪ್ಯಾಟೆ,, ತಾ॥ ಹೊಸಪೇಟೆ, ಮತ - ಲಿಂಗಾಯತ, ವೃತ್ತಿ -ಮುನಿಸಿಪಲ್ ಕೌನ್ಸಿಲರ್, ವ್ಯಾಪಾರಿ, ಮತ್ತು ಪೂರ್ವದ ಆನರರಿ ಮೇಜಸ್ಟ್ರೇಟು, ಕುಲ - ಹಿಂದು, ವಯಸ್ಸು 47.

ತಾ॥ 26-2-1916.

1916-ನೇ ಸಂ॥ರ ಫಿಬ್ರವರಿ 26-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣಮಾಡಿ ಬರ್ಸಿದ ಕೈಫಿಯತ್ತು.

ನಾನು ರು. 100 ಸರ್ಕಾರದ ಹಣ 135 ರೂಪಾಯಿಗಳು ಯಿನ್‌ಕಂಟಾಕ್ಸು ಕೊಡುತ್ತೇನು. ಚಿತ್ತವಾಡಿಗಿ ಗ್ರಾಮದಲ್ಲಿ ಬಸವ ಪುರಾಣವು ಓದಿದರು.

ಹೊಸಪ್ಯಾಟಿಯಲ್ಲಿ ಓದಲಿಲ್ಲ. ಹೊಸಪ್ಯಾಟಿಯಲ್ಲಿ ಶರಣಬಸಪ್ಪನ ಪುರಾಣವು ಓದಿದರು. ಚಿತ್ರವಾಡಿಗವಳಗ ಕಲ್ಲು ಪಟ್ಟೆಪ್ಪನ ಗುಡಿಯಿಂದ ಕಾರೇಕಲ್ಲು ಬಸಲಿಂಗಯ್ಯನವರ ಮಠದವರಿಗೂ ಬಸವ ಪುರಾಣದ ಮೆರವಣಿಯು ಮಾಡಿದರು, ಬಜಾರದೊಳಗೆ ಮೆರವಣಿ ಮಾಡಿದರು. ಕಾರೇಕಲ್ಲು ಬಸಲಿಂಗಯ್ಯನವರ ಮಠ ಕಾಪ್ಪಿ ಸಮೀಪದಲ್ಲಿ ಅದೆ. ಹೊಸಪ್ಯಾಟವಳಗೆ ಶರಣ ಬಸಪ್ಪ ಮತ್ತು ಶಿದ್ದರಾಮೇಶ್ವರ ಪುರಾಣಗಳ ಮೆರವಣಿಯು ಮಾಡಿದರು. ಈ 2 ಮೆರವಣಿಗಳಲ್ಲಿ ಈ ಪುರಾಣಗಳನ್ನು ಪಾಲಕಿಯಲ್ಲಿಟ್ಟು ಮೆರಸಿದರು. ಹೊಸಪ್ಯಾಟಿವಳಗೆ ಪಾದಗಟ್ಟೆಪ್ಪನ ಗುಡಿಯಿಂದ ಗೋಸಿ ಕರಿಗಂಗಪ್ಪನವರ ಅಂಗಡಿವರಗೂ ಮೆರವಣಿ ಮಾಡಿದರು. ಮರಿ ಚನ್ನಪ್ಪನವರ ಮಠದೊಳಗ ಪುರಾಣವು ಓದಿದರು. ಚಿತ್ರವಾಡಿಗಿವಳಗೆ 3 ತಿಂಗಳವರಿಗೂ ಪುರಾಣವು ಓದಿದರು, ಇದು 14-15 ವರುಷದ ಕೆಳಗೆ ಜರಿಗಿರಬಹುದು. 16-17 ವರುಷದ ಕೆಳಗೆ ಹೊಸಪ್ಯಾಟಿಯಲ್ಲಿ ಶರಣ ಬಸಪ್ಪನವರ ಪುರಾಣವನ್ನು ಓದಿದರು. ಪುರಾಣವನ್ನು ಓದಿದ ಮೇಲೆ ಮೆರಣಿಯನ್ನು ಮಾಡದೆ ಯಿದ್ದರ ಅಮಂಗಳಕರವೆಂದು ಲಿಂಗಾಯತರ ಅಭಿಪ್ರಾಯ.

ಅಡ್ಡ ಸವಾಲು :—

ಚಿತ್ರವಾಡಿಗಿವಳಗೆ ಬಸವ ಪುರಾಣವನ್ನು ಓದುವದು ಕೇಳಲಿಕ್ಕೆ ನಾನು ಹೋಗಿ ಯಿದ್ದೆ. ಬ್ರಾಹ್ಮಣರಿಗೆ ದೂಷಣ ಕರವಾದ ಯಾವ ಭಾಗಗಳು ಪುರಾಣದಲ್ಲಿ ಓದಲಿಲ್ಲ. ಇತರ ಮತಸ್ಥರು ಯಾರು ಪುರಾಣ ಕೇಳಲಿಕ್ಕೆ ಬರಲಿಲ್ಲ. ಪುರಾಣವನ್ನು ಓದಿದ ಮೇಲೆ ಮೆರವಣಿಯು ಮಾಡಬೇಕೆಂಬ ವಿಷಯುವನ್ನು ಕುರಿತು ಯಾವ ಗ್ರಂಥದಲ್ಲಿ ಬರದಿದ್ದು ನನ್ನಗೆ ತಿಳಿಯದು. ಮೆರವಣಿಯು ಮಾಡಬೇಕೆನ್ನುವದೇ ನಮ್ಮ ವಿಶ್ವಾಸವು. ನಮ್ಮ ಶಾಸ್ತ್ರಗಳು ಈ ವಿಷಯುವು ಹೇಳಿರುವರು. ಹೊಸಪ್ಯಾಟಿಯಲ್ಲಿ ನಡೆದ ಮೆರವಣಿಯಲ್ಲಿ ಯಿದ್ದ ಜನರ ವೈಕಿ ನಾನೊಬ್ಬವನು, ಹೊಸಪ್ಯಾಟಿವಳಗೆ ಕೆಲವು ಬೀದಿಗಳಲ್ಲಿ ಲಿಂಗಾಯತರ ದೇವಾಂಗದವರ ಮನಿಗಳುಂಟು. ನಮ್ಮ ಹದ್ದಿನೊಳಗೆ ಅಂದರೆ ಪಾದ ನಟ್ಟೆಪ್ಪನ ಗುಡಿಯಿಂದ ಗೋಸಿ ಕರಿಗಂಗಪ್ಪ ಅಂಗಡಿ ವರಿಗೂ ಮೆರವಣಿ ಮಾಡುವದುಂಟು. ಚಿತ್ರವಾಡಿಗಿಯಲ್ಲಿ ಮೆರವಣಿಯು 7-8 ಘಂಟೆಗೆ ಪ್ರಾರಂಭ ವಾಯಿತು. ಕತ್ತಲ ಕಾಲಪ್ರೋ ಅಥವ ಬೆಳದಿಂಗಳ ಕಾಲಪ್ರೋ ನಾನು ಹೇಳಲಾರೆ. ಬಹುಶ ಡಿಸಂಬರು ತಿಂಗಳಲ್ಲಿ ಜರಿಗಿದಂತೆ ಕಾಣುತ್ತದೆ. ಬಹುಶ ಆಗಿನ ಕಾಲಕ್ಕೆ ಚಿತ್ರವಾಡಿಗ ಗ್ರಾಮ ಮುಂಜಸ್ಟ್ರೇಟು ಸೂರಪ್ಪನೇ ಯಿರಬಹುದು.

ಪುನರ್ವಿಮರ್ಶೆ :—

ಹೊಸಪ್ಯಾಟಿವಳಗೆ ಮೆರವಣಿ ಜರಿಗಿದ ಕಾಲದಲ್ಲಿ ನಮ್ಮಗೂ ದೇವಾಂಗದವರಿಗೂ ಯಾವ ವಿಧವಾದ ಜಗಳವು ಯಿದ್ದಿಲ್ಲ. ನಮ್ಮ ಸರಿಹದ್ದಿನೊಳಗೆ ಮೆರವಣಿ

ಮಾಡುವದಕ್ಕೆ ಯಾರ ಆಕ್ಷೇಪಣೆಯು ಇರುವದಿಲ್ಲ. ನಮ್ಮ ಸಂತೆಪ್ಪಿನೊಳಗೆ ಲಿಂಗಾಯತರಲ್ಲದೆ ಇತರ ಮತಸ್ಥರ ಮನೆಗಳು 300-400 ಪ್ರಾಯ.

(ಸಹಿ) ಗುತ್ತಿ ಗವ್ರಪ್ಪ.

ಕೋರ್ಟಿನಲ್ಲಿ ನಾನು ಹೇಳಿದ್ದನ್ನು ಓದಿ ತಿಳಿಸಿಕೊಂಡು ಒಪ್ಪಿದ್ದೇನೆ.

(ಸಹಿ) ಪಿ. ಜಿ. ಬ್ರೌನ್,
ಜಾಯಿಂಟು ಮೆಜಿಸ್ಟ್ರೇಟು.

ಹೊಸಪೇಟೆ ಡಿವಿಜನ್ ಜಾಯಿಂಟು ಮೆಜಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು 1.

ಕೌಂಟರು ಅರ್ಜಿದಾರರ ಪರ 16-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಸಣ್ಣಕ್ಕಪ್ಪ, ತಂದೆ ಹೆಸರು - ವೀರಪ್ಪ, ಗ್ರಾಮ - ಹೊಸಪೇಟೆ, ತಾಲೂಕು - ಹೊಸಪೇಟೆ, ಮತ - ಲಿಂಗಾಯತ, ವೃತ್ತಿ - ವ್ಯಾಪಾರಿ, ಕುಲ - ಓದದು, ವಯಸ್ಸು 65.

ತಾ॥ 26-2-1916.

1916-ನೇ ಸಂ॥ರ ಫಿಬ್ರವರಿ 26-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣವಾಗಿ ಬರೆಸಿದ ಕೈಫಿಯತ್ತು.

80 ರೂಪಾಯಿ ಸರ್ಕಾರದ ಹಣ 20 ರೂಪಾಯಿ ಇನ್‌ಕಂಟಾಕ್ಸು, ನಾನು ಕೊಡುತ್ತೇನೆ. 10-15 ವರುಷದ ಕೆಳಗೆ ಚಿತ್ರವಾಡಿಗಿಯಲ್ಲಿ ಬಸವ ಪುರಾಣವು ಓದಿದರು. ಕಲ್ಲು ಮಟ್ಟಿಪ್ಪನ ಗುಡಿಯಲ್ಲಿ ಓದಿದರು. ಕಲ್ಲು ಮಟ್ಟಿಪ್ಪನ ಗುಡಿ ಬಿಂದು ಕಾಲ್ವಿ ಸಮೀಪದಲ್ಲಿನ ಮಠದವರಿಗೂ ಪಾಲಿಕೆ ಮೊದಲಾದ ವಾಡಿಕೆ ಇದೆ.

3 4 ತಿಂಗಳವರೆಗೂ ಪುರಾಣವನ್ನು ಓದಿದರು. 15 16 ವರ್ಷದ ಕೆಳಗೆ ಹೊಸ ಪ್ಯಾಟಿಯಲ್ಲಿ ಶಿವ್ರಾಮೇಶ್ವರ ಪುರಾಣವು ಮತ್ತು ಶರಣ ಬಸ್ವನವರ ಪುರಾಣವು ಓದಿದರು. ತರುವಾಯ ಗೋನಿ ಕಲಿಂಗಪ್ಪನ ಅಂಗಡಿ ಮುಂದ ಗುಡಿವರೆಗೂ ಮೆರವಣಿ ಮಾಡಿದರು. ಕೊಳಪ್ಪಟ್ಟಿ ಒಳಗೆ ಮರಿ ಚನ್ನಪ್ಪನವರ ಮನೆಯಲ್ಲಿ ಪುರಾಣವನ್ನು ಓದಿದರು. ಇತರ ಮತಸ್ಥರು ಯಾರು ಆಕ್ಷೇಪಣೆ ಮಾಡಲಿಲ್ಲ. ಚಿತ್ರ ಪ್ಯಾಟಿಯಲ್ಲಿ ಕೂಡ ಯಾರು ಆಕ್ಷೇಪಣೆ ಮಾಡಲಿಲ್ಲ. ಚಿತ್ರನಾಡಿಗ ಗ್ರಾಮದ ಮೇಜಸ್ಟ್ರೇಟು ಬ್ರಾಹ್ಮಣನೇ ಇದ್ದನು.

ಅಡ್ಡ ಸವಾಲು:—

ಬಸವ ಪುರಾಣದೊಳಗಿನ ವಿಷಯಗಳು ಯಾವವು ನನಗೆ ಗೊತ್ತಿಲ್ಲ. ಚಿತ್ರ ಪ್ಯಾಟಿಯಲ್ಲಿ ಬಸವ ಪುರಾಣವನ್ನು ಕೇಳಲಿಕ್ಕೆ ನಾನು ಹೋಗಿಯಿದ್ದೆ. ಯಾವ ವಿಷಯವನ್ನು (ಕಥೆಗಳು) ಓದಿದ್ದು ನನಗ ಹೇಳಲಿಕ್ಕೆ ಜ್ಞಾಪಕ ಸಾಲದು. ಯಾವ ತಿಂಗಳ ವಳಗ ಮೆರವಣಿ ಮಾಡಿದ್ದು ನನಗೆ ಜ್ಞಾಪಕವಿಲ್ಲ. ಮೆರವಣಿಗೆ ನಾನು ಹೋಗಿದ್ದೆನು. ಕತ್ತಲ ಕಾಲವ್ವೋ ಬೆಳದಿಂಗಳ ಕಾಲವ್ವೋ ನನಗೆ ಜ್ಞಾಪಕಸಾಲದು, ಮಾರ್ಗಶಿರ ಮಾಸದಲ್ಲಿ (ಡಿಸಂಬರು) ಜರಗಿರ ಬಹುದು.

ಪುನಃಪ್ರಶ್ನೆ:— ಇಲ್ಲ.

(ಸಹಿ.) ಶೆಟ್ರು ಸಣ್ಣಕ್ಕೆಪ್ಪ,

ಕೋರ್ಟಿನಲ್ಲಿ ಬಹಿರಂಗವಾಗಿ ಬರಿಸಿದ ಕೈಫಿಯತ್ತು ಓದಿ ಒಪ್ಪಿಕೊಂಡಿದ್ದೇನೆ.

ಡಿ. ಜಿ. ಬ್ರೌನ್,
ಜಾಯಿಂಟು ಮೇಜಿಸ್ಟ್ರೇಟ.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 17-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಗುಗ್ರಿ ಹುಚ್ಚೀರಪ್ಪ, ತಂದೆಯ ಹೆಸರು - ಜಂಬಣ್ಣ, ಗ್ರಾಮ - ಚಿತ್ರವಾಡಿಗಿ, ತಾಲೂಕು - ಹೊಸಪೇಟೆ, ಮತ - ಲಿಂಗಾಯತ, ವೃತ್ತಿ - ವ್ಯಾಪಾರಿ, ಕುಲ - ಹಿಂದು, ವಯಸ್ಸು 35.

ತಾ॥ 26-2-1916.

1916-ನೇ ಸಂ॥ರ ಫಿಬ್ರವರಿ 26-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

ರು. 700-800 ಸರ್ಕಾರದ ಹಣ ರು. 20 ಯಿಂಕಂಟಾಕ್ಸು ಕೊಡುತ್ತೇನೆ. ಚಿತ್ರವಾಡಿಗಿಯಲ್ಲಿ 10-15 ವರುಷದ ಕೆಳಗೆ ಕಲ್ಲು ಮಟ್ಟೆಪ್ಪನ ಗುಡಿವಳಗೆ ಬಸವ ಪುರಾಣವನ್ನು ಓದಿದರು. ತರುವಾಯ ಮೆರವಣಿ ಕೂಡ ಮಾಡಿದರು. ಕಲ್ಲು ಮಟ್ಟೆಪ್ಪನ ಗುಡಿಯಿಂದ ಕಾಲ್ವೆವರಿಗೂ ಪುರಾಣವನ್ನು ಪಾಲಿಕಿಯಲ್ಲಿಟ್ಟು ಮೆರವಣಿ ಮಾಡಿದರು ಯಿತರ ಮತಸ್ಥರು ಯಾರು ಆಕ್ಷೇಪಣೆ ಮಾಡಲಿಲ್ಲ. 3-4 ತಿಂಗಳವರಿಗೂ ಪುರಾಣವನ್ನು ಓದಿದರು. 16-17 ವರುಷದ ಕೆಳಗೆ ಹೊಸಪ್ಯಾಟಿಯಲ್ಲಿ ಪುರಾಣದ ಮೆರವಣಿಯನ್ನು ಮಾಡಿದರು. ಈ ಮೆರವಣಿಯನ್ನು ಕುರಿತು ಯಾರು ಆಕ್ಷೇಪಣೆ ಮಾಡಲಿಲ್ಲ. ಈ ಪುರಾಣಗಳನ್ನು ಪಾಲಿಕಿಯಲ್ಲಿಟ್ಟು ಮೆರಸಿದರು.

ಅಡ್ಡ ಸವಾಲು:—

ನನ್ನ ವಯಸ್ಸು 30-35 ವರುಷ ಯಿರಬಹುದು. ಚಿತ್ರವಾಡಿಗಿಯಲ್ಲಿ ಬಸವ ಪುರಾಣವನ್ನು ಓದಿದ ಕಾಲದಲ್ಲಿ ನನಗೆ 18-20 ವರುಷ ವಯಸ್ಸು ಯಿರಬಹುದು. ನಾನು ಪುರಾಣವನ್ನು ಕೇಳಲಿಕ್ಕೆ ಹೋಗಿದ್ದೆನು. ಈಗ ನನಗೆ ಬಸವ ಪುರಾಣದೊಳಗಿನ ವಿಷಯಗಳು ಯಾವು ಜ್ಞಾಪಕವಿಲ್ಲ. ಹೊಸಪ್ಯಾಟಿವಳಗೆ ಶರಣ ಬಸಪ್ಪ, ರೇವಣ ಸಿದ್ಧೇಶ್ವರ ಪುರಾಣಗಳನ್ನು ಓದಿದರು. ನಾನು ಕೇಳಲಿಕ್ಕೆ ಹೋಗುತಿದ್ದೆನು. ಒಂದು ವರುಷ ಒಂದು ಪುರಾಣವನ್ನು ಯಿನ್ನು ಒಂದು ವರುಷ ಯಿನ್ನೊಂದು ಪುರಾಣವು ಓದಿದರು. ಹೊಸಪ್ಯಾಟಿ ವಳಗೆ ಯೀ ೨ ಪುರಾಣಗಳನ್ನ

ನಾನು ಕೇಳಿದೆ. ಯೀ೦ ಪುರಾಣದ ಮೆರವಣಿಗೆ ಕೂಡ ನೋಡಿರುತ್ತೇನೆ. ಮೆರವಣಿಗಳು ಕೂಡ ಬೇರೆ ಬೇರೆ ವರುಷಗಳಲ್ಲಿ ಜರಿಗಿದವು. ಯೀ೦ ಪುರಾಣಗಳನ್ನು ವಬ್ಬರೆ ಶಾಸ್ತ್ರಿಗಳು ಓದಿದ ವಿಷಯವು ನನಗೆ ಜ್ಞಾಪಕ ಸಾಲದು. ಈ ಪುರಾಣದ ವಿಷಯಗಳು ಯಾವದು ತಿಳಿಯದು. ಚಿತ್ತವಾಡಿಗ ವಳಗೆ ಮಾರ್ಗಶಿರ ಮಾಸದೊಳಗೆ ಮೆರವಣಿ ಮಾಡಿದರು. ಹೊಸಪ್ಯಾಟೆ ವಳಗೆ ಜರಿಗಿದ 2 ಮೆರವಣಿಗಳ ಮಧ್ಯ ವಂದು ವರುಷ ಅವಧಿ ಯಿತ್ತು. ಶಿದ್ದರಾಮೇಶ್ವರನ ಪುರಾಣವು ನಾನು ಕೇಳಿರುತ್ತೇನೆ. ನಮ್ಮ ಗ್ರಾಮದಲ್ಲಿ ವಂದುಸಾರಿ ಓದಿದರು. ಹೊಸಪ್ಯಾಟೆಯಲ್ಲಿ ಓದಿದರೋ ಯಿಲ್ಲವೋ ನನಗೆ ಜ್ಞಾಪಕ ವಿಲ್ಲ. ಅಲ್ಲೇ ವಂದುಸಾರಿ ಓದಿದ್ದರೆ ಓದಿರಬಹುದು. ಮದ್ರಾಸು ಹೈಕೋರ್ಟಿನಲ್ಲಿ ಚಿತ್ತವಾಡಿಗಿ ಅಡ್ಡ ಪಾಲಿಕಿ ಮೆರವಣಿಯ ಕೇಸು ಹಾಲಿ ಜರುಗುತ್ತದೆ.

ಪುನರ್ವಿಮರ್ಶೆ:— ಯಿಲ್ಲ.

(ಸಹಿ) ಗುಗ್ರಿ ದೊಡ್ಡ ಹುಚ್ಚಪ್ಪ.

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿ ಕೊಂಡಿದ್ದೇನೆ.

(ಸಹಿ) ಡಿ. ಜೆ. ಬ್ಲೆನ್.
ಜಾಯಿಂಟು ಮೇಜಿಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಿಸ್ಟ್ರೇಟರವರ ಕೋರ್ಟು.

1916 ನೇ ಸಾ॥ರವ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 18-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಚಂದ್ರಶೇಖರ ಶಾಸ್ತ್ರಿ, ತಂದೆಯ ಹೆಸರು - ಬಸವಣ್ಣ ಶಾಸ್ತ್ರಿ, ಗ್ರಾಮ - ಬೆನ್ನೂರು, ತಾ॥ ಗಂಗಾವತಿ, ನೈಜಾಂ ಯಿಲಾಖೆ, ಮತ - ಲಿಂಗಾಯತ, ವೃತ್ತಿ - ಉಜ್ಜಯಿನಿ ಸಂಸ್ಥಾನದ ಏಜಂಟು, ಕುಲ - ಹಿಂದು, ವಯಸ್ಸು 43.

ತಾ॥ 5-4-1916.

1916-ನೇ ಸಂ॥ರ ಏಪ್ರಿಲ್ 5-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಪಡಿ ಬರಿಸಿದ ಕೈಫಿಯತ್ತು.

ನಾನು ಉಜ್ಜಯನಿ ಮಠದಲ್ಲಿ ಪಂಡಿತನು. 5 ಮುಖ್ಯ ಲಿಂಗಾಯತರ ಮಠಗಳ ಪೈಕಿ ಇದು ಒಂದು ಮಠ ನನಗೆ ಸಂಸ್ಕೃತ ಭಾಷೆಯು, ಕನ್ನಡ ಭಾಷೆಯು ತಿಳಿಯೋದು. ದೇವರಗಳ ಪೈಕಿ ಲಿಂಗಾಯತರಿಗೆ ಶಿವನೇ ಮುಖ್ಯ ದೇವರು. ಲಿಂಗವನ್ನು ಪೂಜೆ ಮಾಡುವದರಿಂದಲೇ ಮೋಕ್ಷವು ಪ್ರಾಪ್ತಿ ಯಾಗುವದೆಂಬುವದೇ ನಮ್ಮಗಳ ಅಭಿಪ್ರಾಯವು. ನಮ್ಮ ಮತ ಗ್ರಂಥಗಳ ಪೈಕಿ ಬಸವ ಪುರಾಣವೇ ಮುಖ್ಯವಾದ ಗ್ರಂಥವು. ಇತರ ಮತಸ್ಥರನ್ನು ದೂಷಣೆ ಮಾಡಬೇಕೆಂಬುವದು ನಮ್ಮಗಳ ಅಭಿಪ್ರಾಯವಲ್ಲ. (ದೇವರುಗಳಲ್ಲಿ) ಯಾವ ದೇವರು ಮುಖ್ಯ ದೈವವೆಂಬ ವಿಷಯವನ್ನು ಚರ್ಚಿಸುತ್ತದೆ. ವಿಷ್ಣುವು ಮತ್ತು ಇತರ ದೇವರುಗಳು ಶಿವನ ಅವಯವಗಳಾಗಿಯು ಅಥವಾ ಆ ಭಾಗಗಳಾಗಿಯು ಪೂಜಿಸಲ್ಪಡುತ್ತವೆ. ಅವರು ಸ್ವತಂತ್ರಾಧಿಕಾರ ವುಳ್ಳ ದೇವರಗಳ ಹಾಗೆ ಪೂಜಿಸಲ್ಪಡಲಾರರು. ಸಂಸ್ಕೃತ, ತೆಲುಗು ಪುಸ್ತಕಗಳ ಆಧಾರದಮೇಲೆ ಬಸವ ಪುರಾಣವು ಬರದದೆ.

(ಎಗ್ಜಿಬಿಟ್ಟು ಶಿ. ವಿ.) ಚಿದಾನಂದರೆಂಬ ಬ್ರಾಹ್ಮಣರಿಂದ ಬರಿಯಲ್ಪಟ್ಟ ಕನ್ನಡ ದೇವೀ ಪುರಾಣದ 2-ನೇ ಸಂಧಿಯಲ್ಲಿ ವಿಷ್ಣುವಿಗೆ ಇವೇ ವುತ್ಪತ್ತಿ (ಜನನ) ಹೇಳಿದ್ದಾರೆ. ಆ ದೇವಿ ಪುರಾಣವು ನಮ್ಮಗೆ ಮುಖ್ಯವಾದ ಗ್ರಂಥವಲ್ಲ. ಈ ಅಂಶಗಳು ದೇವಿ ಭಾಗವತ ಪುರಾಣದಲ್ಲಿ ಅವೆ. ಆದರೆ ಪ್ರಕೃತ ನನಗೆ ಜ್ಞಾಪಕ ವಿಲ್ಲ, ವೈಷ್ಣವ ಗ್ರಂಥಗಳಲ್ಲಿ ಇತರ ಮತಸ್ಥರು ಎಲ್ಲರು ಪಂಚಮರೆಂದು ಬರದಂತೆ ನಾನು ಕೆಲವು ವಾಕ್ಯಗಳನ್ನು ನೋಡಿದ್ದೇನಿ. ಅವು ಯಾವು ಅಂದರೆ ಮಧ್ವ ಭಾಷ್ಯ ಪೇಜಿ 4 ಓ ಅಚ್ಯುತ ದೇವರೇ ನೀನು ನನ್ನ ಮುಖವನ್ನು ಆಚೇಲಿ ತಿರಿಗಿಸಿದ ತಕ್ಷಣವೇ ದೇವರುಗಳಾದ ಬ್ರಹ್ಮ, ಶಿವ ಮತ್ತು ಇತರ ದೇವರುಗಳು ಪಂಚಮರಕ್ಕಿಂತಲೂ ಹೀನಸ್ಥಿತಿಯಲ್ಲಿದ್ದಂತೆ ಹೇಳಿಸಲ್ಪಡುವರು ಎಲ್ಲ ಹಿಂದು ವೇದಾಂತಗಳು ಸಿದ್ಧಾಂತಗಳು ಬ್ರಹ್ಮ ಸೂತ್ರಗಳಮೇಲೆ ಏರ್ಪಡಿಸಲ್ಪಟ್ಟಿವೆ. ಭಾಷ್ಯ ಗ್ರಂಥಗಳು ಪ್ರತಿ ಮತಸ್ಥರಿಗೂ ಮುಖ್ಯವಾದ ಗ್ರಂಥಗಳು, ದ್ವೈತ ಸಿದ್ಧಾಂತ ಸ್ಥಾಪಕ (ಕರ್ತನಾದ) ಮಧ್ವಾಚಾರ್ಯರಿಂದಲೇ ಮೇಲೆ ಹೇಳಿದ ಅಂಶಗಳನ್ನು ಮಧ್ವ ಭಾಷ್ಯದಲ್ಲಿ ಬರಿಯಲ್ಪಟ್ಟಿದೆ. ನಾನು ಮಧ್ವ ವಿಜಯವನ್ನು ಓದಿದ್ದೇನೆ. ಅದು ವೈಷ್ಣವ ಮಾಧ್ವರಿಗೆ ಮುಖ್ಯವಾದ ಗ್ರಂಥವು ೧-ನೇ ಅಧ್ಯಾಯ ಶ್ಲೋ॥ 46 ಕೊನೆಭಾಗದಲ್ಲಿ ಶಂಕರಾಚಾರ್ಯರ ಜನನವನ್ನು ಬರದದೆ. ಆತನು ಜಾರಶಿಯ ಪುತ್ರನೆಂತಲು ಢಂಗನೆಂತಲು, ಮೋಸಗಾರನೆಂತಲು ಹೇಳಲ್ಪಟ್ಟಿದೆ.. ಅದ್ವೈತ ಸಿದ್ಧಾಂತವನ್ನು ಪ್ರತಿ

ಘಾಪಿಸಿವರು. ಶಂಕರಾಚಾರ್ಯರೇ ಮಧ್ವ ವಿಜಯವು ನಾರಾಯಣಾಚಾರ್ಯರಿಂದ ಬರೆಯಲ್ಪಟ್ಟಿದೆ. ಅಧ್ಯಾಯ ೯ ಪಿ ೨೭ ಯದರಲ್ಲಿ ಮಧ್ವನ ಪಾದಗಳನ್ನು ಶಿಷ್ಯನು ಪೂಜಿಸುವಂತೆ ಹೇಳಲ್ಪಟ್ಟಿದೆ. ಈ ಭಾಗವು ಸನ್ಯಗಳಿಗ ಒಹಳ ದೂಷಣಕರವಾದದ್ದು. ನಾರಾಯಣಾಚಾರ್ಯರಿಂದ ರಚಿಸಲ್ಪಟ್ಟ ಮಣಿಮಂಜರಿಯನ್ನು ನಾನು ಓದಿದ್ದೇನೆ. ಈ ಪುಸ್ತಕದಲ್ಲಿ ೮ ಅಧ್ಯಾಯಗಳುಂಟು ೫ ರಿಂದ ೮ ಅಧ್ಯಾಯದಲ್ಲಿ ಶಂಕರಾಚಾರ್ಯರ ದೂಷಣೆಯು ಅದೆ. ಮುಂಡನ ಸತಿಯು ಸಂಗದ (ಆತನ ದ್ವೇಷಿಯು) ವ್ಯಭಿಚರಿಸಿದಂತೆ ಅದೆ. ಆ ಕಾರಣಕ್ಕಾಗಿ ಮುಂಡನ ಹೆಂಡತಿ ಮುಂಡನನ್ನು ಜಯಿಸುವಂತೆ ಶಂಕರಾಚಾರ್ಯ ತನ್ನ ದ್ವೇಷಿಯಾದ ಮುಂಡನ ಸತಿಯು ಕೂಡ ವ್ಯಭಿಚರಿಸಿದಂತೆ ಹೇಳಲ್ಪಟ್ಟಿದೆ. ಆ ವ್ಯಭಿಚಾರ (ದೋಷದಿಂದ) ಆ ಮುಂಡನ ಸತಿಯು ಶಂಕರಾಚಾರ್ಯರಿಗ ಮುಂಡನನ ಮೇಲೆ ಜಯಪ್ರದವನ್ನು ಕೊಟ್ಟಂತೆ ಹೇಳಲ್ಪಟ್ಟಿದೆ. ವಿಷ್ಣು ಸಹಸ್ರ ನಾಮಾವಳಿ ಭಾಷ್ಯ ಪೇಜಿ ೭ ವ್ಯಾಸನುತಪ್ಪು ಪುರಾಣಗಳನ್ನು ಬರದಂತ ಹೇಳಲ್ಪಟ್ಟಿದೆ. ಇನ್ನು ಸರ್ವ ದರ್ಶನ ಸಂಗ್ರಹ ಪೇಜಿಗಳು ೭-೫ ಯಿದು ವಿದ್ಯಾರಣ್ಯರಿಂದ ರಚಿಸಲ್ಪಟ್ಟಿದೆ. ಇದರಲ್ಲಿ ವೇದಗಳನ್ನು ತಿಳಿದ ಋಷಿಗಳನ್ನು ಕುಯುಕ್ತರಂತೆಲು ನಿಶಾಚರರಂತೆಲು ವರ್ಣಿಸಲ್ಪಟ್ಟಿದೆ. ವೇದಗಳಲ್ಲಿ ವಿಶ್ವಾಸವಿಲ್ಲದ ಚಾರ್ವಾಕರ ದೂಷಣೆಯೇ ಯಿದು.

(ಸಹಿ) ಚಂದ್ರಶೇಖರಶಾಸ್ತ್ರಿ.

ಬಹಿರಂಗವಾದ ಕೋರ್ಟಿನಲ್ಲಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲೆಸ್,
ಜಾಯಿಂಟು ಮೇಜಿಸ್ಟ್ರೇಟು.

ಮುಖ್ಯವಿಮರ್ಶನ:—

ತಾ॥ 6-4-1916.

ಬಸವ ಪುರಾಣವು ಹಾಗಲವಿನ್ನಿ. ಬೆನ್ನೂರು ಮಠಿಗಿ, ಬಳಗನೂರು ಗ್ರಾಮದಲ್ಲಿ ಓದಲ್ಪಟ್ಟಿತು, ನೈಜಾಂ ಯಿಲಾಖೆ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿಗೆ ಹಾಗಲವಿನ್ನಿ ಸೇರಿ ಅದೆ. ಡಿಟ್ಟೋ. ಗಂಗಾವತಿ ತಾಲೂಕಿಗೆ ಬೆನ್ನೂರು ಸೇರಿ ಅದೆ. ನೈಜಾಂ ಯಿಲಾಖಿ ಲಿಂಗ ಸೂಗೂರು ಜಿಲ್ಲಾ ಮುದಗಲ್ಲು ತಾಲೂಕಿಗೆ ಮಸ್ಕಿಗ

ಗ್ರಾಮವು ಸೇರಿ ಅದೆ ಬಳಗನೂರು, ರಾಯಚೂರು ಜಿಲ್ಲಾದಲ್ಲಿ ಅದೆ. 14 ವರುಷದ ಕೆಳಗೆ ಹಾಗಲದಿನ್ನಿ ವಳಗೆ ಬಸವ ಪುರಾಣವನ್ನು ಓದಿದರು. ಓದಿದ ಸ್ಥಳದಿಂದ ಬಸ್ಸಿ ಕಟ್ಟಿ ವರಿಗೂ ಮೆರವಣಿಗೆ ಮಾಡಿದರು. ಅಲ್ಲಿ ಯಿತರ ಮತಸ್ಥರು ಕೂಡ ಯಿದ್ದರು. ಸುಮಾರು 600 ಜನ ಸಂಖ್ಯೆ ಯಿರಬಹುದು. ಆ ಊರಲ್ಲಿ ವಂದೇ ಬ್ರಾಹ್ಮಣರ ಮನೆಯು ವಂದೇ ವೈಶ್ಯರ ಮನೆಯು ವುಂಟು. ಆ ಊರಲ್ಲಿ 60 ಲಿಂಗಾಯುತರ ಮನಿಗಳುಂಟು. 20 ಬ್ಯಾಡರ ಮನಿಗಳುಂಟು. ಬ್ಯಾಡರು ಯಾವಾಗ್ಯೂ ಬ್ರಾಹ್ಮಣರ ಪರವೇ. ಪುರಾಣವನ್ನು ನಾಲ್ಕುವರೆ ತಿಂಗಳ ವರಿಗೂ ಓದಿದರು. ಯಿತರ ಮತಸ್ಥರು ಯಾರು ಆಕ್ಷೇಪಣೆ ಮಾಡಲಿಲ್ಲ. ಮೆರವಣಿಗೆ ರಾತ್ರಿ 7 ಘಂಟೆಯಿಂದ 11 ಘಂಟೆವರಿಗೂ ಜರುಗಿತು.

9 ವರುಷದ ಕೆಳಗೆ ಬೆನ್ನೂರು ವಳಗೆ ಪುರಾಣವನ್ನು ಓದಿದರು. ಈ ಊರು ಜನ ಸಂಖ್ಯೆ 600-700 ಯಿರಬಹುದು. ಯಿಲ್ಲಿ ಬ್ರಾಹ್ಮಣರ ಮನಿಗಳಿಲ್ಲ. 4 ವೈಶ್ಯರ ಮನಿಗಳು ಮತ್ತು ಕಾಪು ಅವರು, ಕುರುಬರು, ಬ್ಯಾಡರು ವಟ್ಟಿಗೆ 27-28 ಮನಿಗಳು ಯಿರಬಹುದು. ಮೆರವಣಿ ಮಾಡಿದರು, ಆಕ್ಷೇಪಣೆ ಯಿರಲಿಲ್ಲ.

ಮಶಿಗಿ ಗ್ರಾಮದಲ್ಲಿ 16-17 ವರುಷದ ಕೆಳಗೆ ಬಸವ ಪುರಾಣವನ್ನು ಓದಿದರು. ಯಿಲ್ಲಿ 2000 ಮನಿಗಳುಂಟು. ಈ ವೂರಲ್ಲಿ ಬಸವ ಪುರಾಣದ ಮೆರವಣಿ ನಡಿಯಿತು. ಈ ವೂರಲ್ಲಿ 25 ಬ್ರಾಹ್ಮಣರ ಮನಿಗಳು, 25 ವೈಶ್ಯರು, 30-40 ರಜಪುತ್ರರು, 500-600 ದೇವಾಂಗದವರು, 20-30 ಕಮ್ಮಾರ ಮನಿಗಳು ವುಂಟು.

ಬಳಗನೂರು ಗ್ರಾಮದಲ್ಲಿ 17-18 ವರುಷದ ಕೆಳಗೆ ಬಸವ ಪುರಾಣವನ್ನು ಓದಿದರು. ಈ ವೂರು ಜನ ಸಂಖ್ಯೆ 4000. ಮೆರವಣಿ ಕೂಡ ಮಾಡಿದರು. ಮಶಿಗಿ ಬಳಗಾನೂರು ಗ್ರಾಮಗಳಲ್ಲಿ ಮೆರವಣಿಗೆಯನ್ನು ಕುರಿತು ಆಕ್ಷೇಪಣೆ ಮಾಡಿದರು. ಆದರೆ ಸರ್ಕಾರದವರು ನಮ್ಮ ಪರವಾಗಿ ಪ್ರತ್ಯುತ್ತರವನ್ನು ಕೊಟ್ಟರು.

ಅಡ್ಡ ಸವಾಲು.—

ನನ್ನ ವಯಸ್ಸು 43, ನಾನು ಶ್ರೀಮುಖ ಸಂವತ್ಸರದಲ್ಲಿ ಹುಟ್ಟಿದವನು. ನನ್ನ ಜನ್ಮಸ್ಥಾನ ಬೆನ್ನೂರು 7 ವರುಷದ ಲಾಗಾಯತು ನಾನು ಉಜ್ಜಯಿನಿ ಸಂಸ್ಥಾನದಲ್ಲಿದ್ದೇನೆ. ಉಜ್ಜಯಿನಿ ಮಠದ ವಿಷಯವಾಗಿ ಬಳ್ಳಾರಿ ಜಿಲ್ಲಾ ಕೋರ್ಟಿನಲ್ಲಿ ಹಾಲಿ ವ್ಯಾಜ್ಯವು ನಡಿಯುತ್ತದೆ. ಬೆನ್ನೂರಲ್ಲಿಯು ಹಾಗಲದಿನ್ನಿಯಲ್ಲಿಯು ಬಸವ ಪುರಾಣದ ಮೆರವಣಿಗಾಗಿ ಸರ್ಕಾರದವರು ಪ್ರತ್ಯುತ್ತರವನ್ನು ಕೊಡಲಿಲ್ಲ.

ಮಾಗಿಗೆ ಒಳಗಾದ ಗ್ರಾಮಗಳಲ್ಲಿ ಮೆರವಣಿಗಾಗಿ ಕೊಟ್ಟ ಹುಕುಂ ನಕಲನ್ನು ನಾನು ಹಾಜರು ಮಾಡುತ್ತೇನೆ. ನಾನು ಕೋರಗಲ್ಲು ನೋಡಿರುತ್ತೀನಿ. ಅಲ್ಲಿ ಬಸವ ಪುರಾಣವನ್ನು ಓದಿದ್ದು ನನಗೆ ತಿಳಿಯದು. ಮಾನವಿ ಗ್ರಾಮವನ್ನೂ ನಾನು ನೋಡಿದ್ದೇನೆ. ಕೋರಗಲ್ಲು ಮಾನವಿ ಗ್ರಾಮಗಳಲ್ಲಿ ಬಸವ ಪುರಾಣದ ಮೆರವಣಿ ನಿಷೇಧಿಸಲ್ಪಟ್ಟ ಸಂಗತಿ ನನಗೆ ತಿಳಿಯದು. 10-12 ವರುಷದ ಕೆಳಗೆ ಶಿರುಗುಪ್ಪ ತಾಲೂಕು ತೆಕ್ಕಲ ಕೋಟ ಗ್ರಾಮದಲ್ಲಿ ನಡೆದ ಬಸವ ಪುರಾಣದ ಮೆರವಣಿಗೆಯಲ್ಲಿ ನಾನು ಹಾಜರು ಆಗಿದ್ದೇನು. ಬಳ್ಳಾರಿ ಗ್ರಾಮದಲ್ಲಿ ಸುಮಾರು 2000 ಲಿಂಗಾಯತರು ಯಿದ್ದಾರೆ. ಲಿಂಗಾಯತರ ಪೈಕಿ ಕೆಲವು ಜನ ದ್ರವ್ಯಸ್ಥರು ಕೂಡ ಯಿದ್ದಾರೆ. ಬಳ್ಳಾರಿಯಲ್ಲಿ ಬಸವ ಪುರಾಣದ ಮೆರವಣಿ ನಡದಂತೆ ನಾನು ಯಂದು ಕೇಳಿಲ್ಲ. ಬಳ್ಳಾರಿಯಲ್ಲಿರುವ ಕೊಟ್ಟೂರುಸ್ವಾಮಿ ಶೀದರಗಡ್ಡೆ ಗ್ರಾಮದಲ್ಲಿ ಬಸವ ಪುರಾಣವನ್ನು ಓದಿಸಿದರು. ಬಳ್ಳಾರಿಯಲ್ಲಿ ಲಿಂಗಾಯತರೊಳಗೆ ನಾಲ್ಕು ಕಕ್ಷಿಗಳು ಯಿರೋದರಿಂದ ಬಸವ ಪುರಾಣವನ್ನು ಓದಲಿಲ್ಲ. ಆದವಾನಿಯಲ್ಲಿ 5000-6000 ಲಿಂಗಾಯತರು ಯಿದ್ದಾರೆ. ಬಹಳ ಮಟ್ಟಿಗೆ ಯಲ್ಲರು ದ್ರವ್ಯಸ್ಥರೇ. ಆದವಾನಿಯಲ್ಲಿ ಬಸವ ಪುರಾಣದ ಮೆರವಣಿ ಜರಿಗಿದಂತೆ ನಾನು ಕೇಳಿ ಯಿಲ್ಲ. ಹೊಸಪ್ಯಾಟೆಯಲ್ಲಿ 2000 ಲಿಂಗಾಯತರು ಯಿದ್ದಾರೆ. ಅವರು ಕೂಡ ದ್ರವ್ಯಸ್ಥರೇ ಆ ವೂರಲ್ಲಿ ಕೂಡ ಬಸವ ಪುರಾಣದ ಮೆರವಣಿ ಜರಗಲಿಲ್ಲ. ಚಿತ್ರವಾಡಿಗಿ ಗ್ರಾಮದಲ್ಲಿ ಮೆರವಣಿಯನ್ನು ಕುರಿತು ಲಿಂಗಾಯತರಿಗೂ ಬ್ರಾಹ್ಮಣರಿಗೂ ಹಾಲಿ ವ್ಯಾಜ್ಯವು ನಡಿಯುತ್ತದೆ. ಶಿವಗೆ ನಿಂದಾರೂಪಕವಾದ ಯಾವ ಪುಸ್ತಕಗಳನ್ನು ಬಾಜಾರದೊಳಗೆ ಮೆರವಣಿ ಮಾಡಿದಂತೆ ನಾನು ನೋಡಿಯು ಯಿಲ್ಲ ಕೇಳಿಯು ಯಿಲ್ಲ.

(ಸಹಿ) ಚಂದ್ರಶೇಖರಶಾಸ್ತ್ರಿ,

ಕೋರ್ಟಿನಲ್ಲಿ ಹೇಳಿದ ಪ್ರಕಾರ ಬರದಿದ್ದನ್ನು ವೋದಿ ಒಪ್ಪಿಕೊಂಡಿದ್ದೇನೆ.

(ಸಹಿ) ಟಿ. ಜಿ. ಬ್ಲೆನ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನ ಜಾಯಿಂಟ ಮ್ಯಾಜಿಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂ॥ I.

ಕೌಂಟರು ಅರ್ಜಿದಾರರ ಪರ 19-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಹೀರೆಪ್ಪ, ತಂದೆ ಹೆಸರು - ಶಿವಸಂಗಪ್ಪ, ಗ್ರಾಮ - ಗದಗು, ತಾ॥ ಗದಗು, ಮತ-ಲಿಂಗಾಯತ, ವೃತ್ತಿ - ವ್ಯಾಪಾರ, ಕುಲ - ಹಿಂದು, ವಯಸ್ಸು 38.

ತಾ॥ 25-4-1916.

1916-ನೇ ಸಂ॥ರ ಏಪ್ರಿಲ್ 5-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನಪ್ರಕಾರ ಪ್ರಮಾಣ ಮಾಡಿ ಬರಸಿದ ಕೈಫಿಯತ್ತು.

ನನ್ನ ಸ್ವಂತ ಯೆರಡು ಅಂಗಡಿಗಳಿಗೆ 70 ರೂಪಾಯಿನ್ನು ನನ್ನ ಯಿನ್ನೊಂದು ಫರ್ಮಿಗ ರು. 104 ಯಿನ್‌ಕಂಟಾಕ್ಸ್ ಕೊಡುತ್ತೇನು. ಆಫರಂನಲ್ಲಿ ಸರಿ ಭಾಗದ ಯಿಬ್ಬರು ಹಿಸ್ಸೇದಾರು ಯಿರುವರು. ಆ ಭಾಗಸ್ಥರ ಪೈಕಿ ನಾನೊಬ್ಬನು. ನಾನು ರು. 50 ಸರ್ಕಾರದ ಹಣ ಕೊಡುತ್ತೇನಿ. 5-6 ವರುಷದ ಕೆಳಗೆ ಬೆಟಗೇರಿ ಗ್ರಾಮದಲ್ಲಿ ಬಸವ ಪುರಾಣವನ್ನು ಓದಿದರು. 11 ತಿಂಗಳವರಿಗೂ ಓದಿದರು. ತರುವಾಯ ಬಸವ ಪುರಾಣ ಪುಸ್ತಕವನ್ನು ಪಾಲಕಿಯಲ್ಲಿಟ್ಟು ಮೆರವಣಿಗೆಯು ಮಾಡಿದರು. ಬೆಟಗೇರಿಯಲ್ಲಿ ಬ್ರಾಹ್ಮಣರು ದೇವಾಂಗದವರು ಯಿನ್ನು ಅನೇಕ ಮತಸ್ಥರು ಯಿರುವರು. ಬೆಟಗೇರಿ ಸುಮಾರು ಹೊಸಪ್ಯಾಟಿ ಯಷ್ಟು ಯಿರಬಹುದು. ಮೆರವಣಿ ಹಿರೆಕ್ಕ ಮಠದಿಂದ ಹೊರಟು 2 ಫರ್ಲಾಂಗು ದೂರ ಬ್ರಾಹ್ಮಣರ ಕೇರಿಯಲ್ಲಿಯು 3 ಫರ್ಲಾಂಗು ದೂರ ದೇವಾಂಗದವರು, ತುರಕರು, ಕ್ರೈಸ್ತರು ಯಿರುವ ಕೇರಿಗಳಲ್ಲಿ ಕೂಡ ಹೋಯಿತು. ಯಾವ ವಿಘ್ನವಾದ ಅಲ್ಲಿ ಜರಗಲಿಲ್ಲ. ಮೆರವಣಿಗಾಗಿ 300 ರೂಪಾಯಿಗಳು ಖರ್ಚಾ ಕೊಟ್ಟೇನು. ಅಧಿಕಾರಸ್ಥರಿಗೆ ಕೂಡ ಬರಹೇಳಿದ್ದಿವಿ. ಗದಗು ಬ್ರಾಹ್ಮಣ ತಹಶೀಲದಾರರು ಬೆಟಗೇರಿ ಬ್ರಾಹ್ಮಣ ಕುಲಕರ್ಣಿಯು ಮೆರವಣಿಗೆಯನ್ನು ನೋಡಲು ಮಠಕ್ಕೆ ಬಂದಿದ್ದರು. ಮೆರವಣಿ ಊರೊಳಗೆಲ್ಲ ಮಾಡಿದರು. 5-10 ಘಂಟೆವರಿಗೂ ಜರಿಗಿತು. ನಾನು ಬೆಟಗೇರಿಯಲ್ಲಿರುತ್ತೇನಿ. ಬೆಟಗೇರಿ ಗದಗು ಮುನಿಸಿಪಾಲಿಟಿಗೆ ಸೇರಿದೆ. 3 ತಿಂಗಳ ಕೆಳಗೆ ಗದಿಗಿನಲ್ಲಿ ಬಸವ ಪುರಾಣವನ್ನು ಓದಿದರು. 10 ತಿಂಗಳವರಿಗೂ ಓದಿದರು. ಬಸವ ಪುರಾಣದ ಪುಸ್ತಕವನ್ನು ಪಲ್ಲಕ್ಕಿಯಲ್ಲಿ ಯಿಟ್ಟು

ಮೆರವಣಿಗೆಯನ್ನು ಮಾಡಿದರು. ಗದಗಿನಲ್ಲಿ 50,000 ಜನ ಸಂಖ್ಯೆ ಯುಂಟು. ಆ ಪೈಕಿ ಅನೇಕ ಮತಸ್ಥರು ಯಿರುವರು. ಮೆರವಣಿ ರಾಚಮ್ಮನ ಗುಡಿಯಿಂದ ಪೇಟೆಓಣಿಗಳ್ಳ ತಿರಿಗಿ ಮತ್ತು ರಾಚಮ್ಮನ ಗುಡಿಗೆ ಬಂತು. 3 ಘಂಟೆ ಯಿಂದ 9 ಘಂಟೆವರಿಗೂ ನಡೆಯಿತು, ಅಲ್ಲಿರಿ ಯೇನು ಜರಗಲಿಲ್ಲ. ಪುರಾಣವನ್ನು ಓದಿದ ಮೇಲೆ ಮೆರವಣಿ ಮಾಡದೇ ಯಿದ್ದರೆ ಅಮಂಗಳಕರವೆಂದು ಸಮ್ಮಗಳ ಅಭಿಪ್ರಾಯ. ಯಾವುಗಲ್ಲು, ರೋಣ, ನವಲಗುಂದ ಯಿನ್ನು ಅನೇಕ ಸ್ಥಳಗಳಲ್ಲಿ ಬಸವ ಪುರಾಣದ ಮೆರವಣಿಯನ್ನು ಮಾಡಿದಂತೆ ಕೇಳಿ ಯಿರುತ್ತೀನಿ. ಧಾರುವಾಡದ ಜಿಲ್ಲಾ ಪೈಕಿ ಗದುಗು ನವಲಗುಂದ, ರೋಣ ಈ ಮೂರು ತಾಲೂಕು ಹೆಡ್‌ಕ್ವಾರ್ಟರುಗಳು ಈ ಪುರಾರುಗಳಲ್ಲಿ ಅನೇಕ ಮತಸ್ಥರಿದ್ದಾರೆ.

(ಸಹಿ) ಹೀರಪ್ಪ,

ಬಹಿರಂಗವಾದ ಕೋರ್ಟಿನಲ್ಲಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಎ. ಜಿ. ಬ್ಲೀಸ್,
ಜಾಯಿಂಟು ಮೇಜಿಸ್ಟ್ರೇಟು.

ತಾ॥ 6-4-1916.

ಅಡ್ಡ ಸವಾಲು:—

ಗದಗಿನಲ್ಲಿ ಬಹುಶ ದ್ರವ್ಯಸ್ಥರಾದ ಲಿಂಗಾಯತರು 2000 ಜನರು ಯಿರುವರು, ಬಟಗೇರಿಯಲ್ಲಿ 200 ಲಿಂಗಾಯತರ ಮನಿಗಳುಂಟು. ಬಟಗೇರಿಗೂ ಗದಗಿಗೂ 3 ಮೈಲು ಫಾಸಲೆ ಆ ಯರಡು ವೂರಿಗೂ ರೈಲು ಅದೆ. ಮೇಜಸ್ಟ್ರೇಟು ಪೋಲೀಸಿನವರು ಗದಗಿನಲ್ಲಿರುತ್ತಾರೆ. ಗದಿಗಿನಲ್ಲಿ ಬಸವ ಪುರಾಣದ ಮೆರವಣಿಗಾಗಿ ಲೈಸನ್ಸು ಪಡಿಯುವದು ಅನಾವಶ್ಯಕ. ಮೆರವಣಿಹಿಂದೆ ಪೋಲೀಸುನವರು ಯಾರು ಒರಲಿಲ್ಲ. ಮೆರವಣಿ ಜರಿಗಿದಂತೆ ಬರಹ ಮೂಲಕ ಆಧಾರವು ಯಾವದು ಯಿಲ್ಲ. ಮತ ಸಮ್ಮಂದವಾದ ಉತ್ಸವಗಳಿಗೆ ಲಯಿಸನ್ಸು ಪಡಿಯುವದು ಅವಶ್ಯಕ ವಿಲ್ಲ.
ಪುನರ್ವಿಮರ್ಶನೆ:— ಯಿಲ್ಲ.

(ಸಹಿ) ವೀರಪ್ಪ,

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್.
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಸ್ಟ್ರೇಟರವರ ಕೋರ್ಟು.

1916 ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 20-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಮಠದ ವೀರಯ್ಯ, ತಂದೆ ಹೆಸರು - ಮಲ್ಲೇಶಪ್ಪ, ಗ್ರಾಮ - ಯಮ್ಮಿಗನೂರು, ತಾ॥ ಬಳ್ಳಾರಿ, ಮತ-ಜಂಗಮ, ವೃತ್ತಿ - ಯಿನಾಂದಾರು, ಕುಲ - ಹಿಂದು, ವಯಸ್ಸು 62.

ತಾ॥ 5-4-1916.

1916-ನೇ ಸಂ॥ರ ಏಪ್ರಲ್ 5-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣಮಾಡಿ ಬರಿಸಿದ ಕೈಫಿಯತ್ತು.

ನೈಜಾಂ ರಾಜ್ಯದಲ್ಲಿಯು, ಬ್ರಿಟಿಷು ರಾಜ್ಯದಲ್ಲಿಯು ನನಗೆ ಯಿನಾಂ ಭೂಮಿಗಳುಂಟು. 1000 - 1200 ಯಕರೆ ವುಂಟು. ನಮ್ಮ ಗ್ರಾಮದಲ್ಲಿ 3 ವರುಷದ ಕೆಳಗೆ ಬಸವ ಪುರಾಣವನ್ನು ಓದಿದರು. 7 ತಿಂಗಳವರಿಗೂ ಓದಿದರು. ಹಿರೇ ಮಠದಿಂದ ಬಸವಣ್ಣ ದೇವರ ಗುಡಿವರಿಗೂ ಮೆರವಣಿ ಮಾಡಿದರು. ಯುಮ್ಮಿಗನೂರುವಳಗೆ 4-5 ಬ್ರಾಹ್ಮಣರ ಮನಿಗಳು 1 ದೇವಾಂಗದವರ ಮನಿ ವುಂಟು. 8 ಗಂಟೆಯಿಂದ 10½ ಗಂಟೆವರಿಗೂ ಉತ್ಸವ ನಡಿಯಿತು. ಯಾವ ಅಲ್ಲರಿಯು ಯಿರಲಿಲ್ಲ. ಮೆರವಣಿ ಮಾಡದಿದ್ದರೆ ಅಮಂಗಳಕರವೆಂದು ನಮ್ಮಗಳ ಅಭಿಪ್ರಾಯ ತಾಳೂರು ಶೀಗರಗಡ್ಡಿಯಲ್ಲಿ ಬಸವ ಪುರಾಣದ ಮೆರವಣಿ ನೋಡೀನಿ. ನಮ್ಮ ವೂರಲ್ಲಿ ಜರಿಗಿದ ಹಾಗೆ ಆ ಗ್ರಾಮಗಳಲ್ಲಿ ಕೂಡ ಜರಿಗಿದವು. ಇತರ ಮತಸ್ಥರು ಯಾರು ಆಕ್ಷೇಪಣೆ ಮಾಡಲಿಲ್ಲ.

(ಸಹಿ.) ವೀರಯ್ಯ.

ಕೋರ್ಟಿನಲ್ಲಿ ಬಹಿರಂಗವಾಗಿ ಬರಿಸಿದ ಕೈಫಿಯತ್ತು ಓದಿ ಒಪ್ಪಿಕೊಂಡಿದ್ದೇನೆ.

ಡಿ. ಜಿ. ಬ್ಲಿಸ್,
ಜಾಯಿಂಟು ಮೇಜಿಸ್ಟ್ರೇಟು.

ತಾ॥ 6-4-1916.

ಅಡ್ಡ ಸವಾಲು.—

ಯುಮ್ಮಿಗನೂರು ಬಳ್ಳಾರಿಯಿಂದ 22 ಮೈಲುನ್ನು, ಶಿರುಗುಪ್ಪೆಯಿಂದ 20 ಮೈಲುನ್ನು, ಆದವಾನಿಯಿಂದ 20 ಮೈಲುನ್ನು ಅದೆ. ಈ ಮೂರು ಗ್ರಾಮಗಳಲ್ಲಿ ಬಸವ ಪುರಾಣದ ಮೆರವಣಿ ಮಾಡಿದ್ದು ನಾನು ಕೇಳಿಲ್ಲ. ಯುಮ್ಮಿಗನೂರಲ್ಲಿ ಪೋಲೀಸು ಚಾವಡಿ ಯಿಲ್ಲ. ನಾವು ಯಾವ ಹುಕುಂ ತರಲಿಲ್ಲ.

ಫುನಃಪ್ರಶ್ನೆ :—

ನಮ್ಮ ತಂದೆ ಕಾಲದಲ್ಲಿ ಬಳ್ಳಾರಿಯವರಿಗೆ ಬಸವ ಪುರಾಣವನ್ನು ಓದಿದರು. ನಾನು ಈ ದಿನದವರೆಗೂ ಬಸವ ಪುರಾಣವನ್ನು ಓದಿದ್ದು ಕೇಳಿಲ್ಲ. ಬಳ್ಳಾರಿಯಲ್ಲಿ ಆದವಾನಿಯಲ್ಲಿ ಯಾಕೆ ಬಸವ ಪುರಾಣವನ್ನು ಓದಲಿಲ್ಲವೋ ನನಗೆ ತಿಳಿಯದು. ಶಿರುಗುಪ್ಪಿಯವರಿಗೆ ಲಿಂಗಾಯುತರಿಗೂ, ಅಕ್ಕಾಲೆಯವರಿಗೂ, ನೆವ್ಹಾರಿಗೂ ಜಗಳ ಗಳು ಇರುವದರಿಂದ ಬಸವ ಪುರಾಣವನ್ನು ಓದಲಿಲ್ಲ.

(ಸಹಿ) ಮಠದ ವೀರಯ್ಯ,

ಬಹಿರಂಗವಾದ ಕೋರ್ಟಿನಲ್ಲಿ ಹೇಳಿ ಬರಿಸಿದ ಕೈಫಿಯತ್ತು ಓದಿ ಒಪ್ಪಿಕೊಂಡಿದ್ದೇನೆ.

(ಸಹಿ) ಡಿ. ಜಿ. ಹ್ಲೆಸ್,
ಜಾಯಿಂಟು ಮೇಜಸ್ಟ್ರೇಟು.

ಹೊಸಪೇಟೆ ಡಿವಿಜನಲ್ ಜಾಯಿಂಟು ಮೇಜಸ್ಟ್ರೇಟರವರ ಕೋರ್ಟು.

1916-ನೇ ಸಂ॥ರದ ಮಿಸಿಲೇನಿಯಸ್ ಅರ್ಜಿ ನಂಬರು I.

ಕೌಂಟರು ಅರ್ಜಿದಾರರ ಪರ 21-ನೇ ಸಾಕ್ಷಿಯ ಕೈಫಿಯತ್ತು.

ಹೆಸರು - ಹನುಮಂತರೆಡ್ಡಿ, ತಂದೆಯ ಹೆಸರು - ನರಸಿಂಹಪ್ಪ, ಗ್ರಾಮ - ಯಮ್ಮಿಗನೂರು, ತಾಲೂಕು - ಬಳ್ಳಾರಿ, ಮತ - ರೆಡ್ಡಿ, ವೃತ್ತಿ - ವ್ಯವಸಾಯ, ಕುಲ - ಹಿಂದು, ವಯಸ್ಸು 70.

ತಾ॥ 5-4-1916.

1916-ನೇ ಸಂ॥ರ ಏಪ್ರೀಲು 5-ನೇ ತೇದಿ 1873-ನೇ ಸಂ॥ರದ 10-ನೇ ಆಕ್ಟಿನ ಪ್ರಕಾರ ಪ್ರಮಾಣವಾಗಿ ಬರಿಸಿದ ಕೈಫಿಯತ್ತು.

ನಾನು ಲಿಂಗಾಯತ ಮತಸ್ಥನಲ್ಲ, ನಾನು ರು. 150 ಸರ್ಕಾರು ಹಣ ಕೊಡು ತ್ತೇನು. 3 ವರುಷದ ಕೆಳಗೆ ಯುಮ್ಮಿಗನೂರು ಗ್ರಾಮದಲ್ಲಿ ಬಸವ ಪುರಾಣವನ್ನು ಓದಿ ಮೆರವಣಿಯನ್ನು ಮಾಡಿದರು ಈ ಮೆರವಣಿಯನ್ನು ಯಾರು ಆಕ್ಷೇಪಣೆ ಮಾಡಲಿಲ್ಲ. ಹಿರೇ ಮಠದಿಂದ ಬಸವಣ್ಣನ ಗುಡಿವರಿಗೂ ಮೆರವಣಿ ಮಾಡಿದರು.

(ಸಹಿ) ಬಿೂ ಗುರ್ತು ಹನುಮಂತರೆಡ್ಡಿ ಬಿ.

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿ ಕೊಂಡಿದ್ದೇನೆ.

ಡಿ. ಜಿ. ಬ್ಲಿಸ್,
ಜಾಯಿಂಟು ಮೆಜಿಸ್ಟ್ರೇಟು.

ತಾ॥ 6-4-1916.

ಅಡ್ಡ ಸವಾಲು:—

ನಾನು ಯೆಂದು ಗೌಡಿಕೆ ಕೆಲಸ ಮಾಡಿಲ್ಲ. 4-5 ವರುಷದ ಕೆಳಗೆ ನನ್ನ ಭಾವ ಮೈದುನನು ಹಂಗಾಮಿ ಗೌಡನಾಗಿದ್ದನು. ನಾನು ಪುರಾಣವನ್ನು ಕೇಳಲಿಕ್ಕೆ 4-5 ಸಾರಿ ಹೋಗಿದ್ದೆನು. ಆಗ್ಗೆ ನನ್ನನ್ನು ಯಾರು ಆಕ್ಷೇಪಣೆ ಮಾಡಲಿಲ್ಲ. ಇತರ ಕಾಪು ಮತಸ್ಥರು ಪುರಾಣವನ್ನು ಕೇಳಲಿಕ್ಕೆ ಹೋದದ್ದು ನನ್ನಗೆ ತಿಳಿಯದು. ಅವರು ಓದಿದ್ದನ್ನು ಕೇಳದೆನಾಗಲಿ ನನಗೆ ಜ್ಞಾಪಕವಿಲ್ಲ. ನಾನು ಮೆರವಣಿ ಹಿಂದೆ ಹೋಗಲಿಲ್ಲ. ಸ್ವಲ್ಪ ದೂರದಲ್ಲಿ ನಿಂತು ಮೆರವಣಿ ನೋಡಿದೆ ಅದು ಪಾಲಿಕಿಯ ಮೆರವಣಿ ಯಾಗಿತ್ತು. ಪಾಲಿಕಿ ವಳಗೆ ಪುಸ್ತಕವು ಹುವ್ವುಗಳು ಯಿದ್ದವು. ಪಾಲಿಕಿ ಯಲ್ಲಿ ಯಾವ ಪುಸ್ತಕವು ಯಿತ್ತೋ ನನಗೆ ತಿಳಿಯದು. ಆ ಪುಸ್ತಕವನ್ನು ಬಟ್ಟೆ ವಳಗೆ ಕಟ್ಟಿ ಯಿದ್ದಿಲ್ಲ. ಆಗಿನ ಕಾಲಕ್ಕೆ ನಮ್ಮ ಊರಲ್ಲಿ ಪೋಲೀಸು ಚಾವಡಿ ಯಿದ್ದಿಲ್ಲ. ಶಾನಭೋಗನು ಮೆರವಣಿಯ ಹಿಂದೆ ಹೋದ ಸಂಗತಿ ನನಗೆ ತಿಳಿಯದು, ನಮ್ಮ ಊರುವಳಗೆ ನಾಲ್ಕು ಬ್ರಾಹ್ಮಣರ ಮನಿಗಳುಂಟು. ಯಾರಾದರು ಬ್ರಾಹ್ಮ ಣರು ಮೆರವಣಿಯ ಹಿಂದೆ ಹೋದ ಸಂಗತಿ ನನಗೆ ತಿಳಿಯದು. ಬಟಗೇರಿ ಬಸಪ್ಪ ನವರಲ್ಲಿ ನಾನು ರು. 100, ರು. 200 ಗಳು ಸಾಲ ತೆಗದು ಕೊಳ್ಳುತ್ತೇನು.

ನಾನು ಅವರಿಗೆ ಈಗ ರು. 300 ಗಳು ಬಾಕಿ ಬರುತ್ತೇನೆ. ಅವರು ಲಿಂಗಾಯತ ಮತಸ್ಥರು.

(ಸಹಿ) ಬಿ. ಗುರ್ರ್ರ ಹನುಮಂತರೆಡ್ಡಿ.

ಬಹಿರಂಗವಾದ ಕೋರ್ಟಿನಲ್ಲಿ ನಾನು ಹೇಳಿ ಬರಿಸಿದ ಕೈಫಿಯತ್ತನ್ನು ಓದಿ ಒಪ್ಪಿಕೊಂಡಿದ್ದೇನು.

(ಸಹಿ) ಡಿ. ಜಿ. ಬ್ಲಿಸ್,
ಜಾಯಿಂಟು ಮ್ಯಾಜಿಸ್ಟ್ರೇಟು.

———

1916-ನೇ ಯಿಸ್ವಿ ಏಪ್ರಲ್ ತಿಂಗಳು 8-ನೇ ತೇದಿಗೆ ಸರಿಯಾದ ನಳ ಸಂ॥ ಚೈತ್ರ ಶು॥ 6 ಯಲ್ಲು ಕಂಪ್ಲಿಯಲ್ಲಿ ಯಿರುವ ಸರ್ವ ಲಿಂಗಾಯುತರ ಮತಸ್ಥರಲ್ಲಿ ಮುಖ್ಯರಾದ ಹುಚ್ಚಪ್ಪ ಸೋಮಪ್ಪ, ಹುಚ್ಚ ಶಿದ್ಧಲಿಂಗಪ್ಪ, ಕಲ್ಲುಗುಡಿ ಗುಂಡಪ್ಪ ಯಿವರಿಗೆ ರಾಮಸಾಗರ ಶ್ರೀನಿವಾಸರಾಯನು ಬರಕೊಟ್ಟ ವಡಂಬಡಿಕೆ ಯೇನಂದರೆ, ಈ ವಳಗಾಗಿ ನಾವು ಸಬ್ ಕಲೆಕ್ಟರು ಕೋರ್ಟಿನಲ್ಲಿ ಬಸವ ಪುರಾಣ ಮೆರವಣಿ ಮಾಡಕೂಡದೆಂದು ದಾಖಲು ಮಾಡಿದ ಅರ್ಜಿ ಪ್ರಕಾರ ಯೀ ದಿನ ನಾನು ಸದರಿ ಪುರಾಣ ಕಂಪ್ಲಿ ವಳಗೆ ಮೆರವಣಿ ಮಾಡಲು ವಪ್ಪಿಕೊಂಡು ಯಿರುತ್ತೀನಿ. ಈ ವಿಷಯದಲ್ಲಿ ನನ್ನದು ನಮ್ಮ ಮತಸ್ಥರ ತಕರಾರು ಯಿರೋದಿಲ್ಲಾ ಹೀಗೆಂದು ಬರಕೊಟ್ಟ ವಡಂಬಡಿಕೆ ದಸ್ತಾವೇಜು ಸಹಿ.

(ಸಹಿ) ಶೀಲ್ವಂತ್ರ ಹರೀಶ್ವರಪ್ಪ,

(Sd) R. Sreenivasa Rao,
District Board Member.

(Sd) C. Venkoba Rao,

(Sd) D. G. BLES,
Jnint Magistreet.

ಶಂಕರಾಚಾರ್ಯರಿಗೆ ವಿರೋಧವಾಗಿರುವ ಮಧ್ವ ವಿಜಯ ಮತ್ತು ಮಣಿಮಂಜರಿ ಯೊಳಗಿನ ವಾಕ್ಯಗಳು.

ದ್ವೇಷಭರಿತನಾದ ವ (ಮಣಿಮಂತ) ನು, ಮುಂಚೆಯೇ ದೈತ್ಯಪುತ್ರ ತಾನು ದೊಡ್ಡ ವಾಗ್ಮಿ ಯಾಗಬೇಕೆಂಬ ಆಶೆಯಿಂದ ಈಶ್ವರನನ್ನು ಮೆಚ್ಚಿಸಿದನು. ಬ್ರಾಹ್ಮಣರಲ್ಲಿ ಒಂದು ಪಂಗಡವಾದ ಅಂಘ್ರಿತಲರೆಂಬುವರಲ್ಲಿ ಅವನು ಜನಿಸಿದನು. ಇವನಂತೆಯೇ ಇತರ ರಾಕ್ಷಸರೂ ಜನಿಸಿದರು. ಈ ಮಣಿಮಂತನಿಗೆ ಶಂಕರನೆಂದು ಹೆಸರು. (ಮ. ವಿ. ಸರ್ಗ 1 ಶ್ಲೋ॥ 47) "ಸಂಕರ" ನೆಂದರೆ ಸಂಸ್ಕೃತದಲ್ಲಿ "ರಂಡಾಪುತ್ರ" ನೆಂದರ್ಥ. ಈ ಅರ್ಥವನ್ನು ಕೊಡುವುದಕ್ಕಾಗಿಯೇ 'ಸಂಕರ' ಎಂಬ ಪದವು 'ಶಂಕರ' ವೆಂಬದಾಗಿ ಬದಲಾಯಿಸಲ್ಪಟ್ಟಿತು.

ಮಾರ್ಜಾಲವು ತನ್ನ ಇಂಗಿತವನ್ನಿತರರಿಗೆ ತಿಳಿಸದೆ ಹಾಲು ಮೊಸರಿನಿಂದ ಮಾಡಿದ ಯಜ್ಞಾರ್ಥವಾಗಿಟ್ಟಿರತಕ್ಕ ಹವಿಸ್ಸನ್ನು ಗ್ರಹಿಸುವಂತೆಯೂ, ನಾಯಿಯು 'ಪುರೋಡಾಶ' ವೆಂಬ (ಯಾಗಾರ್ಥವಾಗಿ ಮಾಡುವ ಮತ್ತೊಂದು ತರದ) ಹವಿಸ್ಸನ್ನು ಗ್ರಹಿಸುವಂತೆಯೂ, ಕ್ರಮವನ್ನರಿಯದೆ ಮಣಿಗಳ ಸರವನ್ನು ಎತ್ತುವ ಕಪಿಯಂತೆಯೂ, ಈ ಪಾಪಿಷ್ಠನು (ಶಂಕರನು) ವೇದಾದಿ ಮತ ಗ್ರಂಥಗಳನ್ನು ಗ್ರಹಿಸಿ ಅವುಗಳನ್ನು ಕಲಿತನು, [ಮ. ವಿ. ಸರ್ಗ॥ ಶ್ಲೋ॥ 48.]

ತಾನು ಸನ್ಯಾಸವನ್ನು ಧರಿಸದಿದ್ದರೆ ಜನಗಳು ತನ್ನನ್ನು ನಮಸ್ಕರಿಸುವದಿಲ್ಲ, (ಗೌರವಿಸುವದಿಲ್ಲ) ವೆಂದು ತಿಳಿದು ಮದಗಜವು ನಿರ್ಮಲೋದಕವುಳ್ಳ ಸರೋವರವನ್ನು ಕಲಕಿ ಕೊಳೆಮಾಡುವಂತೆ ಇವನು ಚತುರ್ಥಾಶ್ರಮವಾದ ಸನ್ಯಾಸವನ್ನು ಧರಿಸಿದನು, [ಶ್ಲೋ॥ 49.]

ವೇದ ವಿರುದ್ಧವಾದ ಮಾಧ್ಯಮಿಕ ಮತವು ತಿರಸ್ಕರಿಸಲ್ಪಟ್ಟಿದ್ದನ್ನು ನೋಡಿ ತಾನು ಆ ಮತ ಪಕ್ಷಪಾತಿಯಾಗಿ ಅದಕ್ಕನುಸಾರವಾದ ಬೋಧನೆಯನ್ನು ಮಾಡಲು ಕೆಲವರೊಂದಿಗೆ ಉದ್ಯುಕ್ತನಾದನು. [ಶ್ಲೋ॥ 50.]

ಬೌದ್ಧರು ಬೋಧಿಸುತ್ತಿದ್ದ ಶೂನ್ಯಕ್ಕೆ ಬದಲಾಗಿ ತಾನು 'ಮಾಯಾ' ವನ್ನು ಬೋಧಿಸಿ ಇದು ಸತ್ (ಇರುವಿಕೆ) ಮತ್ತು ಅಸತ್ (ಇಲ್ಲದಿರುವಿಕೆ) ಇವುಗಳಿಂದ ಬೇರೆಯೆಂದು ವಿವರಿಸಿದನು. ಮತ್ತು ಶೂನ್ಯವನ್ನು ನಿರ್ದೇಶಿಸುವುದಕ್ಕಾಗಿ ಬ್ರಹ್ಮನು ನಿರ್ಗುಣನೆಂದು ಹೇಳಿದನು. ಈ ಕಾರಣಗಳಿಂದ ಇವನು "ಪ್ರಚ್ಛನ್ನ ಬೌದ್ಧ" ನೆಂದು ಪ್ರಸಿದ್ಧನಾದನು, [ಶ್ಲೋ॥ 51.]

ವ್ಯಾ॥ ಭರತಖಂಡದಲ್ಲಿನ ಸಮಸ್ತ ಆಸ್ತಿಕ ಮತಗಳು ವೇದಗಳನ್ನೇ ಮೂಲವಾಗಿಟ್ಟುಕೊಂಡಿರುವವು, ಎಲ್ಲರೂ ವೇದ ಪ್ರಮಾಣವನ್ನು ಸಂಪೂರ್ಣವಾಗಿ

ನಂಬುವರು. ಬೌದ್ಧರು ಶೂನ್ಯವನ್ನು ಬೋಧಿಸುವುದಲ್ಲದೆ ವೇದ ಪ್ರಮಾಣವನ್ನು ಒಪ್ಪುವದಿಲ್ಲ. ಆಚಾರಶೀಲನಾದ ಪ್ರತಿಯೊಬ್ಬ ಹಿಂದುವಿಗೂ "ಬೌದ್ಧ" ನೆಂಬ ಹೆಸರು ಅಹಿತಕರವಾದುದು. ವೇದಗಳನ್ನು ನಂಬದಿರುವವರು ಸ್ಪರ್ಶ ಯೋಗ್ಯರಲ್ಲ.

ಮತ್ತು ಅವರ ದೃಷ್ಟಿಯೇ ನರಕಪ್ರಾಪ್ತಿಕರವಾದುದು.

ಸೂರ್ಯ ಕಿರಣಗಳಿಂದ ಪ್ರಪಂಚವೆಲ್ಲವೂ ಪ್ರಕಾಶಿಸುವಂತೆ ಎಲ್ಲರನ್ನೂ ತಮ್ಮ ವಾಕ್ಯಗಳಿಂದ ಪರಿಶುದ್ಧವಾಗಿ ಮಾಡುವ ವೇದಗಳ ಸಾರಾಂಶವನ್ನು ಬ್ರಹ್ಮ ಸೂತ್ರಗಳನ್ನು ಇವನು (ಶಂಕರನೂ) ಅಪಹರಿಸಿದುದರಿಂದ ಇವನಿಗೆ ದೊಡ್ಡ ಕಳ್ಳನೆಂದು ಹೆಸರು ಬಂತು. [ಶ್ಲೋ॥ 52.]

ಈ ಶ್ಲೋಕದ ತಾತ್ಪರ್ಯವೇನಂದರೆ, ಶಂಕರನು ಬ್ರಹ್ಮ ಸೂತ್ರಗಳಿಗೆ ತಪ್ಪು ಅರ್ಥಗಳನ್ನು ಮಾಡಿ ಸೂತ್ರ ಕರ್ತರಾದ ವ್ಯಾಸರ ಅಭಿಪ್ರಾಯಗಳಿಗೆ ವಿರುದ್ಧವಾದ ಮತವನ್ನು ಭೋಧಿಸಿದನು.

ತಮ್ಮ (ವ್ಯಾಸರ) ಸೂತ್ರಗಳಿಗೆ ವಿರುದ್ಧ ಭಾಷ್ಯ ಮಾಡುತ್ತ ತಾನೊಬ್ಬ ದೊಡ್ಡ ಸೂತ್ರ ಭಾಷ್ಯಕಾರನೆಂದು ಮೆರೆಯುತ್ತಿದ್ದ ಈ ಶಂಕರನನ್ನು ತಕ್ಷಣವೇ ದಹಿಸದೇ ಇದ್ದುದಕ್ಕೆ ವ್ಯಾಸರು ಕ್ಷಮಾಬ್ಧಿಗಳೆಂಬುದೇ ಕಾರಣವು. [ಶ್ಲೋ॥53.]

ಶಂಕರನ ಮಾತುಗಳ ಸಮೂಹವೆಂಬ ಧೂಳು ಕೆಸರುಗಳಲ್ಲಿ ವೇದದ ಪ್ರಕಾಶವೆಲ್ಲವೂ ಮಲಿನವಾಯಿತು. ಅಜ್ಞಾನಿಗಳ ಮನಸ್ಸಿನಲ್ಲಿ ದೊಡ್ಡ ಕಳಂಕವನ್ನು ಸಂದೇಹವನ್ನು ವುಂಟುಮಾಡಿದ್ದರಿಂದ ಇವನು 'ಸಂಕರ' ನೆಂದು ಪ್ರಸಿದ್ಧನಾದನು.

[ಶ್ಲೋ॥ 54.]

ಈ ಪ್ರಕಾರವಾಗಿ ಪ್ರಪಂಚವು ಮಿಥ್ಯವೆಂದೂ, ದೇವರು ನಿರ್ಗುಣನೆಂದೂ ಆತ್ಮಗಳಿಗೆ (ಎಂದರೆ ಜೀವ ಜೀವರಿಗೆ) ಭೇದವಿಲ್ಲವೆಂದೂ ಇವನು ಎಲ್ಲ ದಿಕ್ಕುಗಳಲ್ಲಿಯೂ ಬೋಧಿಸಿದನು. [ಶ್ಲೋ॥ 55]

ಸಮೀಚೀನವಾದ ಮಧ್ವ ಮತವು ಪ್ರಚುರವಾದಾಗ ಅವರು (ಮಧ್ವಾಚಾರ್ಯರು) ದೊಡ್ಡ ದೊಡ್ಡ ಕವಿಗಳಿಂದ ಮಾತ್ರವೇ ಅಲ್ಲದೆ ಶಿವ, ಇಂದ್ರ, ಬೃಹಸ್ಪತಿ ಮೊದಲಾದ ದೇವತೆಗಳಿಂದಲೂ ಪೂಜ್ಯ ಚರಣರಾದ ಮಧ್ವಾಚಾರ್ಯರು ಪೂಜಿಸಲ್ಪಟ್ಟರು. [ಮ. ವಿ. ಸರ್ಗ 9 ಶ್ಲೋ॥ 27.]

ಕೃಷ್ಣ ಭೀಮರಿಗೆ ದ್ವೇಷಿಗಳಾದ ಅಸುರರು ನಾಶಮಾಡಲ್ಪಟ್ಟು ಬಾಹು ಬಲವುಳ್ಳವರಾಗಿ ವಾಗ್ಯುದ್ಧದಿಂದ ಸತ್ಯವನ್ನು ನಾಶಮಾಡಬೇಕೆಂದು ಅಪೇಕ್ಷಿಸಿದರು.

[ಮ. ಮಂ. ಸರ್ಗ 5 ಶ್ಲೋ॥ 2.]

ಅವರಲ್ಲಿ ಬುದ್ಧಿವಂತರಾದವರೆಲ್ಲರೂ ರಹಸ್ಯವಾಗಿ ಒಂದು ಕಡೆ ಸೇರಿ ತಮ್ಮ ಬುದ್ಧಿಗಳು ಪ್ರಕಾಶವಾಗುವಂತೆ ಸ್ವಕಾರ್ಯವನ್ನು ನೆರವೇರಿಸುವ ಮಾರ್ಗವನ್ನು ಕುರಿತು ಆಲೋಚಿಸಿದರು. [ಶ್ಲೋ॥ 3.]

ಬ್ರಾಹ್ಮಣನಾಗಿ ಹುಟ್ಟಿ ವೇದಾಂತಿ ಎಂಬ ಹೆಸರು ಹೊಂದಿ ಸನ್ಯಾಸವನ್ನು ಧರಿಸಿ ವೇದಗಳಿಗೆ ಅಪಾರ್ಥವನ್ನು ಮಾಡುವ ಈ ಕಾರ್ಯಕ್ಕೆ ನಮ್ಮಲ್ಲಿ ಮಣಿಮಂತನೊಬ್ಬನೇ ಶಕ್ತನಾಗಿದ್ದಾನೆ. ಅವನು ನಮಗೆ ಮುಖ್ಯ ಸ್ನೇಹಿತನಾಗಿದ್ದಾನೆ. ಇದಕ್ಕಾಗಿ ಇವನು ಕಲಿಯಿಂದ ಆಜ್ಞಪ್ತನಾಗಬೇಕು ಈ ಪ್ರಕಾರವಾಗಿ ದ್ವಾಪರ ಕಲಿಯು ಮತ್ತು ಯಿತರ ಸುರದ್ವೇಷಿಗಳ ಸಂಗಡ ಮಾತನಾಡಿ, ಇವರು ಬಹು ಸಂತೋಷದಿಂದ ಮಣಿಮಂತನನ್ನು ಕರೆದು ಮರ್ಯಾದೆ ಮಾಡಿ ಯಿಂತೆಂದರು. " ನಮ್ಮ ಭ್ರಾತೃವಾದ ಮಣಿಮಂತನೇ! ನಿನಗೆ ನಮಸ್ಕರಿಸುವೆವು. ನೀನು ಹೋಗಿ ಭೂಮಿಯಲ್ಲಿ ಜನಿಸಿ ಜಾಗ್ರತೆಯಾಗಿ ವೇದ ಪುರಾಣಗಳನ್ನು ನಾಶಮಾಡು. ವಿಷ್ಣುವಿನ ಗುಣಗಳನ್ನು ದೂಷಿಸಿ ಜೀವಗಳ ಐಕ್ಯವನ್ನು ಬೋಧಿಸು. ಭೂಮಿಯ ಮೇಲೆ ವೃಕೋಧರ (ಭೀಮ) ನು ಇಲ್ಲವಾದ್ದರಿಂದ ನೀನು ಭಯಪಡಬೇಕಾದುದಿಲ್ಲ. ಅವನು (ಭೀಮನು) ನಮಗೆ ಬದ್ಧ ವೈರಿಯಾದರೂ, ವಿಷ್ಣುವಿನ ಆಜ್ಞೆ ಇಲ್ಲದ್ದರಿಂದ ಅವನು ಭೂಮಿಯು ಮೇಲೆ ಅವತರಿಸುವದಿಲ್ಲ.

[ಮ. ಮಂ. ಸರ್ಗ 5 ಶ್ಲೋ॥ 15 - 20.]

ಈ ಪ್ರಕಾರ ದೈತ್ಯರಿಂದ ಪ್ರೇರಿತನಾದ ಮಣಿಮಂತನು ಮನಸ್ಸಿನಲ್ಲಿ ಭೀಮನ ಭಯವು ತುಂಬಿದ್ದರೂ ಭೂಮಿಯ ಮೇಲೆ ಜನ್ಮವನ್ನೆತ್ತಿದನು. [ಶ್ಲೋ॥ 28.]

ಈ ಸಮಯದಲ್ಲೇ ಮಣಿಮಂತನು ಒಬ್ಬ ಬ್ರಾಹ್ಮಣ ವಿಧವೆಯ ಹೊಟ್ಟೆಯಲ್ಲಿ ಒಬ್ಬ ಜಾರ ಪುರುಷನ ದೆಸೆಯಿಂದ ಹುಟ್ಟಿದನು. ಇವನು ಸರ್ವಕರ್ಮದಿಂದ ಬಹಿಷ್ಕೃತನೆಂದು ಇವನ ಬಂಧು ಜನಗಳೆಲ್ಲಾ ಹೇಳ ಲಾರಂಭಿಸಿದರು. ಇವನ ತಾಯಿಯು ಇವನಿಗೆ 'ಸಂಕರ' ಎಂದರೆ 'ರಂಡಾ ಪುತ್ರ' ಅಥವಾ 'ಗೃಹಚಾಮರ' ಎಂದು ಹೆಸರಿಟ್ಟಳು. ತನ್ನ ಮಗನನ್ನು ನೋಡಿ ಸಂತೋಷಿಸಿ ತಾಯಿಯು ಅವನಿಗೆ ಮಂಡ, ಉದುಂಬರ, ನಿಷ್ಪಾವ, ನಿಗ್ರಕಾಬ, ಅಲಾಬು ಮೊದಲಾದ ಬ್ರಾಹ್ಮಣರಿಂದ ತ್ಯಜಿಸಲ್ಪಟ್ಟ ಕಾಯಿ ಪಲ್ಯಗಳಿಂದ ಬೆಳೆಸಿದಳು.

[ಮ. ಮ. ಸರ್ಗ 6 ಶ್ಲೋ॥ 6-8.]

ಚೆನ್ನಾಗಿ ಮಾತನಾಡತಕ್ಕ ಮತ್ತು ಬುದ್ಧಿವಂತನಾದ ಈ ಬಾಲಕನಿಗೊಬ್ಬ ಬ್ರಾಹ್ಮಣನು ಉಪನಯನವನ್ನು ಮಾಡಿ ಬೇಕಾದಷ್ಟು ಹಾಲು, ತುಪ್ಪ ಅನ್ನ ಇವುಗಳು ಸಿಕ್ಕುವ ಸೌರಾಷ್ಟ್ರ ದೇಶಕ್ಕೆ ಕರೆದುಕೊಂಡು ಹೋದನು. ಪೂರ್ವ ಜನ್ಮದಲ್ಲಿ ಶಿವನನ್ನು ದೀರ್ಘ ತಪಸ್ಸಿನಿಂದ ಮೆಚ್ಚಿಸಿದುದರಿಂದ ಶಿವನ ಅನುಗ್ರಹದಿಂದ ಇವನು ವೇದಾಧ್ಯಯನ ಮಾಡಿದನು. ಉತ್ತರ ದಿಕ್ಕಿನಲ್ಲಿ ಹೋಗುತ್ತ ನದಿಯನ್ನು ದಾಟಲು ಇಳಿದಾಗ ಅವನ ಜನಿವಾರವು ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಯಿತು. ಹಾಗೆಯೇ ಹೊಳೆಯನ್ನು ದಾಟಿ ತನ್ನ ಜನಿವಾರವನ್ನು ಕುರಿತು ಹೀಗೆಂದನು. "ಎಲೈ ಯಜ್ಞೋಪವೀತವೇ! ನೀನು ಈಗ ನನ್ನನ್ನು ಬಿಟ್ಟು ಹೋದೆ, ಆದರೆ ನಾನು ನಿನ್ನನ್ನು ಆಗಲೇ ಬಿಟ್ಟು ಬಿಟ್ಟಿದ್ದೆ. ಕರ್ಮಗಳಿಲ್ಲದ ನನಗೆ ನಿನ್ನಿಂದ ಆಗಬೇಕಾದುದು ತಾನೇ ಏನು?" ಹೀಗೆ ಹೇಳಿ ಮುಂದಕ್ಕೆ ಹೊರಟು ಹೋದನು.

ಕೇರಳ ದೇಶದಲ್ಲಿ ಹುಟ್ಟಿದ ಮತ್ತು ಯಿತರ ಚಿಹ್ನೆಗಳನ್ನು ಧರಿಸಿದ ಜನಗಳ ಸಹಾಯದಿಂದ ಸಂತೆಯಾಗುವ ಸ್ಥಳಗಳಲ್ಲಿ ಯಿವನು ಬೌದ್ಧ ಮತವನ್ನು ಪ್ರಚುರಪಡಿಸಿದನು. [ಸರ್ಗ 6 ಶ್ಲೋ॥ 13-16.]

ವಿಷ್ಣುವಿನ ದ್ವೇಷಿಗಳೆಲ್ಲರೂ ಇವನಿಂದ ಈ ದುಶ್ಶಾಸ್ತ್ರಗಳನ್ನು ಕಲಿತರು. ಅಸುರಾವೇಶವಿದ್ದವರೆಲ್ಲರು ಯಿವನ ಮತಕ್ಕೆ ವಶರಾದರು. ಸಮಸ್ತರನ್ನೂ ವಶಪಡಿಸಿಕೊಂಡು ತನ್ನ ಮತವನ್ನವಲಂಬಿಸದೇ ಇದ್ದವರನ್ನು ಕೊಲ್ಲುವದಕ್ಕೋಸ್ಕರ ಶಕ್ತಿ ಮಂತ್ರಗಳನ್ನು ಕಲಿತು ಭೈರವಿಯ ಕೈಯಲ್ಲಿ ತನ್ನ ಆಜ್ಞೆಗಳನ್ನು ನೆರವೇರಿಸಿಕೊಂಡನು. [ಮ. ಮಂ. ಸರ್ಗ 6 ಶ್ಲೋ॥ 50-51.]

ನಂತರ ಶಂಕರನು ವಿಶ್ವರೂಪನೆಂಬೊಬ್ಬ ಬ್ರಾಹ್ಮಣನ ಮನೆಗೆ ಹೋದನು. ಇವನ ಕಡೆಗಣ್ಣು ನೋಟದಿಂದ ಇವನ ಮನೋಭಿಪ್ರಾಯವನ್ನು ಬ್ರಾಹ್ಮಣನ ಹೆಂಡತಿಯು ತಿಳಿದವಳಾಗಿ ಅವರಿಬ್ಬರ ಮನಸ್ಸುಗಳೂ ಒಂದಾದವು. ಶಂಕರನು ಮನೆಯ ಮುಂದೆ ಅಂಗಳದಲ್ಲಿ ಅಡಗಿಕೊಂಡಿದ್ದು ಅರ್ಧರಾತ್ರಿಯ ಸಮಯದಲ್ಲಿ ಸಂಜ್ಞಾ ಧ್ವನಿಯನ್ನು ಮಾಡಿದನು. ವಿಶ್ವರೂಪನ ಹೆಂಡತಿಯು ಆ ಕಾಲದಲ್ಲಿ ಕುಂಬಳಕಾಯಿ ಬಿದ್ದ ಸದ್ದಿನಿಂದ ಭಯಪಟ್ಟವಳಂತೆ ಹೊರಗೆ ಬಂದಳು. ತನ್ನ ಪತಿಯು ನಿದ್ರಿಸಿದ ತಕ್ಷಣವೇ ಚೆನ್ನಾಗಿ ತುಂಬಿ ಬೆಳೆದ ಅಂಗಾಂಗಗಳುಳ್ಳ ಆ ದುರ್ಭಿಕ್ಷುಕನು ಉನ್ನತವಾದ ಸ್ತನ ಜಘನಗಳುಳ್ಳ ಆಕೆಯ ಸಂಗಡ ರಮಿಸಿದನು. ನಂತರ ಸದ್ದು ಮಾಡದೆ ಹೋಗಿ ತನ್ನ ಗಂಡನ ಮಗ್ಗುಲಲ್ಲಿ ಮಲಗಿದಳು. ಅದುವರಿಗೆ ಎಚ್ಚತ್ತಿದ್ದ ಗಂಡನ ಅನುಮಾನಗಳನ್ನು, ಕುಂಬಳಕಾಯಿ ಬಿದ್ದ ಸುಳ್ಳು ಕಥೆಯಿಂದ ಸಮಾಧಾನ ಮಾಡಿದಳು. ನಂತರ ಶಂಕರನು ವಿಶ್ವರೂಪನೊಂದಿಗೆ ವಾದಿಸಬೇಕೆಂದು ಉದ್ದೇಶಿಸಿ

ಅವನ ಸಂಗಡ ಹೀಗೆಂದನು. " ನಮ್ಮ ವಾಗ್ಯುದ್ಧಕ್ಕೆ ನಿನ್ನ ಹೆಂಡತಿಯು ನ್ಯಾಯಾಧಿಪತಿಯಂತೆ ಇರಲಿ. ಸೋತವರು ಆಶ್ರಮವನ್ನು ಒಪಲಾಯಿಸಬೇಕು ಎಂದು ಕರಾರು ಇರಲಿ " ಹೀಗೆ ಹೇಳಿ ವಿಶ್ವರೂಪನ ಸಂಗಡ ವಾದಕ್ಕಾರಂಭಿಸಿದನು. ವಿಶ್ವರೂಪನ ಹೆಂಡತಿಯು ತನ್ನ ಗಂಡನೇ ಸೋತನೆಂದು ತೀರ್ಮಾನ ಮಾಡಿದಳು. ನಂತರ ವಿಶ್ವರೂಪನು ಸನ್ಯಾಸಿ ಯಾದನು. ಮತ್ತು ಶಂಕರನು ಅವನ ಹೆಂಡತಿಯು ಸಂಗಡ ರಮಿಸುತ್ತಿದ್ದನು. [ಮ. ಮಂ. ಸರ್ಗ 7 ಶ್ಲೋ॥ 1-8.]

ಹೀಗಿರಲು ಒಂದು ಸಲ ಅವನು ಶ್ವಾಸರೋಗವು ಜ್ವರವು ಮತ್ತು ಮೂತ್ರ ಸಂಬಂಧವಾದ ರೋಗವು ಇವುಗಳಿಂದ ಪೀಡಿಸಲ್ಪಟ್ಟು ಅವನ ಮಾತುಗಳು ತೊದಲುವುದಕ್ಕೆ ಪ್ರಾರಂಭಿಸಿತು, ಮೋಸಗಾರನೂ ಮತ್ತು ವೇದವನ್ನು ದ್ವೇಷಿಸತಕ್ಕ ಅವನ ಶಿಷ್ಯರು ತಮ್ಮ ಗುರು ಸಾಯುವದಕ್ಕಿರುವುದನ್ನು ನೋಡಿ ಚಿಂತಾಕ್ರಾಂತರಾಗಿ ಆತನನ್ನು ಕುರಿತು " ಶ್ರೇಷ್ಠನಾದ ಗುರುವೇ! ಇನ್ನುಮೇಲೆ ನಮ್ಮ ಮುಖ್ಯ ಕರ್ತವ್ಯವೇನು " ಎಂದು ಕೇಳಿದರು. ಅದಕ್ಕೆ ಅವನು " ನಮ್ಮ ಕೆಲಸಗಳೆಲ್ಲಾ ಮುಗಿದಂತೆಯೇ ಆಯಿತು. ನೀವುಗಳು ಹೋಗಿ ಜಾಗ್ರತೆಯಾಗಿ ಪರತೀರ್ಥ್ಯರ ಶಿಷ್ಯರನ್ನು ನಾಶಮಾಡಬೇಕು. ಪರತೀರ್ಥ್ಯರು ಸ್ವಾಭಾವಿಕವಾಗಿ ಶಾಪವನ್ನು ಆಗಲಿ ಅನುಗ್ರಹವನ್ನೇ ಆಗಲಿ ಕೊಡಲು ಶಕ್ತಿಯುಳ್ಳವರಾಗಿದ್ದಾರೆ. ಅವರು ದೊಡ್ಡ ತಪಸ್ಸನ್ನು ಮಾಡಿ ತಮ್ಮ ಶರೀರವನ್ನು ಬಿಟ್ಟು ಹೊರಟು ಹೋದರು ಅವರ ಜ್ಞಾನವು ನಿಶ್ಚಲವಾದದ್ದು ಮತ್ತು ಅವರನ್ನು ಯಾರೂ ಹಿಡಿಯಲಾರರು. ಹರಿದ್ವೇಷಿಗಳನ್ನು ನಾಶಮಾಡುವಷ್ಟು ಶಕ್ತಿಯು ಅವರಿಗೆ ಇದ್ದಾಗ್ಯೂ ಅವರು ಇತರರಿಗೆ ಅಗೋಚರರಾಗಿ ಹಿಮವತ್ಪರ್ವತದಮೇಲೆ ವೇದಗಳಿಗೆ ವ್ಯಾಖ್ಯಾನವನ್ನು ಮಾಡುತ್ತಿರುವರು. ಅವನ ಶಿಷ್ಯನು ಅತಿ ನಿಪುಣನು ಶಾಂತನೂ ಆಗಿ ವೇದ ವೇದಾಂತಕೋವಿದನಾಗಿದ್ದಾನೆ. ತಪೋಮಯರಾದ ಐದಾರು ಜನ ಶಿಷ್ಯರಿಗೆ ಶ್ರುತಿ ವ್ಯಾಖ್ಯಾನಗಳನ್ನು ಹೇಳುತ್ತಿದ್ದಾನೆ. ಓ ಅಸುರಶ್ರೇಷ್ಠರಿರಾ! ವೇದ ವೇದಾಂತ ಸಂಪ್ರದಾಯಗಳನ್ನರಿತವರು ಮತ್ಯಾರೂ ಇಲ್ಲ. ನೀವು ಆ ಸನ್ಯಾಸಿಗಳ ಹತ್ತಿರ ಹೋಗಿ ಅವರನ್ನು ನಿರ್ಭಯವಾಗಿ ಕೊಂದುಹಾಕಿರಿ " ಹೀಗೆ ಹೇಳಿದ ನಂತರ ಅವರಲ್ಲಿ ಬಲಿಷ್ಠರಾದ ನಾಲ್ಕು ಜನ ದೊಡ್ಡ ದೈತ್ಯರನ್ನು ಕರೆದು ಹೀಗೆಂದನು. "ಶಿಷ್ಯರಿರಾ! ಬೀಜಾದನನ್ನು ಕುರಿತು ನನ್ನ ಈ ಭವಸಂಕಟದ ವಿಷಯವಾಗಿ ವಿಚಾರಿಸಿಕೊಂಡು ಬನ್ನಿ " ಎಂದು ಹೇಳಿದನು. ಅವರು ವಾಪಸು ಬಂದಮೇಲೆ "ನೀವು ಬೀಜಾದನನ್ನು ನೋಡಿದ್ದಿರಾ? ನನಗೆಮುಂದೇನಾಗುವುದೆಂದು ಹೇಳಿದನು " ಎಂದು ಕೇಳಿದನು. ಹೀಗೆ ಕೇಳಲ್ಪಟ್ಟು ಅವರು ಏಕಾಂತವಾಗಿ ತಮ್ಮ ಗುರುವಿನ ಸಂಗಡ ಮಾತನಾಡಿದರು. ಅವರಲ್ಲಿ ಒಬ್ಬನು " ನಮಗೆ ಸಿಕ್ಕಿದ ಪ್ರತಿಯೊಬ್ಬನನ್ನೂ ನಮ್ಮ ಗುರುವಿಗೆ ಮುಂದೆ ಗತಿ ಏನಾಗುವುದೆಂದು ಕೇಳಿದೆವು. ಯಾರೂ ಹೇಳಲಿಲ್ಲಾ." ಎಂದನು, ಮತ್ತೊಬ್ಬನು "ಒಬ್ಬ ಚಂಡಾಲನು ಚೆಂಡಾ

ಡುತ್ತ "ಶಂಕರನಿಗೆ ಎರಡು ಜನ್ಮಗಳು, ಪದ್ಮಪಾದನಿಗೆ ಒಂದು ಜನ್ಮವು ಮತ್ತೆ ನನಗೆ ಜನ್ಮವೇ ಇಲ್ಲ ಎಂದು ಹೇಳುತ್ತಿದ್ದನು. ಶಬರರು ಬರುತಕ್ಕ ಕುಟೀರದಲ್ಲಿ ಆ ಚಂಡಾಲನು ಆಡುತ್ತಿದ್ದನು." ಎಂದು ಹೇಳಿದನು. ನಂತರ ಶಂಕರನು "ಓ ಬೀಜಾದನೇ ನಮ್ಮ ಗತಿಯು ಮುಂದೇನಾಗುವದು. ನಾನು ಗುಣದಲ್ಲಿ ವ್ಯಾಸ್ಮೃತನಾಗಿದ್ದೇನೆ, ಈ ಬೀಜಾದನೇ ನನ್ನ ಗುಪ್ತನಾದ ಸ್ನೇಹಿತನು" ಎಂದು ಹೇಳುತ್ತ ದೀರ್ಘ ನಿದ್ರೆಯನ್ನು ಹೊಂದಿದನು.

[ಮ. ಮಂ. ಸರ್ಗ 9 ಶ್ಲೋ॥ 16-27.]

ಮಾಯಾವಿಯಿಂದ ಪ್ರೇರಿತರಾದ ಈ ಮೂರ್ಖರು (ಶಂಕರನ ಶಿಷ್ಯರು) ನಂದಿ ಗ್ರಾಮಕ್ಕೆ ಹೋಗಿ ಅಲ್ಲಿ ಮಠವನ್ನು ಸುಟ್ಟುಹಾಕಿದರು. ಭೈರವಿಯು ಶಕ್ತಿಯಿಂದ ಗೋವುಗಳ ಮಂದಗಳನ್ನೂ, ಮಕ್ಕಳನ್ನೂ, ಬ್ರಾಹ್ಮಣರನ್ನೂ, ಹೆಂಗಸರನ್ನೂ ಸಂಹಾರ ಮಾಡಿದರು. ಜನಗಳಲ್ಲೆಲ್ಲಾ ಜ್ವರಗಳು ಬರುವಂತೆ ಮಾಡಿದರು. ಶಿಷ್ಯರ ಸಂಗಡ ಪುರುಷೋತ್ತಮ ಕ್ಷೇತ್ರಕ್ಕಾಗಿ ಹೊರಟಿದ್ದ ಪ್ರಾಜ್ಞ ತೀರ್ಥರ ದಂಡ ಕಮಂಡಲಗಳು ಮುರಿದು ಹಾಕಲ್ಪಟ್ಟವು. ಹಂಸ ಶ್ರೇಷ್ಟರಾದ ಸನ್ಯಾಸಿಗಳನ್ನು ನಿರ್ಜನ ಪ್ರದೇಶಕ್ಕೆ ಅಟ್ಟಿಕೊಂಡು ಹೋಗಿ ಅವರ ಮೇಲೆ ಬಿದ್ದು "ನಮ್ಮ ಮತವನ್ನು ಅವಲಂಬಿಸಿ. ಇಲ್ಲದಿದ್ದರೆ ನಿಮ್ಮನ್ನೆಲ್ಲಾ ಕೊಲ್ಲುವೆವು" ಎಂದು ಹೇಳಿದರು. ಈ ಮಾಯಾವಿಗಳ ಮಾತನ್ನು ಕೇಳಿ ಹಾಗೆಯೇ ನಿಮ್ಮ ಮತವನ್ನವಲಂಬಿಸುವೆವು ಎಂದು ಹೇಳಿದರು. ನಂತರ ಜ್ಞಾನೋತ್ತಮ ನೆಂಬುವನು ಅವರಿಗೆ ದಂಡಗಳನ್ನು ಕೊಟ್ಟು ಅವರ ವೈಷ್ಣವ ಚಿಹ್ನೆಗಳನ್ನು ಅಸುರ ಚಿಹ್ನೆಗಳಾಗಿ ಬದಲಾಯಿಸಿದನು. [ಮ. ಮಂ. ಸರ್ಗ 8 ಶ್ಲೋ॥ 1-6.]

ನಂತರ ವಿಷ್ಣುವಿನಿಂದ ಆಜ್ಞಾಪ್ತರಾಗಿ ವಾಯುದೇವರು ವೇದಗಳನ್ನು ಕೆಡಿಸುತ್ತಿದ್ದ ರಾಕ್ಷಸರನ್ನು ಅಣಗಿಸುವುದಕ್ಕಾಗಿ ಇಂದ್ರಾದಿ ದೇವತೆಗಳ ಪ್ರಾರ್ಥನೆಗನುಸಾರವಾಗಿ ಭೂಮಿಯಲ್ಲಿ ಅವತರಿಸಿದರು. [ಸರ್ಗ 8 ಶ್ಲೋ॥ 34]

ಈಶ್ವರನ ದೇವರ ಗೌರವಕ್ಕೂ ಅವನ ಭಕ್ತರ ಸತ್ಕೀರ್ತಿಗೂ ವಿರೋಧವಾದ ಭಾಗವತದ ವಾಕ್ಯಗಳು.

ಅವನು 'ಅಸಿವನು' ಎಂದರೆ ಅಪಶಕುನ ಸೂಚಕನು. ಅವನ ಹೆಸರು ಮಾತ್ರ 'ಶಿವನು' ಎಂದರೆ ಶಕುನದಾಯಕನು. ತಾನೇ ಮತ್ತನಾಗಿ ಈಶ್ವರನು ಮತ್ತರಾಗಿರುವವರಿಗೆಲ್ಲಾ ಪ್ರಿಯನು. ಅವನು ಪ್ರಮತ್ತರ ದೊರೆ. ಪ್ರಮತ್ತರೆಂದರೆ ಅಜ್ಞಾನಾಂಧಕಾರಮಯರು ಎಂದರ್ಥ. [ಶ್ಲೋ॥ 15.]

ಶಿವನನ್ನು ಪೂಜಿಸಿ ತಪಸ್ಸು ಮಾಡತಕ್ಕವರೂ ಆ ಪೂಜೆಯನ್ನು ಅನುಸರಿಸುವರೂ, ಇವರೆಲ್ಲರೂ ಸತ್ಶಾಸ್ತ್ರಗಳಿಗೆ ಅಡಚಣೆಯಾಗಲಿ ಶುಚಿತ್ವವನ್ನು ಕಳೆದುಕೊಂಡು ಮಂದ ಬುದ್ಧಿಗಳಾಗಿ ಜಟಾ ವಿಭೂತಿಗಳನ್ನು ಧರಿಸಿರುವವರೆಲ್ಲರೂ ಮದ್ಯವನ್ನು ದೇವತೆಯಾಗಿ ವುಳ್ಳ ಶಿವನ ಗುಂಪಿಗೆ ಸೇರಲಿ. [ಶ್ಲೋ॥ 29.]

ಕಾಲನ ಸಂಕಲೆಗಳಿಂದ ಬಿಡಿಸಿಕೊಳ್ಳುವದಕ್ಕೆ ಇದೊಂದೇ ಮಾರ್ಗ. ಹಿಂದೇ ಹೋಗಿರುವ ಋ ಹಿ ಗ ಳೆ ಲ್ಲ ರೂ ಈ ಮಾರ್ಗವನ್ನನುಸರಿಸಿರುವರು. ಈ ವೈದಿಕ ಮಾರ್ಗಕ್ಕೆ ಜನಾರ್ದನ ಅಥವಾ ವಿಷ್ಣುವೇ ಆಧಾರ ಭೂತನು. ನೀವು ಈ ಸ್ವಚ್ಛವಾದ ಚಿರಜೀವಿಯಾದ ಮಾರ್ಗವನ್ನು ದೂಷಿಸಿ ವೇದ ವಿರೋಧವಾದ ಅಜ್ಞಾನವೇ ದೇವತೆಯಾಗಿ ವುಳ್ಳ ದಾರಿಯನ್ನು ಅನುಸರಿಸುತ್ತೀರಿ. [ಶ್ಲೋ॥ 31-32.]

ಸ್ಕಂದ 4. ಅಧ್ಯಾಯ II.

ಈ ಪ್ರಕಾರವಾಗಿ ಬ್ರಹ್ಮ ರುದ್ರಾದಿಗಳ್ಯಾರೂ ನೃಸಿಂಹ ದೇವರ ಆ ಗ್ರಹದ ಕ್ರೌರ್ಯವನ್ನು ನೋಡಿ ಸಮೀಪಿಸಲಾರದೆ ಹೋದರು.

ಸ್ಕಂದ 7 ಅಧ್ಯಾಯ 9 ಶ್ಲೋ॥ 8.

ಎಲೈ ರಾಜನೇ, ಸರ್ವ ಸ್ವಾಮಿಯಾದ ಪೂರ್ಣ ಪ್ರಜ್ಞನಾದ ವಿಷ್ಣುವೇ ವಿಪರೀತ ಮೋಸಕರವಾದ ಮಾಯೆಯಿಂದ ನಾಶವಾದ ಶಿವನ ಕಾಂತಿಯನ್ನೆಲ್ಲಾ ಪುನಃ ಉತ್ಪನ್ನ ಮಾಡಿದನು. [11-ನೇ ಅಧ್ಯಾಯ ಶ್ಲೋ॥ 51.]

ಉಪೋದ್ಘಾತದಲ್ಲಿ ಪ್ರಚುರ ಕರ್ತರು ಹೇಳಿರುವ ಈ ಕೆಳಗಿನ ವಾಕ್ಯಗಳಿಂದ ಈ ಪುರಾಣದಲ್ಲಿ ಶಿವನಿಗೂ ಆತನ ಶಿಷ್ಯರಿಗೆ ವಿರೋಧವಾದ ಅರ್ಥವನ್ನು ಕೊಡುವ ಮಾತುಗಳು ಉದ್ದೇಶ್ಯಪೂರ್ವಕವಾಗಿ ಪ್ರಯೋಗಿಸಲ್ಪಟ್ಟಿವೆ ಎಂದು ತಿಳಿಯಬರುತ್ತೆ

ವಾಮಹಸ್ತ ಪಥವನ್ನನುಸರಿಸುವವರು ಭಾಗವತವನ್ನು ದೂಷಿಸುತ್ತಾರೆ. ಅವರು ದೂಷಿಸಲಿ. ಅವರನ್ನು ಈ ಗ್ರಂಥವೂ ದೂಷಿಸುತ್ತದೆ.

[ಜೇಪ್ಸ್ಟ್ರಾಂ ಮುಕುಂಜಿಯವರಿಂದ ಛಾಪಿಸಲ್ಪಟ್ಟ ಉಪೋದ್ಘಾತದ 8-ನೇ ಪತ್ರ]

ಮಧ್ವಾಚಾರ್ಯರ ಬ್ರಹ್ಮಸೂತ್ರ ಭಾಷ್ಯದಲ್ಲಿ ಗ್ರಂಥಕರ್ತರು ವರಾಹ ಪುರಾಣದಿಂದ ಈ ಪ್ರಕಾರವಾಗಿ ತೆಗದಿದ್ದಾರೆ.

“ಓ ರುದ್ರನೇ! ಜನಗಳ ಮನಸ್ಸನ್ನು ಉನ್ಮತ್ತವಾಗಿ ಮಾಡುವುದಕ್ಕಾಗಿ ಮಹಾ ಬಲಶಾಲಿಯಾದ ನೀನು ಶಾಸ್ತ್ರಗಳನ್ನು ನಿರ್ಮಾಣ ಮಾಡುತ್ತೀ”

ಯಿನ್ನುವು.ಂದೆ ಸ್ಕಾಂದ ಪುರಾಣದಿಂದ ತೆಗೆದದ್ದಾಗಿ ಈ ಕೆಳಗೆ ಕಂಡಂತೆ ಬರೆದಿದ್ದಾರೆ. "ಓ ಅಚ್ಯುತನೇ! ನಿನ್ನ ಮುಖ ಬಿಂಬವನ್ನು ಬ್ರಹ್ಮ ರುದ್ರಾದಿ ದೇವತೆಗಳಿಂದ ಬೇರೇ ಕಡೆಗ ತಿರುಗಿಸಿದ ತಕ್ಷಣವೇ ಅವರು ಚಂಡಾಲರಿಗಿಂತ ಅಥ ಮರಾಗುತ್ತಿದ್ದಾರೆ.

ಬ್ರಹ್ಮ ವೈವರ್ತಬಿಂದ ಈ ಕೆಳಗೆ ಕಂಡಂತೆ ಬರೆದಿರುವದು. "ನಾನಾಗಲಿ, ಶಿವನಾಗಲಿ, ಯಿತರ ದೇವತೆಗಳಾಗಲಿ ಅತನ ಶಕ್ತಿಯಲ್ಲಿ ಒಂದು ತೃಣವಷ್ಟಾದರೂ ಇಟ್ಟುಕೊಂಡಿಲ್ಲಾ. ಮಗುವು ತನ್ನ ಬೊಂಬೆಗಳ ಸಂಗಡ ಆಡುವಂತೆ ಅಚ್ಯು ತನು ನಮ್ಮ ಸಂಗಡ ಆಡುತ್ತಿರುವನು.

[ಮ. ಭಾಷ್ಯ ಅಧ್ಯಾಯ 1 ಪಾದ 1 ಪುಟ 4.]

ಪ್ಯಾ॥ ರುದ್ರ (ಅಥವಾ ಶಿವನು) ಪ್ರಪಂಚಕ್ಕೆ 28 ಆಗಮಗಳನ್ನು ನಾಲ್ಕು ವೇದಗಳನ್ನು ತೋರಿಸಿರುವನು. ವೇದಗಳಿಗಾಗಿ ಬೇರೇ ಬೇರೇ ಮತದವರು ಹೊಡೆದಾಡುವರು. ಆದರೆ 28 ಶಿವ ಆಗಮಗಳಿಗಾಗಿ ಹೊಡೆದಾಟವೇ ಯಿಲ್ಲಾ. ಇದರಿಂದ ಆಗಮಗಳ ಪ್ರಾಮಾಣ್ಯವು ಹೋಗಿ ಶೈವರಿಗನುಸಾರವಾಗಿ ಶಿವನು ಜನ ಗಳನ್ನು ಈ ಆಗಮಗಳಿಂದ ಮೋಸಗೊಳಿಸುತ್ತಿದ್ದಾನೆ.

ಪುನಃ ಭಾಗವತದಲ್ಲಿ ಶೈವ ಮತದಲ್ಲಿ ಜಗತ್ತಿಗೆಲ್ಲಾ ಒಡೆಯನಾದ ಶಿವನು ವಿಷ್ಣುವಿನನ್ನು ಕುರಿತು "ಆತ್ಮಜ್ಞಾನಿಗಳ ಒಳ್ಳೆಯದಕ್ಕಾಗಿ ನಿನ್ನ ಔನ್ನತ್ಯವು ಸಾದಕವಾಗಿದೆ" ಆದ್ದರಿಂದ ನನಗೆ ಒಳ್ಳೆಯದನ್ನು ಮಾಡು, ನೀನು ಸರ್ವಕಾಲ ದಲ್ಲಿಯೂ ಸೌಖ್ಯಮಯನಾಗಿರುತ್ತೀ. ಆದ್ದರಿಂದ ನಿನಗೆ ನಾನು ವಂದಿಸುತ್ತೇನೆ. ನೀನು ಬ್ರಹ್ಮನಿಗೂ ಅಧಿಕನಾಗಿ ಇಂದ್ರಿಯಗಳಿಗೆ ಅಗೋಚರವಾದ ಭೂತಗಳಿಗೂ ಇಂದ್ರಿಯ ಜ್ಞಾನಕ್ಕೂ ಮೂಲ ಭೂತನಾಗಿ ಮತ್ತು ಸರ್ವವ್ಯಾಪಿಯಾಗಿ ಸ್ವಪ್ರಕಾಶ ನಾಗಿರುವಿ. [ಭಾಗವತ ಸ್ಕಂದ 4 ಅಧ್ಯಾಯ 24 ಶ್ಲೋ॥ 33-34]

ಪ್ರಬೋಧ ಚಂದ್ರೋದಯದಿಂದ:—

ಒಂದೊಂದು ಮತದವರು ಯಿತರ ಮತದವರನ್ನು ಬಹಳವಾಗಿ ದೂಷಿಸುವ ದನ್ನು ತೋರಿಸುವ ವಾಕ್ಯಗಳು.

ಈ ಬೌದ್ಧರು ಭಿಕ್ಷಾಟನೆಗಾಗಿಯೇ ಸನ್ಯಾಸಿಗಳಾಗುವರು. ಅವರು ತಲೆ ಯನ್ನು ನುಣ್ಣಗೆ ಬೋಳಿಸಿಕೊಂಡು ಮಹಾ ಜ್ಞಾನಿಗಳೆಂದು ಅಹಂಕಾರ ಪಡು ತ್ತಾರೆ. ಇವರು ವೇದಾಂತಗಳನ್ನು ಹಾಳುಮಾಡುತ್ತಾರೆ. ಆದ್ದರಿಂದ ಅವ ರೊಡನೆ ಸಂಭಾಷಣೆಕೂಡ ಮಹಾ ಪಾಪ ಘಟನೆಗೆ ಕಾರಣವಾಗುತ್ತೆ. ಮತ್ತು

ಶೈವರು ಪಾಶುಪತಿಗಳು ಬೇರೇ ಇರುವರು. ಅವರು ಅಕ್ಷಪಾದನ ವೇದಾಂತವನ್ನು ಅಪಾರ್ಥದಿಂದ ಕಲಿತು ಇದ್ದಾರೆ. ಇವರು ವೇದಕ್ಕೆ ವಿರೋಧಿಗಳಾದ ಪಶುಗಳು. ಅವರೊಡನೆ ಸಂಭಾಷಣೆಯಿಂದ ನರಕಪ್ರಾಪ್ತಿ ಯಾಗುತ್ತೆ. ಆದುದರಿಂದ ಇವರನ್ನು ನೋಡಬಾರದು. [ಪೇ. 26].

ಕಪಿಲಕನು ಕೋಪದಿಂದ ಓ ಪಾಪಿಷ್ಠನೇ ನಾಸ್ತಿಕರಲ್ಲಿ ಅಧಮನಾದವನೇ ನುಣ್ಣಗೆ ಬೋಳಾದ ತಲೆಯುಳ್ಳ ಪಂಚಮ ಯೋಗ್ಯ ಶರೀರ ವುಳ್ಳವನೇ ಇತ್ಯಾದಿ.

ಕಪಿಲಕನು ಓ ಪಾಪಿಷ್ಠನೇ! ಪುನಃ ಆಕ್ಷೇಪಿಸಿ ದೇವರು ಗಾರುಡಿಗಾರನೆಂದು ಹೇಳುವಿಯಾ? [ಪೇ. 69]

ಅರ್ಜೀದಾರರು ಆಕ್ಷೇಪಿಸಿದ ಬಸವ ಪುರಾಣದ ವಾಕ್ಯಗಳಿಗೆ ಪ್ರಮಾಣ ವಿಲ್ಲದೇ ಇಲ್ಲವೆಂದು ಸೂಚಿಸುವ ಸೂತ ಸಂಹಿತ ಸ್ಕಾಂದಪುರಾಣ ಮತ್ತು ವ್ಯಾಸರ ಇತರ ಗ್ರಂಥಗಳಿಂದ ತೆಗೆದ ವಾಕ್ಯಗಳು ಸೂತ ಸಂಹಿತೆಯು, ಸ್ಕಾಂದ ಪುರಾಣವು ವ್ಯಾಸರು ಮಾಡಿದ ಗ್ರಂಥಗಳೇ ಕಲಿಯುಗದಲ್ಲಿ ವೇದಮಾರ್ಗಗಳಿಗೆ ವಿರೋಧಿಗಳಾದ ಜನರು ನಿಶ್ಚಯ ಸ್ವಭಾವ ವುಳ್ಳ ಶಿವನನ್ನು ಪೂಜಿಸುವದಿಲ್ಲ. ಈ ಶಿವನು ಜಗನ್ನಿಯಾಮಕನೂ, ವೇದ ಪ್ರತಿಪಾದ್ಯನೂ, ಸರ್ವಶಕ್ತನೂ, ಚಂದ್ರಧರನೂ ಆಗಿದ್ದಾನೆ ಈ ವೇದ ದ್ವೇಷಿಗಳು ವಿಭೂತಿಯಿಂದ ಮೂರು ಗೆರಗಳನ್ನು ತೆಗೆಯುವದಿಲ್ಲ. ಮತ್ತು ವೇದದಲ್ಲಿ ಹೇಳಿದಂತೆ ರುದ್ರಾಕ್ಷೀಕ್ಷೆಯನ್ನು ಧರಿಸುವದಿಲ್ಲ. ಶಿವಲಿಂಗದಲ್ಲಿ ರುದ್ರ ಎಂದೆನಿಸಿಕೊಂಡಿರುವವನನ್ನು ಅವರು ಪೂಜಿಸುವದಿಲ್ಲ.

[ಶ್ಲೋ॥ 36-40.]

ವೇದಮಾರ್ಗ ದ್ವೇಷಿಗಳು ಹುಚ್ಚರಂತೆ ತಮ್ಮ ಹಣೆಯ ಮೇಲೆ ಪೂರ್ಧ್ವ ನಾಮವನ್ನು ಅಥವಾ ಗುಂಡಗಿರುವ ಅಥವಾ ಅರ್ಧ ಚಂದ್ರಾಕೃತಿಯ ಗುರು ತನ್ನು ಧರಿಸುವರು. ವೇದಮಾರ್ಗ ದ್ವೇಷಿಗಳು ಅಜ್ಞಾನದಿಂದ ಶಂಖಚಕ್ರ ಗದೆಗಳ ಗುರ್ತುಗಳನ್ನು ಶರೀರದ ಮೇಲೆ ಧರಿಸುವರು. [ಶ್ಲೋ॥ 55-56.]

ಸೂತಸಂಹಿತ ಬ್ರಹ್ಮಗೀತ ಅಧ್ಯಾಯ 2.

ಭಕ್ತಿಪೂರ್ವಕವಾಗಿ ವಿಭೂತಿಯಿಂದ ಮೂರು ಗೆರಿಗಳನ್ನು ಮೈಮೇಲೂ ಹಣೆಯ ಮೇಲೂ ಯಾರು ಧರಿಸುವದಿಲ್ಲವೋ ಅವರು ಪಾಪಿಗಳು.

ವಿಭೂತಿ ಧಾರಣೆಗೆ ದ್ವೇಷವನ್ನು ಅದರಿಂದ ಪಾಪ ಬರುವುದೆಂದು ಸೂಚಿಸುವುದಕ್ಕೆ ಮೇಲಿನ ವಾಕ್ಯಗಳಿಂದ ಅಗಬಹುದು. [ಶ್ಲೋ॥ 57.]

ವೀಭೂತಿಯನ್ನು ಬಳಿದುಕೊಳ್ಳಬೇಕೆಂಬ ಆಶೆಯೇ ಇಲ್ಲದವರೂ ಅಂಥವರನ್ನು ನೋಡದೆಯೂ ಅಂಥವರ ವಿಷಯವಾಗಿ ಕೇಳದೆಯೂ ಯಿರುವವರು ಪಾಪಿಗಳು.

[ಶ್ಲೋ॥ 59.]

ಸೂತಸಂಹಿತ ಯಜ್ಞಾವ್ಯ ಭಾವಕಾಂಡ.

ಓ ನೀಚರಾದ ದುಷ್ಟರಾದ ಬ್ರಾಹ್ಮಣರಿರಾ? ನೀವು ಎಂದೆಂದಿಗೂ ಮಹ ದೇವನ ಜ್ಞಾನಾರ್ಜನೆಗೂ ಅವನನ್ನು ದೇವರೆಂದು ಒಪ್ಪಿಕೊಳ್ಳುವದಕ್ಕೂ ಆತನ ಸಂಬಂಧವಾದ ಯಾತ್ರಾ ಸ್ಥಳಗಳಿಗೆ ಹೋಗುವದಕ್ಕೂ ಆತನ ಪ್ರಕಾಶಕ್ಕೂ ಬಾಹ್ಯ ರಾಗಿರಿ. ಆತನ ವಿಷಯದಲ್ಲಿ ದಯಾಳುತ್ವಕ್ಕೂ ಆತನ ಪ್ರಕಾಶಕ್ಕೂ ನೀವು ದೂರವಾಗಿರಿ.

ರುದ್ರಾಕ್ಷಿಗಳು ಮತ್ತು ಭಸ್ಮವನ್ನು ಧರಿಸುವದಕ್ಕೆ ನಿಮಗೆ ಯೋಗ್ಯತೆ ಯಿಲ್ಲದೆ ಹೋಗಲಿ. ಅವನ ಗುಡಿಗಳಿಗೆ ಹೋಗಲು ನಿಮಗೆ ಯೋಗ್ಯತೆ ಯಿಲ್ಲದಿರಲಿ. ರುದ್ರನ ಸಂಬಂಧವಾದ ಪ್ರತಿಯೊಂದಕ್ಕೂ ನೀವು ಬಾಹ್ಯರಾಗಿರಿ.

[ಶ್ಲೋ॥ 22-23.]

ಓ ಬ್ರಾಹ್ಮಣಾಧಮರಿರಾ! ವಿಷ್ಣುವು ಮತ್ತು ಇತರ ದೇವತೆಗಳೆಲ್ಲಾ ಶಿವನಿಗಿಂತ ದೊಡ್ಡವರೆಂಬ ಹುಚ್ಚು ನಂಬಿಕೆಯೇ ನಿಮಗೆ ಇರಲಿ. ಓ ಬ್ರಾಹ್ಮಣಾಧಮರಿರಾ! ನೀವು ಭಕ್ತಿಯಿಂದ ಚಕ್ರ - ಶಂಖ - ಗದೆ - ಕಮಲನಾಳ - ಹಗ್ಗ - ಕುಂಬಳಕಾಯಿ ಇಂಥವುಗಳ ಗುರ್ತುಗಳನ್ನೆಲ್ಲಾ ಮೈಮೇಲೆ ಸುಟ್ಟುಕೊಳ್ಳಿ.

[ಶ್ಲೋ॥ 32-33]

ಓ ನೀಚ ಬ್ರಾಹ್ಮಣರಿರಾ! ಪಂಚರಾತ್ರ ಕಪಾಲದಲ್ಲಿಯೂ ಕಲಾಮುಖದಲ್ಲಿಯೂ ನಿಮ್ಮ ನಂಬಿಕೆಯೂ ಇರಲಿ.

ಅರ್ಜಿದಾರರಲ್ಲಿ ಅನೇಕರಾದ ಮಾಧ್ವರು ಪಾಂಚರಾತ್ರರ ಒಂದು ಪಂಗಡದವರು.

ನಾನು ಹೆಚ್ಚು ಹೇಳಲೇಕೆ? ಈ ಸಂಸಾರ ಚಕ್ರಬಂಧನ ವಿಮೋಚನಕ್ಕೆ ಏಕ ಕಾರಣನಾದ ಶಿವನಲ್ಲಿಯೂ, ಶಾಸ್ತ್ರಗಳಲ್ಲಿಯೂ, ಸ್ಮೃತಿಗಳಲ್ಲಿಯೂ ನಿಮಗೆ ನಂಬಿಕೆ ಯಿಲ್ಲದೇ ಯಿರಲಿ. ನಿಮ್ಮ ಹೆಂಗಸರು ನಿಮ್ಮ ಸಂತತಿಯವರೂ ಸಹ ಶಿವನಲ್ಲಿಯೂ, ಶಿವ ಸಂಬಂಧ ಶಾಸ್ತ್ರಗಳಲ್ಲಿಯೂ ನಂಬಿಕೆ ಯಿಲ್ಲದಿರಲಿ. ಋಷಿಯು ಹೀಗೆಂದು ಯಿವರನ್ನು ಶಾಪಿಸಿದ ಕ್ಷಣವೇ ಬ್ರಾಹ್ಮಣರೂ ಅವರ ಸಂತತಿಯವರೂ ಎಲ್ಲರೂ ಹಾಗೆಯೇ ಆದರು. ಋಷಿಯ ಶಾಪವು ಇಂಥಾದ್ದು. [ಶ್ಲೋ॥ 43-45]

ಸೂತಸಂಹಿತೆ ಯಜ್ಞವೈ ಭಾವಕಾಂಡ 32-ನೇ ಅಧ್ಯಾಯ.

ಅನೇಕ ಜನ್ಮಗಳಿಂದಲೂ ಶಾಸ್ತ್ರೋಕ್ತ ನಡತೆಗಳನ್ನು ಅವಲಂಬಿಸಿದ್ದರಿಂದಲೂ ಶ್ರೇಷ್ಠರಾದವರು ಮಾತ್ರವೇ ವಿಷ್ಣುವಿನಿಗಿಂತ ಶಿವನೇ ಅಧಿಕನೆಂದು ಹೇಳುವರು. ಪಾಪರಾಶಿಯನ್ನು ಅಸಂಖ್ಯಾತವಾಗಿ ಹೊತ್ತುಕೊಂಡಿರುವರು. ಹರನಿಗಿಂತ ಹರಿಯೇ ಅಧಿಕನೆಂದೆನ್ನುವರು. ಹೀಗೆ ಹೇಳುವವರಿಗೆ ಎಂದಿಗೂ ಈ ಸಂಸಾರ ಕೂಪವೇ ಗತಿ. [ಶ್ಲೋ॥ 42-43.]

ಓ ದ್ವಿಜರೇ ಮತ್ತು ಬ್ರಾಹ್ಮಣೋತ್ತಮರೇ ! ತಲೆಯು ಕೈಕಾಲುಗಳು ಒಂದೇ ದೇಹದ ಭಾಗಗಳಾಗಿದ್ದರೂ, ತಲೆಗೂ ಪಾದಗಳಿಗೂ ಹೋಲಿಕೆ ಯಿಲ್ಲ. ಬಾಯಿಯೂ ಬಾಹುಗಳೂ ರಂಧ್ರಗಳೇ ಆಗಿದ್ದರೂ ಕೂಡ ಬಾಹುಗಳನ್ನ ತಲೆಯೊಂದಿಗೆ ಹೋಲಿಸಲಿಕ್ಕಾಗುವದಿಲ್ಲ. ಹಾಗೆಯೇ ವಿಷ್ಣುವು ಮತ್ತು ಉಳಿದವರಾ ಶಿವಸಂಗಡ ಹೋಲಿಸಲ್ಪಡಲಾರರು. [ಶ್ಲೋ॥ 63-64.]

ಶಿವ ಭಕ್ತರ ಪೂಜೆಮಾಡಿ ಅವನು ಕರ್ಮ ಬಂಧದಿಂದ ವಿಮುಕ್ತನಾದನು. ಮತ್ತೂ ವ್ಯಾಸರ ಎರಡನೆಯ ಮಗನು ತನ್ನ ಆಸ್ತಿಯೆಲ್ಲಾ ಶಿವ ಭಕ್ತರಿಗೆ ಕೊಟ್ಟು ಅವರನ್ನು ಪೂಜಿಸಿದ್ದರಿಂದ ಮೋಕ್ಷವನ್ನೂ ಸ್ವರ್ಗ ಸುಖವನ್ನೂ ಹೊಂದಿದನು, ಶಿವ ಭಕ್ತರ ಪೂಜೆಯಿಂದ ಇಹಲೋಕದಲ್ಲಿ ಸೌಖ್ಯ ಸಂಪತ್ತುಗಳೂ ಪರಲೋಕದಲ್ಲಿ ಮುಕ್ತಿಯೂ ಆಗುವವು. ಇತರ ದಾರಿಗಳಲ್ಲಿ ಇವು ಆಗಲಾರವು. ಶಿವಭಕ್ತರ ಪೂಜೆಯಿಂದ ಪರಮಾತ್ಮನು ಸಂತೋಷಪಟ್ಟು ಅಂಬಿಕಾಪತಿಯೂ (ಶಿವನು) ಋಷಿಗಳ ಎದುರಿಗೆ ಕುಣಿದಾಡಿದನು.

[ಶ್ಲೋ॥ 14-16-46-56-57.]

ಸೂತಸಂಹಿತ ಶಿವ ಮಹಾತ್ಮ್ಯಕಾಂಡ ಅಧ್ಯಾಯ 6.

ವಿಷ್ಣುವೇ ಮುಖ್ಯ ದೈವವೆಂದು ಹೇಳಿದ ವ್ಯಾಸರು ಕಾಶಿಯ ಪರಾಜಿತರಾದಂತೆ ಸ್ಕಾಂದ ಪುರಾಣದಲ್ಲಿನ ಕಥೆ.

ವ್ಯಾಸರು " ಜನಾರ್ದನನಲ್ಲದೆ ಮತ್ಯಾರೂ " ಇಹಲೋಕದಲ್ಲಿ ಸೌಖ್ಯವನ್ನು ಪರಲೋಕದಲ್ಲಿ ಮುಕ್ತಿಯನ್ನು ಕೊಡಲಾರರಾದ್ದರಿಂದ ಸೌಖ್ಯವನ್ನಪೇಕ್ಷಿಸ ತಕ್ಕ ಸರ್ವರೂ ಚತುರ್ಭುಜನಾಗಿಯಾದ ವಿಷ್ಣುವನ್ನೇ ಸೇವಿಸಬೇಕು. [ಶ್ಲೋ॥ 15.]

ಅಲ್ಪಬುದ್ಧಿಯನ್ನು ಕೋರುವವರು ಕೇಶವನನ್ನು ಬಿಟ್ಟು ಮತ್ತೊಬ್ಬ ದೈವವನ್ನು ಹಿಡಿಯಬೇಕು. ಅಲ್ಲದೆ ಅನೇಕಸಲ ಈ ಭೂಲೋಕದಲ್ಲಿ ಜನ್ಮವನ್ನೆತ್ತುತ್ತಿರಬೇಕು. [ಶ್ಲೋ॥ 16.]

ಅತ್ಯುತ್ತಮವಾದವಿಕ್ಕಿಂತ ಪುತ್ತಮನಾದವನು ವಿಷ್ಣುವೇ ಅವನನ್ನು ಆರಾಧಿಸುವರು ಮೂರು ಲೋಕಗಳಿಂದಲೂ ಆರಾಧಿಸಲ್ಪಡಲು ಯೋಗ್ಯರಾಗಿರುತ್ತಾರೆ.
[ಶ್ಲೋ॥ 17.]

ಪುನಃ ತಮ್ಮ ಶಿಷ್ಯರ ಮಧ್ಯದಲ್ಲಿ ಬಲಕೈಯನ್ನು ಎತ್ತಿ ಅತ್ಯುಚ್ಚಸ್ವರದಿಂದ ಹಾಡುತ್ತ ಇದೇ ಶ್ಲೋಕಗಳನ್ನು ಹಾಡಿದನು. [ಶ್ಲೋ॥ 54.]

ಈ ಮಾತುಗಳನ್ನೆಲ್ಲಾ ಚೆನ್ನಾಗಿ ಕಡೆದುನೋಡಿ ಅವುಗಳ ವಿಷಯದಲ್ಲಿ ಚೆನ್ನಾಗಿ ಪರ್ಯಾಲೋಚಿಸಿದರೆ "ಸರ್ವರಿಂದಲೂ ಪೂಜೆಗೆ ಅರ್ಹನಾದವನು ಸರ್ವಜಗತ್ತಿಗೂ ಸ್ವಾಮಿಯಾದ ಹರಿಯೊಬ್ಬನೇ" ಎಂದು ನಿರ್ಧರಿಸಲ್ಪಡುವುದು.
[ಶ್ಲೋ॥ 45.]

ವಿಷ್ಣುವಿನ ಶ್ರೇಷ್ಠತ್ವವನ್ನು ಬೋಧಿಸುವ ಈ ಶ್ಲೋಕಗಳನ್ನು ವ್ಯಾಸರು ಬಲಗೈಯನ್ನು ಎತ್ತಿಕೊಂಡು ಹೇಳಿದ ಕ್ಷಣವೇ ಆತನ ನಗ ಸಿಲಾದನು ಅದನ್ನು (ಕೈಯನ್ನು) ಅವನ ನಾಲುಗೆಯನ್ನೂ ವಾಯುಪಿಸಿಂದ ಕಟ್ಟಿಗೆಯಂತೆ ನಿಲ್ಲುವ ಹಾಗೆ ಮಾಡಿಬಿಟ್ಟನು. [ಶ್ಲೋ॥ 48.]

ನಂತರ ಸತ್ಯವತೀ ಪುತ್ರನು (ವ್ಯಾಸರು) ಹೀಗೆ ಸೆಳೆದುಕೊಂಡು ಹೋದಕೈ-ನಾಲಿಗೆಗಳುಳ್ಳವನಾಗಿ ಪರಮೇಶ್ವರನನ್ನು ಸ್ತೋತ್ರಮಾಡಲಾರಂಭಿಸಿದನು. ಆತನ ಬುದ್ಧಿಯು ವಿಕಾಶವಾಯಿತು. [ಶ್ಲೋ॥ 55.]

ಈ ಪ್ರಕಾರ ಆ ಮಹರ್ಷಿಯು ಶಂಭುವನ್ನು ಸ್ತೋತ್ರಮಾಡಲು ಆಗ ನಂದೀಶನು ಆತನ ಕೈಯನ್ನು ವಾಸಿಮಾಡಿದನು. [ಶ್ಲೋ॥ 64.]

ಕಾಶೀಕಾಂಡ - ಉತ್ತರಾರ್ಧ ಅಧ್ಯಾಯ 95.

ವ್ಯಾಖ್ಯಾನ॥ ಈ ಭಾಗದಲ್ಲೇನೋ ವ್ಯಾಸರಕೈಯು ಸೆಳೆದುಕೊಂಡು ಹೋಯಿತೆಂದು ಹೇಳಿದ್ದಾರೆ. ಆದರೆ ಬಸವ ಪುರಾಣದಲ್ಲಿ ಹೇಳಿರುವ ಕಥೆಯು ಸಲ್ಪ ಬದಲಾವಣೆಯೇ ಅಷ್ಟೇ.

ಕನ್ನಡದಲ್ಲಿರುವ ದೇವೀ ಪುರಾಣದಲ್ಲಿ ಬ್ರಹ್ಮನಿಂದ ವಿಷ್ಣುವು ಪುಷ್ಪವಿಸಿದಕಥೆ.

ನಾವಿಬ್ಬರೂ (ರುದ್ರ ಮತ್ತು ವಿಷ್ಣು) ದಾರಿ ತಪ್ಪಿ ಹೋದೆವು. ಹೊರಗಣ ಆಕಾಶಕ್ಕೆ ಬರುವದು ನಮ ಗಸಾಧ್ಯವಾಗಿತ್ತು. ನಾನು ಬ್ರಹ್ಮನ ಶಿರಸ್ಸಿನಿಂದ ಈಚೆಗೆ ಬಂದೆನು. ವಿಷ್ಣುವು ಅಧೋಮಾರ್ಗದಿಂದ ಈಚೆಗೆ ಬಂದನು. ಅದ್ದರಿಂದಲೇ ಅವನಿಗೆ ಅಧೋಕ್ಷಜನೆಂದು ಹೆಸರು ಬಂತು. [ಶ್ಲೋ॥ 8 ಅಧ್ಯಾಯ 3.]

ಪದ್ಮರಾಜ ಪುರಾಣದಲ್ಲಿ "ಶಿವರಹಸ್ಯದಿಂದ ಹೀಗೆ ತೆಗೆದು ಬರೆದಿದ್ದಾರೆ. ವಿಷ್ಣುವು ಹೀಗೆ ಹೇಳಿದನು." ಅವನ (ಬ್ರಹ್ಮನ) ಅಧೋಮಾರ್ಗದಿಂದ ನಾನು ಈಚೆಗೆ ಬಂದೆನಾದ್ದರಿಂದ ನನಗೆ ಅಧೋಕ್ಷಜನೆಂದು ಹೆಸರು ಬಂತು.

ಓ ಜಗದಾತ್ಮನೇ! ಶಾಸ್ತ್ರಗಳು ನೀನೇ ದೊಡ್ಡವನೆಂದು ನಿನ್ನನ್ನೇ. ಜಗತ್ತೆಲ್ಲಾ ಆರಾಧಿಸಬೇಕೆಂದು ಹೇಳುತ್ತವೆ. ಇದು ಸುಲಭವಾಗಿ ತಿಳಿಯತಕ್ಕದ್ದಾಗಿದೆ. ದುಷ್ಕರು, ನೀಚರು ಆದವರು ಇದನ್ನು ಕುರಿತು ತರ್ಕಿಸುತ್ತಾರೆ. ನಿನ್ನನ್ನು ದ್ವೇಷಿಸಿ ಹಾಳಾದ ಅವರ ಜೀವನವು ಅತಿ ತುಚ್ಛವಾದದ್ದು. ಇವರ ಮಾತುಗಳನ್ನು ಕೇಳಿದವರು ಪರಿಶುದ್ಧರಾಗುವುದಕ್ಕೆ ಮರಣವು ಒಂದು ಔಷಧ ಪ್ರಾಯವಾಗಿ ನೇಮಿಸಲ್ಪಟ್ಟಿದೆ.

ಶ್ರೀಮಾನ್ ಅಪ್ಪಯ್ಯ ದೀಕ್ಷಿತರ ಶಿವ ತತ್ವ ವಿವೇಕದಲ್ಲಿ 4-ನೇ ಶ್ಲೋಕ.

ಈ ಶ್ಲೋಕಕ್ಕೆ ಗ್ರಂಥಕರ್ತರಿಂದಲೇ ಬರೆಯಲ್ಪಟ್ಟ ವ್ಯಾಖ್ಯಾನದಲ್ಲಿ ಗ್ರಂಥಗಳಿಂದ ಈ ವಾಕ್ಯಗಳನ್ನು ಬರೆದಿದ್ದಾರೆ:— ಸರ್ವರಿಗಿಂತಲೂ ಉತ್ತಮನಾದ ರುದ್ರನನ್ನು ಕುರಿತು ಧ್ಯಾನಿಸುವವರು ಅವರ ನಾಲಿಗೆಗಳಿಂದ ಮಧುರವಾದ ಅಮೃತವನ್ನು ರುಚಿನೋಡುವರು. ಹಾಗೆ ಆತನನ್ನು ಧ್ಯಾನಿಸದೇ ಇರುವವರು ಅಮೇಧ್ಯ ಭಕ್ಷಣ ಮಾಡುತ್ತಾರೆ. ಪೂರ್ವಾರ್ಧಕ್ಕೆ ಪದಶಃ ಮತ್ತು ಉತ್ತರಾರ್ಧಕ್ಕೆ ಸೂಚಿಸಿರತಕ್ಕ ಈ ಅರ್ಥವು ಈ ಮಂತ್ರವನ್ನು ಬೋಧಿಸುವ ಪರಾಶರ ಪುರಾಣದಲ್ಲಿ ಮಂಜು ವಾಕ್ಯವನ್ನು ಆಧಾರವಾಗಿ ವುಳ್ಳದ್ದಾಗಿದೆ.

ಯಾರು ಯಾರು ಅಂತರಂಗದಲ್ಲಿ ಪೂಜಾರ್ಹನಾದ ರುದ್ರನನ್ನು ಧ್ಯಾನಿಸುವರೋ ಅವರು ಮಧುರವಾದ ಅಮೃತವನ್ನು ಸೇವಿಸುವರು. ಹಾಗೆ ಪಾರ್ವತಿ ಸಮೇತನಾದ ಪರಮೇಶ್ವರನನ್ನು ಯಾರು ಧ್ಯಾನಿಸುವದಿಲ್ಲವೋ ಅವರು ತಮ್ಮ ನಾಲಿಗೆಯಿಂದ ಅಮೇಧ್ಯವನ್ನು ಭಕ್ಷಿಸುತ್ತಾರೆ. 5-ನೇ ಶ್ಲೋ॥ ದಲ್ಲಿ ವಿಷ್ಣುವಿನ ಶ್ರೇಷ್ಠತ್ವವನ್ನು ಹೇಳುವವರನ್ನು ನೀಚರೆಂದೂ ದ್ವಿಪಾದ ಪಶುಗಳೆಂದೂ ಕರೆದಿದ್ದಾರೆ.

8-ನೇ ಶ್ಲೋಕದಲ್ಲಿ ತಮ್ಮ ಇಂದ್ರಿಯ ವ್ಯಾಪಾರದಮೇಲೆ ಅವರಿಗೆ ಸ್ವಾತಂತ್ರ್ಯವಿಲ್ಲವೆಂದು ಹೇಳಿದ್ದಾರೆ. ಅವರ ಬುದ್ಧಿ ಬಹಳ ಕೆಟ್ಟದ್ದು. ಹತ್ತನೇಯ ಶ್ಲೋಕದಲ್ಲಿ ಇವರು ದದೀಚಾದಿಗಳಿಂದ ಶಪಿಸಲ್ಪಟ್ಟವರೆಂದೂ ಅವರ ಸ್ವಭಾವ ರಾಕ್ಷಸರ ಸಂಬಂಧವಾದದ್ದೆಂದೂ ಹೇಳಿದೆ,

ಗ್ರಂಥಕರ್ತರು ತಮ್ಮ ಅಭಿಪ್ರಾಯವನ್ನು ಬಲಪಡಿಸುವದಕ್ಕಾಗಿ ಕೂರ್ಮ ಪುರಾಣದಿಂದಲೂ ಕೆಳಗೆ ಕಂಡ ವಾಕ್ಯವನ್ನು ತೆಗೆದು ಬರೆದಿದ್ದಾರೆ.

ಆ ಬ್ರಹ್ಮರ್ಷಿಯು ಹೀಗೆ ಹೇಳಿ ದಕ್ಷನ ಪಕ್ಷವನ್ನು ವಹಿಸಿದ ಈಶ್ವರ ದ್ವೇಷಿಗಳಾದ ಬ್ರಾಹ್ಮಣರನ್ನು ಶಾಪಿಸಿದನು. ನೀವು ವೇದಗಳನ್ನು ತ್ಯಜಿಸಿ ಸರ್ವರಿಗೂ ಒಳ್ಳೆಯವನಾಗಿ ಜಗತ್ತಿನಿಂದೆಲ್ಲಾ ಸ್ತುತಿಸಲ್ಪಡುವ ಈಶ್ವರನನ್ನು ಹೀನಮಾತಾಡಿದ್ದರಿಂದ ನೀವು ಶಾಸ್ತ್ರಬಾಹ್ಯರಾಗಿ ಈಶ್ವರ ದ್ವೇಷಿಗಳಾಗಿರಿ. ನೀವೆಲ್ಲರೂ ನಿಮ್ಮ ಬುದ್ಧಿಗಳನ್ನು ಕುಶಾಸ್ತ್ರಗಳಿಗೆ ನಿಮ್ಮ ಮನಸ್ಸನ್ನು ಕೊಡುವಂತೆ ಆಸಹುಟ್ಟಲಿ ನಿಮ್ಮ ವಿದ್ಯಾವ್ಯಾಸಂಗದಲ್ಲಿ ನೀವು ಮಹಾ ಗರ್ವಕ್ಕೂ ಅಹಂಕಾರಕ್ಕೂ ಗುರಿಯಾಗಿರಿ.

ಕಲಿಯುಗದಲ್ಲಿ ನೀವು ಕಲಹಗಳಿಂದ ಬಾಧಿಸಲ್ಪಟ್ಟು ತಪೋವನಗಳನ್ನು ಬಿಟ್ಟು ನರಕಕ್ಕೆ ಹೋಗಿರಿ. ನೀವು ಮೊರೆಹೋಗುವ ವಿಷ್ಣುವು ನಿಮ್ಮ ಕಡೆಯಿಂದಾಚೆಗೆ ತನ್ನ ಮುಖವನ್ನು ತಿರುಗಿಸುವನು.

ವಿಷ್ಣುವು ಶಿವನ ಶಕ್ತಿಮಾತ್ರವೇ ಎಂದು ಹೇಳುವ ವೀರಶೈವ ಪುಸ್ತಕಗಳಲ್ಲಿನ ವಾಕ್ಯಗಳು.

ಜಗತ್ತಿನಲ್ಲಿ ನಾರಾಯಣನು ಸರ್ವವ್ಯಾಪಿ ಎಂದು ಸ್ಥಾಪಿಸಲ್ಪಟ್ಟಿರುವದ್ದರಿಂದಲೂ, ಆ ನಾರಾಯಣನು ಮಾಯೆ ಮತ್ತು ಶಕ್ತಿ ಇವುಗಳನ್ನು ಅಧೀನದಲ್ಲಿಟ್ಟುಕೊಂಡಿರತಕ್ಕ ಮಹೇಶ್ವರನ ಒಂದು ಅಣುವಿನಷ್ಟು ಅಂಶವಾಗಿರುವದರಿಂದಲೂ.

[ಶಿವಾದ್ವೈತ ಮಂಜರಿ 33-ನೆಯ ಪುಟ.]

ನಿಮ್ಮೆದುರಿಗೆ ಕಾಣುವ ಕಮಲಲೋಚನನಾದ ಇವನು ನನ್ನ ಶಕ್ತಿಯು ಇವನು ಸೃಷ್ಟಿಸಲ್ಪಟ್ಟ ಸರ್ವಕ್ಕೂ ನಿಮ್ಮಗೂ ಕಾರಣ ಭೂತನಾದವನು. ಆತನ ಆಜ್ಞೆಯು ನನ್ನ ಆಜ್ಞೆಯೆಂದೂ ಆತನ ಸೇವೆಯು ನನ್ನ ಸೇವೆಯೆಂದೂ ತಿಳಿಯಿರಿ. ನನಗೆ ನಮಸ್ಕರಿಸುವಂತೆ ಅವನಿಗೂ ನಮಸ್ಕರಿಸಿ. [ಶ್ಲೋ॥ 42.]

ಓ ದೇವಿಯೇ; ಆಕಾಶ ಸಮುದ್ರದಲ್ಲಿ ಮಣಿಯಂತೆ ಶೋಭಿಸುವ ಮತ್ತು ದೇವತೆಗಳಿಗೂ ಅಸುರರಿಗೂ ಗುರುವಾಗಿರತಕ್ಕ ಈ ಪುರುಷನು ನೀನೇ ಯೆಂದು ಅಂದರೆ ವಾವಣಿ ಯೆಂದು ಹೇಳಲ್ಪಟ್ಟಿದ್ದಾನೆ.

ಒಂದಾನೊಂದು ಕಾಲದಲ್ಲಿ ಲಲಿತಾದೇವಿಯು (ಪಾರ್ವತಿಯು) ವಿಷ್ಣುವಿನ ಸ್ವರೂಪದಿಂದ ಜಗತ್ತನ್ನೆಲ್ಲಾ ಆನಂದ ಸಾಗರದಲ್ಲಿ ಮುಳುಗಿಸಿ ತನ್ನ ವೇಣುವನ್ನು ಧ್ವನಿ ಮಾಡಿದಳು.

ಬಳ್ಳಾರಿ ಡಿಸ್ಟ್ರಿಕ್ಟು ಜಡ್ಜಿ ಅವರ ಕೋರ್ಟಿನಲ್ಲಿ.

ಪ್ರಜೆಂಟ್ — ಏ. ಟಿ. ಪಾರ್ಗಸು ಯಸ್ಕ್ವಯರ್

ಡಿಸ್ಟ್ರಿಕ್ಟು ಜಡ್ಜಿ.

1908-ನೇ ಸಂ॥ ಜೂನ್ ತಿಂಗಳು 23-ನೇ ತೇದಿ ಮಂಗಳವಾರ,

1907-ನೇ ಸಂ॥ ಅಪೀಲು ನಂ॥ 166.

---

1. ಮಠಂ ಶ್ರೀನಿವಾಸಾಚಾರು
2. ವೇಣು ಮಧ್ವಾಚಾರು
3. ಮುದಗಲ್ ಆಚಾರು
4. ಪದ್ಮನಾಭಿ ವೆಂಕೋಬಾಚಾರು
5. ಕರಣಂ ರಾಘಪ್ಪ

} ಅಪೀಲಾಂಟುಗಳು.

1. ಪಟ್ನಶೆಟ್ಟಿ ತಿಪ್ಪಯ್ಯ — ರೆಸ್ಪಾಂಡೆಂಟು.

ಈ ಕಕ್ಷಿದಾರರ ಮಧ್ಯದಲ್ಲಿ.

1907-ನೇ ಇಸವಿ ಜೂನ್ ತಿಂಗಳು 17-ನೇ ತೇದಿ ಬಳ್ಳಾರಿ ಡಿಸ್ಟ್ರಿಕ್ಟು ಮುನಸಫು ಕೋರ್ಟಿನಲ್ಲಿ.

1905-ನೇ ಇಸವಿ ಅಸಲ್ ನಂ॥ ವ್ಯಾಜ್ಯದಲ್ಲಿ ಕೆಳಗಿನ ಕಕ್ಷಿದಾರರ ಮಧ್ಯದಲ್ಲಿ ಮಾಡಲ್ಪಟ್ಟ ಡಿಕ್ರಿ ಮೇಲೆ ಆಗಿರುವ ಅಪೀಲು.

1. ಪಟ್ನಶೆಟ್ಟಿ ತಿಪ್ಪಯ್ಯ — ಅಸಲ್ ನಂಬರು ವಾದಿ.

*

1. ಮಠಂ ಶ್ರೀನಿವಾಸಾಚಾರು
2. ಜೋಸಿ ಅಪ್ಪಯ್ಯಾಚಾರು (ಫೋತ್ರಿ)
3. ವೇಣು ಮಧ್ವಾಚಾರು
4. ಮುದಗಲ್ ಆಚಾರು
5. ಪದ್ಮನಾಭಿ ವೆಂಕೋಬಾಚಾರು
6. ಕರಣಂ ರಾಘಪ್ಪ

} ಅಸಲು ನಂ॥ ಪ್ರತಿವಾದಿಗಳು.

ಅಪೀಲಾಂಟುಗಳ ವಕೀಲರಾದ ಮ॥ ರಾ॥ ರಾ॥ ಸಿ. ಯಸ್. ಸುಬ್ರಹ್ಮಣ್ಯಂ ರೆಸ್ಪಾಂಡೆಂಟು ವಕೀಲರಾಗಿರುವ ಮ॥ ರಾ॥ ರಾ॥ ಟಿ. ಶಂಕರಲಿಂಗಂ ಪಿಳ್ಳೆ ಇವರ ಸಮಕ್ಷದಲ್ಲಿ 1908-ನೇ ಯಿಸವಿ ಜೂನ್ ತಿಂಗಳು 20-ನೇ ತೇದಿಯಲ್ಲಿ ಈ ಅಪೀಲು ವಾದನೇ ಕೇಳಲ್ಪಟ್ಟದಾಗಿ ಈ ದಿನದವರಿವಿಗೂ ಆ ವ್ಯಾಜ್ಯ ನಿಂತುಯಿದ್ದು ಕೋರ್ಟ್ನವರು ಯೀ ಕೆಳಗಿನ ತೀರ್ಮಾನವು (ಜಡ್ಜಿಮೆಂಟು) ಆದರಲ್ಲಿ ಮಾಡಿ ಯಿರುತ್ತಾರೆ.

1905-ನೇ ಯಿಸವಿ ಅಸಲು ನಂ॥ 403 ವ್ಯಾಜ್ಯದಲ್ಲಿ ಬಳ್ಳಾರಿ ಡಿಸ್ಟ್ರಿಕ್ಟ್ ಮುನಸಫುನವರು ಮಾಡಿಹ ಡಿಕ್ರಿ ಮೇಲೆ ರಾಯದುರ್ಗ ಗ್ರಾಮದ ನಿವಾಸಸ್ತರಾದ ಅಯಿದು ಮಂದಿ ಬ್ರಾಹ್ಮಣರು ಈ ಅಪೀಲು ದಾಖಲು ಮಾಡಿ ಯಿರುತ್ತಾರೆ. ಸದರಿ ಅಸಲು ನಂಬರಲ್ಲಿ ಸಂದಿಧ್ವಜದ ಸಂಗಡ ಬಸವೇಶ್ವರ ದೇವಾಲಯ ಉತ್ಸವಗಳು ರಾಯದುರ್ಗ ಗ್ರಾಮದ ಬೀದಿಗಳಲ್ಲಿಯೂ, ಸದರಿ ಗ್ರಾಮಕ್ಕೆ ಸೇರಿದ ಕೋಟೆಯಲ್ಲಿ ಬಸವೇಶ್ವರ ಜಂಬುಕೇಶ್ವರ ಈ ದೇವಸ್ಥಾನಗಳ ಮಧ್ಯದಲ್ಲಿ ಹೋಗುವ ರಾಜ ಬೀದಿಯಲ್ಲಿಯೂ ತೆಗದುಕೊಂಡು ಹೋಗುವದಕ್ಕೆ ವಾದಿ ಹಕ್ಕು ಉಳ್ಳವನಾಗಿರುತ್ತಾನೆಂತಲೂ, ಅಂಥಾ ಉತ್ಸವಗಳನ್ನು ಅಪೀಲು ವಾದಿಗಳು ಮತ್ತು ರಾಯದುರ್ಗ ಗ್ರಾಮದ ನಿವಾಸಸ್ತರಾದ ಯಿತರ ಬ್ರಾಹ್ಮಣರು ಅಭ್ಯಂತರ ಮಾಡದಾಗೆ ಯಿರುಬೇಕಂತಲೂ, ಡಿಕ್ರಿ ಮೂಲಕವಾಗಿ ತೀರ್ಮಾನವಾಗಿರುತ್ತದೆ.

2. ಬಸವೇಶ್ವರ ದೇವಾಲಯ ಜಂಬುಕೇಶ್ವರ ದೇವಾಲಯಕ್ಕೆ ಸೇರಿದ ಉಪಭಾಗವಂತಲೂ, ಮತ್ತು ಟೆಂಪಿಲ್ ಕಮಿಟೀ ಅವರ ಪಾರಪತ್ಯಕ್ಕೆ ವಳಪಟ್ಟದಾಗಿ ಯಿರೋದ್ದರಿಂದ ಆ ಕಮಿಟೀ ಮೆಂಬರುಗಳನ್ನ ವ್ಯಾಜ್ಯದಲ್ಲಿ ಪಾರ್ಟಿಗಳಾಗಿ ಸೇರಿಸಿ ಯಿರಬೇಕಂತಲೂ, ವ್ಯಾಜ್ಯದಲ್ಲಿ ನಾನಾ ವಿಧವಾದ ವಾದಗಳೂ ಪ್ರಸ್ತಾಪಕ್ಕೆ ತಂದಿರುವದಾಗಿ ಯಿರುತ್ತವೆ. ಯರಡು ದೇವಾಲಯಗಳಿಗೂ ಮಧ್ಯದಲ್ಲಿ ಹೋಗುವ ಬೀದಿ ಪ್ರಸಿದ್ಧವಾದ ರಸ್ತೆಯಾಯೆಂತಲೂ, ವ್ಯಾಜ್ಯಕ್ಕೆ ಕಾಲದೋಷ ಪ್ರಾಪ್ತಿಯಾಗಿ ಓಯಾಯಂತಲೂ, ಯಿನ್ನೂ ಯಿತರ ಅಂಶಗಳ ಮೇಲೆಯೂ ನಿರ್ಧಾರಣಾಂಶಗಳು ಹುಟ್ಟಿ ಯಿರುತ್ತವೆ. ಅಪೀಲು ವಾದಿಗಳಿಗೆ ವಿರೋಧವಾಗಿ ತೀರ್ಮಾನಯಾಗಿರುವ ಕೆಲವು ಯಿಸ್ಯುಗಳನ್ನ ಪುನಹಾ ಅಪೀಲುವಳಗೆ ಅಪೀಲು ಅಂಶಗಳಾಗಿ ನಮೂದಾಗಿರುತ್ತವೆ ಅವರೆ ಯಿವುಗಳ ವಿಷಯ ಅಪೀಲು ವಾದನೇ ಮಾಡುವದಲ್ಲಿ ಪ್ರಸ್ತಾ

ಪಕ್ಕೆ ವಾದನೇ ಮೂಲಕವಾಗಿ ತಂದಿರೋದಿಲ್ಲಾ. ನನ್ನ ಸಮಕ್ಷದಲ್ಲಿ ವಾದನೆ ಮಾಡಿರುವ ಅಂಶಗಳು ಮಾತ್ರ ಏನಂದರೆ.

(i) ಲಿಂಗವಂತರ ಸಂಘಕ್ಕೆ ಪ್ರತಿನಿಧಿಯಾಗಿ ವಾದಿ ತನ್ನ ಹೆಸರಿನಲ್ಲಿ ಮಾತ್ರವೇ ವ್ಯಾಜ್ಯ ತರೋದಕ್ಕೆ ಬಾಧ್ಯತ ಯುಳ್ಳದವನೆಂತಲೂ. ಒಂದು ಪಕ್ಷಕ್ಕೆ ಆ ಪ್ರಕಾರ ಮಾಡುವದಕ್ಕೆ ಅಪೇಕ್ಷಿಸಿದರೆ ಶಿವಿಲ್ ಪ್ರೊಸೀಜರು ಕೋಡು 30-ನೇ ಶೆಕ್ಷನ್ ಪ್ರಕಾರ ಕೋರ್ಟು ನವರ ಅನುಮತಿ ಹೊಂದಿರಬೇಕಂತಲೂ, ಯಿಂಥಾ ಅನುಜ್ಞಾ ಹೊಂದಿರೋದಿಲ್ಲವೆಂಬೋ ಕಾರಣದಿಂದ ಆತನ ವ್ಯಾಜ್ಯ ಪ್ರಯೋಜನಕರವಾಗಿ ನಡಸತಕ್ಕದ್ದು ಅಲ್ಲವೆಂತಲೂ, ಅದು ಹೊಡದಾಕಿರತಕ್ಕದ್ದೆಂತಲೂ, ವಾದನೆ ಆಗಿ ಯಿರುತ್ತದೆ.

(ii) ಮುಖ್ಯವಾದ್ದಂತಾ ಹೋಕು ಆತಗೆ ಆಗಿರೋದಿಲ್ಲದ ಕಾರಣದಿಂದ ರಾಜಮಾರ್ಗವನ್ನು ಉಪಯೋಗಿಸುವದಕ್ಕೆ ತನ್ನಗೆ ಬಾಧ್ಯತೆ ಉಂಟಾಗಿರುವದು ಹಾಗೆ ತೀರ್ಮಾನಾಗುವದಕ್ಕೆ ವಾದಿ ವ್ಯಾಜ್ಯ ತರೋದಕ್ಕೆ ಯಿಲ್ಲ.

3. ಮೊದಲನೇ ಆಡ್ತಿಮಾತು ನನ್ನ ಅಭಿಪ್ರಾಯದಲ್ಲಿ ಸ್ಥಾಪಿಸತಕ್ಕದ್ದಾಗೋದಿಲ್ಲ. ವ್ಯಾಜ್ಯ ತರೋದಕ್ಕೆ ಮಾರ್ಗವಿದ್ದರೇ ಲಿಂಗಾಯುತರ ಸಂಘದಲ್ಲಿ ಅಟಂಕವು ಮಾಡಲ್ಪಟ್ಟ ಮಬ್ಬವನಾಗಿ ವಾದಿ ಪರಿಹಾರ ಹೊಂದುವದಕ್ಕೆ ಬಾಧ್ಯತ ಉಳ್ಳವನಾಗಿರುತ್ತಾನೆ. ಪಟ್ನಶೆಟ್ಟಿ ಯೆಂಬುವ ಹೋದಾ ಯಿರೋ ಕಾರಣದಿಂದ ಲಿಂಗಾಯುತರ ದೇವರ ಉತ್ಸವಗಳು ತೆಗದುಕೊಂಡು ಹೋಗುವದಕ್ಕಾಗಿ ಏರ್ಪಾಟುಗಳು ಮಾಡುವದಕ್ಕೆ ಸರಿಯಾದವನೆಂದು ವಾದಿ ಕಬೂಲ್ ಮಾಡಲ್ಪಟ್ಟವನಾಗಿರುತ್ತಾನೆಂಬೋ ಸಾಕ್ಷ್ಯತ್ವ ಯಿರುತ್ತದೆ. ಇತರ ಲಿಂಗವಂತರು ತಮ್ಮಗೆ ಅಪೇಕ್ಷ ಹುಟ್ಟಿದರೆ ಉತ್ಸವಗಳ ಸ್ವಾರಿ ತೆಗದುಕೊಂಡು ಆದರೆ ಅಂಥಾ ಉತ್ಸವಗಳು ಲಿಂಗವಂತರ ಸಂಘದ ಸಮ್ಮತಿ ಹೊಂದಿದವಾಗಿಯೂ, ಅವರಿಂದ ಗೌರವ ಮಾಡಲ್ಪಟ್ಟದವಾಗಿಯೂ ಯಿರುವ ಸರಿಯಾದವಂತಲೂ ಅಂಗೀಕಾರ ಆಗುವದ್ದಲ್ಲಂಬುವದಕ್ಕೆ ಸಾಕ್ಷತ್ವದಿಂದ ಸ್ಪಷ್ಟವಾಗುತ್ತದೆ. ವಾದಿ ಪರವಾಗಿ ಕೊಟ್ಟಿರುವ ಸಾಕ್ಷ್ಯತ್ವಕ್ಕೆ ವಿರೋಧವಾದ ಸಾಕ್ಷ್ಯತ್ವ ಯಿರುವದಿಲ್ಲಾ. ಮತ್ತು ಆತಗೂ ಬ್ರಾಹ್ಮಣ ಸಂಘಗಳ ಮಧ್ಯದಲ್ಲಿ ಈ ತೀರ್ಮಾನವು ಸಿದ್ಧಾಂತವಾದಿರೋದಾಗಿರುತ್ತದೆ. ಬೈಜೂನಾಥ್ ಮೊದಲಾದವರಿಗೂ ಬುಲಾಕ್‌ಲಾಲು ಪಾತೂಕು ಯಿವರ ಮಧ್ಯದಲ್ಲಿ (ಐ. ಯಲ್. ಆರ್. 24 ಕಲಕತ್ತಾ, ಪೇಜಿ 385) ಜರಿಗಿರೋ ವ್ಯವಹಾರದಲ್ಲಿ ಅಪೀಲು ವಾದಿಗಳೂ ಆಧಾರ ಬೀಳೋ ಸಿವಿಲ್ ಪ್ರೊಸೀಜರು ಕೋಡು 30-ನೇ ಶೆಕ್ಷನ್ ಒಳಗೆ ಯಿರುವ

ಅಭಿಪ್ರಾಯವು ವಿರುದ್ಧವಾಗಿ ಯಿರುತ್ತದೆ. ಒಬ್ಬ ಮನುಷ್ಯನಾಗಲಿ ಯಿಲ್ಲದಿದ್ದರೆ ವಬ್ಬನಿಕಿಂತಲೂ ಹೆಚ್ಚಾದ ಜನರಾಗಲಿ, ಆಸಕ್ತಿ ಉಳ್ಳವರ ಯಲ್ಲಾರ ಪರವಾಗಿ ವ್ಯವಹಾರ ನಡುಸುವದಕ್ಕೆ ಕೋರ್ಟ್ಟನವರ ಉತ್ತರುವು ಹೊಂದಲಿಕ್ಕೆ ಆ ಸೆಕ್ಷನ್ ಅನುಕೂಲ ಮಾಡುತ್ತದೆ. ಅಂತ ಅದರಲ್ಲಿ ತೋರಿಸಲ್ಪಟ್ಟು ಯಿರುತ್ತದೆ. ಆದರೇ ಆ ಸೆಕ್ಷನ್ ಬಂದು ಅನುಜ್ಞೆ ಅಪೇಕ್ಷಿಸಿ ಹೊಂದಿದರೆ ವಿನಹಾ ವ್ಯವಹಾರ ಕೆಟ್ಟು ಹೋಗುತ್ತದೆ ಅಂತ ಹೇಳೋದಿಲ್ಲಾ. ರಾಯದುರ್ಗ ಸಂಘದಲ್ಲಿ ಸೇರಿದ ಲಿಂಗವಂತರು ಎಲ್ಲರೂ ಉತ್ಸವಗಳಲ್ಲಿ ಆಸಕ್ತಿ ಯಿರುವವರಾಗಿ ಯಿರುತ್ತಾರೆ. ಪಟ್ಟಸೆಟ್ಟಿ ಯಂಬೋ ಅಧಿಕಾರ ವುಳ್ಳ ವಾದಿ ಈ ವ್ಯವಹಾರ ತರೋದಕ್ಕೆ ಸರಿಯಾದವನೆಂದು ನಾನು ಅಭಿಪ್ರಾಯಪಡುತ್ತೇನೆ. ಆ ಸಂಘದಲ್ಲಿ ಸೇರಿದ ಪ್ರತಿ ವಬ್ಬ ಮೆಂಬರು ಆಸಕ್ತಿ ಪ್ರತ್ಯೇಕ ಪ್ರತ್ಯೇಕವಾದ್ದಂತೆ ಪ್ರತ್ಯೇಕವಾಗಿ ಆಲೋಚಿಸತಕ್ಕದ್ದು. ಆದ್ದರಿಂದ ಸಂಘದಲ್ಲಿ ಸೇರಿದ ಮೆಂಬರಾಗಿ ವ್ಯವಹಾರ ತರೋದಕ್ಕೆ ವಾದಿ ಹಕ್ಕು ಯಿದ್ದವನು ಅಂತ ನಾನು ತೀರ್ಮಾನ ಮಾಡುತ್ತೇನೆ.

4. ಮುಖ್ಯವಾದ ಕೆಡಗು ಯಂಬೋ ವಿಷಯದಲ್ಲಿ ನಾನು ಹೇಳುವದೇನಂದರೆ, ವ್ಯಾಜ್ಯದಲ್ಲಿ ಪ್ರತಿವಾದಿಗಳು ಈ ವಿಷಯ ಯೇನೂ ಪ್ರಸ್ತಾಪಕ್ಕೆ ತಂದಿರೋದಿಲ್ಲಾ. ಮತ್ತು ಅಪೀಲು ಅರ್ಜಿ ವಿಷಯಗಳಲ್ಲಿಯೂ ನಮೂದು ಮಾಡಿ ಯಿರುವದಿಲ್ಲಾ. ಹಾಗೆ ಯಿದ್ದರೂ ಡಿಸ್ಟ್ರಿಕ್ಟ್ ಮುನಸಬು ನವರು ಕೆಲವು ಮಟ್ಟಿಗೆ ಆ ವಿಷಯ ಆಲೋಚನ ಮಾಡಿ ಯಿರುತ್ತಾರೆ. ಚಟ್ಟದ ವಿಷಯ ಯಂದು ಈ ಕೋರ್ಟ್ಟುವಳಿಗೆ ಆ ವಿಷಯ ವಾದನೇ ಮಾಡಿ ಯಿರೋದ್ದರಿಂದ ನಾನು ಇಲ್ಲಿ ಆ ವಿಷಯ ಚರ್ಚೆ ಮಾಡಬೇಕಾಗಿದೆ. ಈ ವಿಷಯ ವಿಶೇಷವಾಗಿ ಚರ್ಚಿಸಿದರೂ ಇಂಗ್ಲಾಂಡು ದೇಶದಲ್ಲಿ ವ್ಯಾಜ್ಯ ಮೂಲಕವಾಗಿ ಸ್ಥಿರಪಡೋದಿಲ್ಲಾ. ಕಾರಣ ವೇನಂದರೆ- ಸರ್ವ ಜನರಿಗೂ ಆದ ಕೆಡಗು ವಿಷಯ ಕುರಿತು ಇಂಡಿಯನ್ ಲಾ ರಿಪೋರ್ಟ್ಸ್ II ಬೊಂಬಾಯಿ ಪೇಜಿ 457 ಲ್ಲಿ ಸರ್. ಯಂ. ಆರ್. ವೆಸ್ಟ್ರಾಪ್ ಯಂಬವರು ಪರಿಶೋಧನೆ ಮಾಡಿ ಯಿದ್ದಾರೆ. ಮುಖ್ಯವಾದಂಥಾ ಕೆಡುಗು ಆಗಲಿ ವಬ್ಬ ಮನುಷ್ಯನಿಗೆ ನಷ್ಟವಾಗಿರೋದಿಲ್ಲವೆಂತ ಅವರು ಕಂಡು ಯಿರೋದ್ದರಿಂದ, ಅವರು ಅಪೀಲು ವ್ಯಾಜ್ಯವನ್ನು ಹೊಡದು ಹಾಕಿ ಯಿರುತ್ತಾರೆ. ಈ ವ್ಯವಹಾರ ಬಹಳ ದಿವಸದ ಕೆಳಗೆ ನಡದು ಯಿರುವದಾಗಿರುತ್ತದೆ. ವಬ್ಬ ಮನುಷ್ಯನಾಗಲಿ ಅಥವಾ ವಿಶೇಷ ಜನರಾಗಲಿ ಜನ ಸಮೂಹಕ್ಕೆ ಬಾಧೆಯಿಲ್ಲದಹಾಗೆ ಹೋಗಿ ಬರುವದು. ಇಂಜಕ್ಷನ್ ಮೂಲಕವಾಗಿ ಅದುವರಿವಿಗೂ ನಿಂದ್ರಿಸೋದಾಗೋದಿಲ್ಲವೋ ಅದುವರಿವಿಗೂ ಈ ಕಾಲದಲ್ಲಿ ಉತ್ಸವ ಸಂಗಡ ಆಗಲಿ ಉತ್ಸವ ಇಲ್ಲದಂತೆ ಆಗಲಿ ಸಮಯಕ್ಕೆ ತಕ್ಕ ಹಾಗೆ ಅಂಥಾ ಮನುಷ್ಯನ ಅಥವಾ ಜನರ ಬಹಿರಂಗವಾದ ರಸ್ತಾ ಮೇಲೆ ಹೋಗಿ ಬರುವ ಹಕ್ಕಿಗೆ ಅಪಾಂತರ ಇರೋದ್ದು ನಾನು ವಿಶೇಷವಾಗಿ ಸಂಶಯ ಮಾಡುತ್ತೇನೆ. . . . .

ಇಂಡಿಯನ್ ಲಾ ರಿಪೋರ್ಟ್ಸ II ಬೊಂಬಾಯಿ ಪೇಜಿ 457 ನಲ್ಲಿ ಸಮೂಥಾಗಿ ಪರಿಶೀಲನ ಮಾಡಿರುವ ಇಂಗ್ಲೀಷು ಜನರ ವ್ಯವಹಾರಗಳಲ್ಲಿ ಚೀಚೆಸ್ಟ್ರಕ್‌ಲೆತ್ ಬ್ರಿಡ್ಜ್ ಇವರಗಳ ಮಧ್ಯ ಜರಿಗಿದ ವ್ಯಾಜ್ಯದಲ್ಲಿ ವಿಶೇಷವಾಗಿ ವಾದಿಗೆ ಅನುಕೂಲವಾಗಿರುವವು ವಿಶೇಷವಾಗಿರುತ್ತದೆ. ಕಾರಣವೇನಂದರೆ, "ಪ್ರತಿವಾದಿ ಖುದ್ದಾಗಿ ನಿಂತನು; ಚಟ್ಟದ ಪ್ರಕಾರ ಆತಗೆ ತಗಯೋದಕ್ಕೆ ಯಿದ್ದ ಅಟಂಕವನ್ನು ಆತ ತಗೀಧಾಗೆ ಅಭ್ಯಂತರ ಮಾಡಿದನು" ಆ ವ್ಯಾಜ್ಯದಲ್ಲಿ ಬಹಿರಂಗವಾದ ಮಾರ್ಗವನ್ನು ಉಪಯೋಗಿಸುವ ಯಿತರ ಜನರಂತೆ ವಾದಿ ಹೊಂದಿರುವ ಮತ್ತು ನಿರ್ಜೀವ ವಿಷಯದಿಂದ ಉತ್ಪತ್ತಿಯಾದ ಕಷ್ಟವು ಪ್ರತಿವಾದಿ ಆ ಸ್ಥಳದಲ್ಲಿ ಬಂದು ಆತ ತನ್ನ ಹಕ್ಕು ಬಾಧ್ಯತನ್ನ ಚಲಾಯಿಸಧಾಗೆ ಮಾಡದ ಕೂಡ್ಲೆ ಆ ಕಷ್ಟ ತಮ್ಮಲ್ಲಿಯೇ ವಬ್ಬನಿಗೆ ಯಿತರ ಮನುಷ್ಯನಿಂದ ವುಂಟಾದ ಕಷ್ಟವಾಯಿತು. ಇಂಗ್ಲಾಂಡು ದೇಶದಲ್ಲಿ ಚಟ್ಟ ಪ್ರಕಾರ ವ್ಯಾಜ್ಯಗಳು ನಡುಸುವದಕ್ಕೆ ಅನೇಕ ಮಾರ್ಗಗಳು ಯಿರುವವು. ಆದರೆ ಹಿಂದೂ ದೇಶದಲ್ಲಿ ಒಬ್ಬ ಮನುಷ್ಯನ ಹಕ್ಕು ಬಾಧ್ಯತೆಯನ್ನು ಯಿನ್ನೊಬ್ಬವನು ಆಕ್ರಮಿಸಿಕೊಂಡು ವಿಷಯದಲ್ಲಿ ಅವನು (ಕಳಕೊಂಡವನು) ಶಿವಿಲ್ ವ್ಯವಹಾರವಾಗಲಿ, ಕ್ರಿಮಿನಲ್ ವ್ಯವಹಾರವಾಗಲಿ ಮಾಡೇ ತೀರಬೇಕು. ಶಿವಿಲ್ ವ್ಯವಹಾರ ತಂದ ಕಾಲದಲ್ಲಿ ವ್ಯಾಜ್ಯ ತರೋದಕ್ಕೆ ಮಾರ್ಗವಿಲ್ಲವೆಂತಲೂ, ಕ್ರಿಮಿನಲ್ ವ್ಯವಹಾರ ತಂದ ಕಾಲದಲ್ಲಿ ವಬ್ಬ ಮನುಷ್ಯನಿಗೆ ಯಿರುವ ಹಕ್ಕು ಮೇಜಿಸ್ಟ್ರೀಟುನವರು ಹುಕುಂ ಮೂಲಕವಾಗಿ ನಿಂದ್ರಿಸಿ ಯಿದ್ದಾರೆಂತಲೂ, ಸದ್ರಿ ಮೇಜಿಸ್ಟ್ರೀಟುನವರು ಶಿವಿಲ್ ಕೋರ್ಟಿನವರು ಅಂಥಾ ಹಕ್ಕು ಅದೆ ಅಂತ ನಿರ್ಧಾರ ಮಾಡೋವರಿವಿಗೂ ತಾನು ಮಾಡಿದ ಹುಕುಂ ತಬ್ದೀಲು ಮಾಡೋದಕ್ಕೆ ನಿರಾಕರಿಸಿದ ಹಾಗೆ ಉತ್ತರುವು ಕೊಟ್ಟಿದ್ದಾನೆಂದು ಆನುಸರು ಬಂದ ಸಮಯದಲ್ಲಿ ವ್ಯಾಜ್ಯ ತಂದ ಮನುಷ್ಯನು ಯಾವ ವಿಧವಾದ ಪರಿಹಾರವು ಯಿಲ್ಲದವನು ಆಗುತ್ತಾನೆ. ಈ ವಿಧವಾಗಿ ಭಮುಸ್ತನಾದ ಅಥವಾ ಆಸಕ್ತಿ ಯಿರುವ ಅಧಿಕಾರಿ ಹಂಗಾಮಿ ಉತ್ತರುವುಗಳು ಮರುಸದಿಂದ ಮಾಡೋದ್ದರಿಂದ ಫುರಮಾಸಿಯಾದ ಮನುಷ್ಯನಿಗೆ ಯಿರುವ ಸ್ವಾಭಾವಿಕ ಹಕ್ಕುಗಳನ್ನು ಕಳಿಯುತ್ತಾನೆ, ಈ ವ್ಯಾಜ್ಯದಲ್ಲಿ ಯಿರುವ ಇಂಥಾ ಸಂದರ್ಭಗಳಲ್ಲಿ ಅಂಥಾ ಉತ್ತರ್ವುಗಳು ನ್ಯಾಯಸಮ್ಮತವಾಗಿ ಯಿರುವ ವಿಷಯ ಇಲ್ಲಿ ನಾನು ಏನೂ ಪ್ರಶಂಸ ಮಾಡೋದಿಲ್ಲ. ನನಗೆ ತೋರುವದು ಏನಂದರೇ ವಾದಿಗೆ ಇರುವ ಹೋಗಿ ಬರುವ ಹಕ್ಕು ಆಕ್ರಮಣ ಮಾಡಿ ಯಿರುತ್ತದೆಂತಲೂ ರಾಜಬೀದಿ ದೇವಾಲಯಕ್ಕೆ ಸೇರಿ ಯಿರುತ್ತದಂಬೋ ಕಾರಣದ ಮೇಲೆ ಬಹಿರಂಗವಾದ ರಸ್ತೆ ಉಪಯೋಗಿಸೋದಕ್ಕೆ ಶಿವಿಲ್ ಕೋರ್ಟು ಮೂಲಕವಾಗಿ ಉತ್ತರುವು ಪಡಿಯೋದಕ್ಕೆ ಯಿಲ್ಲದವನು ಆಗಿ ಯಿರುತ್ತಾನೆಂತಲೂ, ಬೊಂಬಾಯಿ ಹೈಕೋರ್ಟಿನವರ ತೀರ್ಮಾನದಕಂತಲೂ ಇಂಡಿಯನ್ ಲಾ ರಿಪೋರ್ಟ್ಸ 24 ಕಲಕತ್ತಾ ಪೇಜಿ 524 ರಲ್ಲಿ ಮುಹಮ್ಮದು ಅಬ್ದುಲ್ ಅಫೀಜು ವಗೈರೆ ಜನರಿಗೂ ಲತೀಫ್ ಹುಸೇನ್ ಯಿವರ ಮಧ್ಯ ಹುಟ್ಟಿದ ತೀರ್ಮಾನವನ್ನು ಅನುಸರಿಸೋದಕ್ಕೆ

ವಿಶೇಷವಾದಂಥಾ ಕೆಡುಗು ಇಲ್ಲದಲೇ ನಷ್ಟವು ವಿಷಯ ಹುಟ್ಟಿದ ಅಂಥಾ ವಿಷಯಗಳನ್ನು ಕುರಿತು ನಮ್ಮ ಹೈಕೋರ್ಟಿನವರು ಆಲೋಚನೆ ತೆಗದುಕೊಳ್ಳುಥಾಗೆ ಯಿರೋದ್ರಿಂದ ಹೆಚ್ಚಾಗಿ ಕಲಕತ್ತಾ ತೀರ್ಮಾನವನ್ನು ಅನುಸರಿಸೋದಕ್ಕೆ ಕೋರುತ್ತೀನಿ. ಮುಖ್ಯವಾದಂಥಾ ಕೆಡುಗು ಆಗದೆ ಅಂಬೋದು ತೀರ್ಮಾನ ಮಾಡುವದಕ್ಕೆ ಅಂಥಾದ್ದು ಏನೂ ಆಗಲಿಲ್ಲವೆಂತಲೂ ಜನ ಸಂಘಕ್ಕೆ ತೋರದೆ ಇಲ್ಲಥಾಗೆ ಪಬ್ಬ ಮನುಷ್ಯ ಯದುವರಿವಿಗೂ ಬಹಿರಂಗವಾದ ಬೀದಿಯನ್ನು ತನ್ನ ಇಷ್ಟ ಪ್ರಕಾರ ಉಪಯೋಗಿಸುತ್ತಾನೋ ಅದುವರಿವಿಗೂ ಅಂಥಾ ದಾರಿಯನ್ನು ಉಪಯೋಗಿಸುವ ಹಕ್ಕು ಯಿಲ್ಲದ ಹಾಗೆ ಮಾಡೋಣಾಗಿರುತ್ತದಂತಲೂ ತಿಳದು ಯಿರುತ್ತೀನಿ. ಉತ್ಸವದಲ್ಲಿ ತೆಗದುಕೊಂಡು ಹೋಗುವ ಅಲಂಕಾರ ವಸ್ತುವುಗಳು ಬ್ರಾಹ್ಮಣರಿಗೂ ಅಥವಾ ಯಿತರ ಜನರಿಗೂ ಮನೋ ತಾತ್ಪರ್ಯಗಳಿಗೆ ನಿರುಪದ್ರವಾದವೆಂಬುವದು ರುಜುವಾತಿ ಮಾಡುವದು ಅತನಿಗೆ ಅವಶ್ಯಕವಿಲ್ಲ. ತೆಗದುಕೊಂಡು ಹೋಗುವ ಪದಾರ್ಥಗಳು ನೋಡುವದಕ್ಕೆ ರಮ್ಯವಾಗಿಯೂ ನಿರ್ದೋಷವಾಗಿಯೂ ಯಿರುವ ಪಕ್ಷದಲ್ಲಿ ಅಭ್ಯಂತರ ಮಾಡುವದು ಸಕಾರಣವಾಗಿ ಯಿರುತ್ತದಂಬೋದು ತೋರಿಸುವ ಕೆಲಸ ಅಭ್ಯಂತರ ಮಾಡುವ ಜನರದಾಗಿರುತ್ತದೆ. ಉತ್ಸವ ತೆಗದುಕೊಂಡು ಹೋಗುವದಲ್ಲಿ ವ್ಯಾಸ ಹಸ್ತವಿಲ್ಲದೇ ನಂದಿ ಧ್ವಜವನ್ನು ತೆಗದುಕೊಂಡು ಹೋಗುವದು ನಿರಭ್ಯಂತರವಾದ್ದಂತೆ ವಿಚಾರಣ ಮಾಡುವದಕ್ಕೆ ಸರಿಯಾದ ಅಧಿಕಾರ ಉಳ್ಳ ಕೋರ್ಟಿನವರು ದೀರ್ಘವಾದ ವಿಚಾರಣೆ ಮಾಡಿ ತೀರ್ಮಾನಮಾಡಿರುತ್ತಾರೆ. ಅಂಥಾ ತೀರ್ಮಾನವನ್ನು ಈ ಕೋರ್ಟಿನವರು ಸ್ಥಿರಪಡಿಸಿ ಯಿರುತ್ತಾರೆ. ಆದ್ದರಿಂದ ನಿರುಪದ್ರವಾಗಿ ಉತ್ಸವ ತೆಗದುಕೊಂಡು ಹೋಗುವದರಲ್ಲಿ ಅವಶ್ಯಕ ವಿದ್ದರೆ ಮೇಜಿಸ್ಟ್ರೇಟುನವರು ಮತ್ತೂ ಪೋಲೀಸುನವರು ವಾದಿಗೆ ಕಾವುದಲಿ ಕೊಡೋದು ವಿಧಾಯುಕವಾದ ಕರ್ತವ್ಯವಾಗಿರುತ್ತದೆ. ಎದುವರಿವಿಗೂ ಜನರು ಉತ್ಸವದಲ್ಲಿ ವಿಶೇಷವಾಗಿ ಅನಾನುಕೂಲ ಮಾಡದಥಾಗೆ ಕ್ರಮವಾದ ರೀತಿಯಲ್ಲಿ ಹೋಗುವರೋ ಅದುವರಿವಿಗೂ ಅಂಥಾ ಹೋಗುವ ಬಾಧ್ಯತೆಯನ್ನು ಉತ್ಸವಗಳಿಂದಾ ಅಲಾಯಿದಿ ಮಾಡುವದಕ್ಕೆ ಯಿಲ್ಲವೆಂತಲೂ ನಿರ್ಧಾರ ಮಾಡೋಣಾಗಿರುತ್ತದೆ.

ಈ ವಿಷಯವನ್ನು ಯಿನ್ನೂ ವಿಶೇಷವಾಗಿ ಚರ್ಚಿಸುವದು ಅನಾವಶ್ಯಕವಂತೆ ನ್ಯಾಯ ಚಟ್ಟ ಮಾಡುವದರಲ್ಲಿ ಪ್ರಸಿದ್ಧವಾದಂಥವರು ನಿರ್ಧಾರವಾಡಿ ಯಿರುತ್ತಾರೆ. ಉತ್ಸವಗಳು ಯಾವ ವಿಧವಾಗಿ ನಡಿಯಬೇಕೆಂಬೋ ವಿಧಾನದಲ್ಲಿ ಮೇಜಿಸ್ಟ್ರೇಟುನವರಿಗೂ, ಪೋಲೀಸುನವರಿಗೂ 1859-ನೇ ಯಿಸವಿ 24 ನಂಬರು ಪೋಲೀಸು ಆಕ್ಟು ಪ್ರಕಾರ ವಿಶೇಷ ಅಧಿಕಾರಗಳು ಒಂದಿರುತ್ತವೆ. ವಿಧಾಯುಕವಾಗಿ ಅವಶ್ಯಕ ಬೀಳೋ ಕೆಲವು ವಿಷಯಗಳಲ್ಲಿ ಸಹಿತ ಜನರಿಗೆ ಯಿರುವ ನ್ಯಾಯಸಮ್ಮತವಾದ ಹಕ್ಕುಗಳಲ್ಲಿ ಸಹಿತ ಮೇಜಿಸ್ಟ್ರೇಟುನವರು ಪ್ರವೇಶ ಮಾಡಲಿಕ್ಕೆ ಕ್ರಿಮಿನಲ್ ಪ್ರೊಸೀಜರು ಕೋಡು 144 ಸೆಕ್ಷನ್ ಕೇನೆ ಅವರಿಗೆ ಅಧಿಕಾರ

ಉಂಟಾಗುತ್ತದೆ. ಆದರೆ ಪಬ್ಲಿಕು ಜನರಲ್ಲಿ ಸಮ್ಮತಿ ಯಿರೋದಕ್ಕಾಗಿಯೂ ಯಿಲ್ಲದಿದ್ದರೆ ಸರಕಾರಿ ಅಲ್ಲದ (ಜನರ ಸ್ವಂತ) ಹಕ್ಕು ಬಾಧ್ಯತೆಗಳಿಗೂ ಸರಕಾರ ಸಮ್ಬಂಧವಾದ ಹಕ್ಕು ಬಾಧ್ಯತೆಗಳಿಗೂ ವಿರುದ್ಧವಾಗಿರುವಾಗ ಮಾಡಲಿಕ್ಕೂ ಯರಡನೇ ಅಧಿಕಾರವನ್ನು ಹಂಗಾಮಿಯಾಗಿ ಚಲಾಯಿಸ ಬಹುದೆಂದು ನೆಟ್ಟಗೆ ಕಬೂಲುಯಾಗಿರುತ್ತದೆ. ಆದ್ದರಿಂದ ಶಾಶ್ವತವಾಗಿ ಉತ್ಸವಗಳನ್ನು ನಿಷೇಧಿಸುವ ಅಧಿಕಾರಕ್ಕೆ ಮೀರಿ ಯಿರುತ್ತದೆ. ಉತ್ಸವಗಳಲ್ಲಿ ತೆಗದುಕೊಂಡು ಹೋಗುವ ಸಾಮಗ್ರಿ ಬಿರುದುಗಳು ಮೊದಲಾದವು ನೋಡಲಿಕ್ಕೆ ಬಾಧೆ ಯಿಲ್ಲದಂಥಾವೆಂದು ಸರಿಯಾದ ಅಧಿಕಾರವುಳ್ಳ ನ್ಯಾಯಸ್ಥಾನಗಳು ಹೇಳಿರುವಪಕ್ಷದಲ್ಲಿ ಅಭ್ಯಂತರ ಮಾಡುವವರು ಹೇಳುವ ಹೇಳಿಕೆಮೇಲೆಯೆ ಉತ್ಸವವನ್ನು ನಿಷೇಧಿಸುವದು ತೊಂದರೆಗಳು ಉತ್ಪತ್ತಿಯಾಗುವದಕ್ಕೆ ಕಾರಣವಾಗುತ್ತದೆಂಬೋ ಕಾರಣ ಅಂಗೀಕರಿಸತಕ್ಕದ್ದಾಗಿರೋದಿಲ್ಲ. ಈ ವಿಧವಾಗಿದ್ದರೆ ಪಾರ್ಸಿ ಜನರು ಬಹಿರಂಗವಾದ ಬೀದಿಗಳಲ್ಲಿ ಪಗಡಿಗಳನ್ನ ಇಟ್ಟುಕೊಂಬುವದು ನೋಡಿದರೆ ದುಷ್ಟರಾದ ಪಾಠಶಾಲೆ ಹುಡುಗರು ಕೆಲವರು ತಲತಲೆ ಕಾಣಿಸುವ ಕರೇ ಟೋಪಿಗಳನ್ನ ನೋಡಿದರೆ ಅವರ ಕಡೆ ಕಲ್ಲುಗಳು ಬೀಸಬೇಕೆಂಬೋ ಬುದ್ಧಿ ಹುಟ್ಟುತ್ತದೆಂಬೋ ಕಾರಣದಿಂದ ಅವರು ಸದರಿ ಪಗಡಿಗಳನ್ನ ಇಟ್ಟುಕೊಂಬುವದು ನಿಂದ್ಯಸೋದು ಕಾರಣಕ್ಕೆ ಸರಿಯಾಗಿರುತ್ತದೆ. ಉತ್ಸವಗಳು ತೆಗದುಕೊಂಡು ಹೋಗುವ ಜನರು ಪಾರ್ಸಿ ಜನರು ಮಾಡುವ ಕೆಲಸಗಳನ್ನು ನ್ಯಾಯಸ್ಥಾನದವರು ನ್ಯಾಯ ಸಮ್ಮತವಾಗಿರುತ್ತವೆಂದು ಹೇಳುವ ಸಂದರ್ಭಗಳಲ್ಲಿ ಸದರಿ ಉತ್ಸವಗಳನ್ನ ಹೊರಡಿಸುವ ಜನರನ್ನು ಪಾರ್ಸಿ ಜನಗಳನ್ನು ವಂಹೇ ವಿಧವಾಗಿ ತೊಂದರೆ ಪಡಿಸುವದು ನಿಂದ್ಯಸೋದು ದರ್ಬಾರು ನಡಿಸುವವರಿಗೆ ವಿಧಾಯಕವಾದ ಕೃತ್ಯವಾಗಿರುತ್ತದೆ. ಆದ್ದರಿಂದ ಡಿಸ್ಟ್ರಿಕ್ಟ ಮುನಸಬುನವರು ಮಾಡಿರುವ ಡಿಕ್ರಿ ಹುಕುಮುನ್ನು ಕಾಯಂಮಾಡುವ ಈ ಅಪೀಲನ್ನ ಖರ್ಚುಗಳ ಸಂಗಡ ಹೊಡದು ಹಾಕಿ ಯಿರುತ್ತೀನಿ.

(Sd) A. T. FORHES,

District Judge.

ಹೊಸಪೇಟೆ ಜಾಯಂಟು ಮೇಜಸ್ಟ್ರೇಟು ಕೋರ್ಟಿನಲ್ಲಿ.

1916 ಸಂವತ್ಸರದ ಚಿಲ್ಲರ ಅರ್ಜಿಯು ನಂ॥ I. (8-5-16)

ಹೊಸಪೇಟೆ ಜಾಯಿಂಟು ಮೇಜಸ್ಟ್ರೇಟುಗಳು ಜಾರೀ ಮಾಡಿರುವ ಪ್ರೊಸೀಡಿಂಗ್ಸ್. (8-5-16)

ಹಾಜರ್ — ಡಿ. ಜಿ. ಬ್ಲಸ್ ಥೊರಿಗಳವರು.

ಜಾಯಿಂಟು ಮೇಜಸ್ಟ್ರೇಟು - ಹೊಸಪೇಟೆ.

1. ಕಂಪ್ಲಿ ಗ್ರಾಮದ ಲಿಂಗಾಯತರು ಬಸವಪುರಾಣವನ್ನು ಹೇಳದಹಾಗೂ ಸದರಿ ಗ್ರಂಥವನ್ನು ಮೆರವಣಿಗೆ ಮಾಡದಹಾಗೂ ಕ್ರಿಮಿನಲ್ ಪ್ರೊಸೀಜರು ಕೋಡ್ನು 144 ಸೆಕ್ಷನ್ ಹಿಡದು ಹುಕುಂ ಸಾದರು ಮಾಡಬೇಕೆಂದು ಹೊಸಪೇಟೆ ತಾ॥ ಕಂಪ್ಲಿ ಗ್ರಾಮದ ಕೆಲವು ಬ್ರಾಹ್ಮಣರ ಪರ ವಕ್ಕೀಲರು ಮ॥ ರಾ॥ ರಾ॥ ಬಿ. ಭೀಮರಾಯರು ಬಿ. ಎ., ಬಿ. ಎಲ್., ಗಳವರು ಡಿಸ್ಟ್ರಿಕ್ಟು ಮೇಜಸ್ಟ್ರೇಟುಗಳಿಗೆ ಹಾಜರು ಮಾಡಿದ 11-12-1915 ವುಳ್ಳ ಅರ್ಜಿಯು ಅದರ ಮೇಲೆ ಅವರು ಜಾರೀಮಾಡಿದ ಕ್ಯಾಂಪು ನಂ॥ ಎ/11-12-1915 ವುಳ್ಳ ಹುಕುಂ ಓದೋಣವಾಯಿತು.

2. ಈ ಕೋರ್ಟಿನವರು ಜರಿಗಿಸಿದ ವಿಚಾರಣೆ ರಿಕಾರ್ಡು ಓದೋಣವಾಯಿತು

3. ಬ್ರಾಹ್ಮಣರ ಪರ ವಕ್ಕೀಲರು ಮ॥ ರಾ॥ ರಾ॥ ಕೆ. ವೆಂಕಟರಾಯರೂ ಮತ್ತು ಆರ್. ಕ್ರಿಷ್ಣಾಚಾರ್ಯರು ಹೇಳಿದ ವಾದವೂ, ಲಿಂಗಾಯತರ ಪರ ವಕ್ಕೀಲರು ಮ॥ ರಾ॥ ರಾ॥ ಶಿದ್ಧರಾಮಪ್ಪ ಪಾವಟೆ ಹೇಳಿದ ವಾದವೂ ಕೇಳೋಣವಾಯಿತು.

॥ ಹು ಕುಂ. ॥

ಕಂಪ್ಲಿ ಗ್ರಾಮದ ಬ್ರಾಹ್ಮಣ ಸಂಘದಪೈಕಿ ಅನೇಕರು ದಸ್ಕತುಮಾಡಿ 11-12-15 ನಲ್ಲಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟಿಗೆ ಒಂದು ಅರ್ಜೀ ಕೊಟ್ಟರು. ಅದರಲ್ಲಿ ಕಂಪ್ಲಿ ಗ್ರಾಮದ ಲಿಂಗಾಯತರು ಬಸವ ಪುರಾಣ ಹೇಳದಹಾಗೂ ಮತ್ತೂ ಸದರಿ ಗ್ರಂಥವನ್ನು ಮೆರವಣಿಗಿ ತೊಗೊಂಡು ಹೋಗದಹಾಗೂ ಕ್ರಿಮಿನಲ್ ಪ್ರೊಶೀಜರು ಕೋಡ್ನ 144-ನೇ ಶೆಕ್ಷನ ಪ್ರಕಾರ ಹುಕುಂ ಜಾರೀ ಮಾಡಬೇಕೆಂದು ಬೇಡಿಕೊಂಡರು. ಸದರಿ ಅರ್ಜೀ ಫೈಸಲಾತೀಗಾಗಿ ಈ ಕೋರ್ಟಿನವರಿಗೆ ಮೇಲಿನ ಅಧಿಕಾರಿಗಳು ಕಳಿಸಿಕೊಟ್ಟರು.

2. ಆ ಅರ್ಜೀಯಲ್ಲಿ ಸದರಿ ಬಸವ ಪುರಾಣದ ಪದ್ಯಾರ್ಥ, ಬ್ರಾಹ್ಮಣರು ಮತ್ತೂ ಅವರು ಪೂಜಿಸುವ ದೇವರುಗಳ ಅಸಹ್ಯಕರವಾದ ದೂಷಣವನ್ನು ಸೂಚಿಸುವದರಿಂದ ಕಂಪ್ಲಿ ಬ್ರಾಹ್ಮಣರ ಮತ್ತೆ ವಾತ್ಸಲ್ಯವನ್ನು ಬಾಧಿಸುವದಲ್ಲದೆ ಅವಮಾನ ಮಾಡುವ ಉದ್ದೇಶ್ಯ ಉಂಟೆಂತಲೂ, (2) ಸದರಿ ಗ್ರಂಥ ಲಿಂಗಾಯತರು, ವಿಶ್ವಾಚಾರರು, ನೇಕಾರರು ವಗೈರಾ ಇತರ ಸೂದ್ರಾದಿಗಳು ಕಲತು ಸಭಾದಲ್ಲಿ ಓದುವಾಗ್ಯೆ, ಓದುವ ಪುರುಷನು ಬ್ರಾಹ್ಮಣರನ್ನು ತುಚ್ಛಮಾಡುವದಕ್ಕಾಗಿ ತನ್ನ ಸ್ವಂತ ವ್ಯಾಖ್ಯಾನ ಕಲ್ಪನ ಮಾಡಿದಂತಲೂ. (3) ಲಿಂಗಾಯತರು ಈ ಗ್ರಂಥವನ್ನು ಮೆರವಣಿಗಿಯಿಂದ ತೊಗೊಂಡು ಹೋಗಬೇಕೆಂದು ಏರ್ಪಾಟು ಮಾಡಿರುವದರಿಂದ ಅಲ್ಲರಿಯೂ, ಪ್ರಾಣಹಾನಿಯೂ ಆಗಬಹುದಂತಲೂ ನಮೂದು ಅದೆ.

ಇದಲ್ಲದೆ ಇಷ್ಟಕ್ಕೆ ಪೂರ್ವ ಸುಮಾರು 10 ವರುಷದ ಕೆಳಗೆ ಲಿಂಗಾಯತರು ಪೇಟಿಯಲ್ಲಿ ಬಸವಪುರಾಣ ಓದಲಿಕ್ಕೆ ಯತ್ನಿಸಿದ್ದಾಗ್ಗ ಬ್ರಾಹ್ಮಣರು ಆಕಾಲದಲ್ಲಿದ್ದ ಪೋಲೀಸು ಯಿನಸ್ಪೆಕ್ಟರು ಅಬ್ದುಲ್ ಕರೀಂ ಸಾಹೇಬರಿಗೆ ಈ ಸಂಗತಿ ಫಿರ್ಯಾದಿ ಮಾಡಿದಾಗ್ಗೆ ಸದರ ಬಸವಪುರಾಣ ಬಹಿರಂಗವಾಗಿ ಹೇಳುವದು ಯಿಲ್ಲ ಯಂತಲೂ, ಮೆರವಣಿಗೆ ಜರಗಿಸುವದು ಯಿಲ್ಲ ಯಂತಲೂ ಲಿಂಗಾಯತರು ಒಡಂಬಟ್ಟ ಹಾಗೆ ಸಹಾ ಅರ್ಜೀಯಲ್ಲಿ ನಮೂದು ಅದೆ ಈಅರ್ಜೀಸಂಗಡ ಬಸವಪುರಾಣದಲ್ಲಿ ಆಕ್ಷೇಪಣೆವುಳ್ಳ ಕೆಲವು ಭಾಗ ನಮೂದು ಮಾಡಿ ಒಂದು ಜಾಬಿತಾ ಕಳುಹಿಸಿತ್ತು ಯಿದಲ್ಲದೆ ಇನ್ನು ಕೆಲವು ಭಾಗವನ್ನು ನಮೂದುಮಾಡಿ ಮತ್ತೊಂದು ಜಾಬಿತಾ ಸಹಾ ದಾಖಲು ಮಾಡಿ ಯಿರುತ್ತಾರೆ. ಈ ಯೆರಡು ಲಿಸ್ಟುಗಳು ಎಕ್ಸಿಬಿಟ್ ಶಿ. ಶಿ. 1 ಯಂತ ಗುರ್ತುಮಾಡಿ ಯಿರುತ್ತದೆ.

3. ಫಿರ್ಯಾದಿಗಳ ಪರ 10 ಸಾಕ್ಷಿಗಳನ್ನ ವಿಚಾರಣ ಮಾಡೋಣವಾಯಿತು. ಇದರಲ್ಲಿ ನಾಲ್ಕುಮಂದಿ ಬ್ರಾಹ್ಮಣರು, ಮಿಕ್ಕಾದವರು ಬ್ರಾಹ್ಮಣೇತರರು, ಬ್ರಾಹ್ಮಣ ಸಾಕ್ಷಿಗಳು ಅರ್ಜೀ ದಾಖಲಾ ಅಂಶಗಳನ್ನು ಹೇಳಿದರು ಇವರು (1) ಡಿಸ್ಟ್ರಿಕ್ಟ

ಬೋರ್ಡು ಮೆಂಬರು, ಭೂಖಾಮಂದುಯಾದ ಆರ್. ಶ್ರೀನಿವಾಸರಾಯರು, (2) ಯಿನಾಂದಾರ್ ಹುಚ್ಚಾಚಾರ್ಯರು, (3) ಪ್ರಕೃತ ಹೊಸಪೇಟೆಯಲ್ಲಿ ಸ್ಕೂಲು ಮಾಸ್ಟರು ಆಗಿರುವ ಶಂಕರಭಟ್ಟರು ಯಿವರು ಪೂರ್ವಕ್ಕೆ ಲಿಂಗಾಯತರು ಬಸವ ಪುರಾಣ ಓದುವಾಗ್ಯೂ ಮೆರವಣಿಗಿ ನಡಿಸುವ ಪ್ರಯತ್ನಪಟ್ಟಾಗ್ಯೂ ಕಂಪ್ಲಿಯಲ್ಲಿ ಯೂನಿಯರ್ ಗುಮಾಸ್ತರಾಗಿದ್ದರು. (4) ಕಣೋಜಿ ಬ್ರಾಹ್ಮಣ ರಾಮಶಿಂಗು ಮೆರವಣಿಗಿ ನಡಿಸುವದಕ್ಕೆ ಬ್ರಾಹ್ಮಣರು ಆಕ್ಷೇಪಿಸಿದರಿಂದ ತಾನುಸಹಾ ಆಕ್ಷೇಪಣ ಮಾಡಿ ಧಾಂಗೆ ಹೇಳಿದನು. ಬ್ರಾಹ್ಮಣೇತರ ಸಾಕ್ಷಿಗಳು ಯಿಕೆಳಗೆ ನಮೂದಿಶಿರುವ ಕುಲದವರು.

5-ನೇ	ಸಾಕ್ಷಿ	ರಜಪುಟ್.	6-ನೇ	ಸಾಕ್ಷಿ	ಕ್ಷತ್ರಿಯ.
7-ನೇ	,,	ವೈಶ್ಯ.	8-ನೇ	,,	ವೈಶ್ಯ.
9-ನೇ	,,	ದೇವಾಂಗ.	10-ನೇ	,,	ಕುರುಬ.

ಮೆರವಣಿಗಿಗೆ ಬ್ರಾಹ್ಮಣರು ಆಕ್ಷೇಪಿಶಿದರಿಂದ ತಾವು ಸಹಾ ಆಪೇಕ್ಷಿಪಿಶಿದರೆಂತಲೂ, ಬ್ರಾಹ್ಮಣರಿಗೆ ಆಕ್ಷೇಪಣಿ ಯಲ್ಲದಿದ್ದಗೆ ತಮ್ಮಗೂ ಯಿಲ್ಲವೆಂತಲೂ 5-6-7-8 ಸಾಕ್ಷಿಗಳು ನುಡದರು. ಷುಮಾರು 30 ವರುಷದ ಕೆಳಗೆ ದೇವಾಂಗದವರ ಮೆರವಣಿಯನ್ನು ಲಿಂಗಾಯತರು ಆಕ್ಷೇಪಿಶಿದರಿಂದ ತಾನು ಯಿ ಮೆರವಣಿಗಿ ಆಕ್ಷೇಪಿಶಿದಂತೆ 9-ನೇ ಸಾಕ್ಷಿ ನುಡಿದನು. ಅನ್ಯಮತ ದ್ವೇಷ ಯಿಲ್ಲದ 10-ನೇ ಸಾಕ್ಷಿ ಯೆಂಥಾ ಮೆರವಣಿಗೆಗೂ ತನ್ನ ಆಕ್ಷೇಪಣೆ ಯಿಲ್ಲದಂತೆ ನುಡದನು.

4. ಎಕ್ಸಿಬಿಟ್ ಶಿ॥ ಶಿ/1 ವಳಗೆ ನಮೂದಿಶಿರುವ ಪ್ರಮೇಯಗಳು ಅರ್ಜಿದಾರರು ಭಾವಿಸಿದಂತೆ ಅಷ್ಟು ಕೋಪೋದ್ರೇಕವಾಗಿಲ್ಲವೆಂತಲೂ, ಶಿವಾಚಾರ ಮತ್ತೂ ಲಿಂಗಾಯತ ಸಿದ್ಧಾಂತಗಳ ವಿಷಯಕವಾಗಿ ಬ್ರಾಹ್ಮಣರು ಲಿಖಿಶಿರುವ ದೂಷಣಗಳಿಗೆ ಯಿ ಪ್ರಮೇಯಗಳು ಸರಿಹೋಲಿಶಿ ನೋಡಬಹುದೆಂತಲೂ. (2) ಬಸವ ಪುರಾಣ ಮೆರವಣಿಗಗಳು ಯಿನ್ನು ಅನೇಕ ಯಿತರ ಸ್ಥಳಗಳಲ್ಲಿ ಬಹಿರಂಗವಾಗ ಯಾವ ವಿಧವಾದ ತೊಂದರಿ ಯಿಲ್ಲದೆ ನಡದು ಯಿರುವದರಿಂದ ಯಿಗ್ಯೂ ಸಹಾ ಯಾವ ವಿಧವಾದ ತೊಂದರಿ ಪ್ರಾಯಶಃ ಯಿರಲಾರದೆಂತಲೂ ಕೌಂಟರು ಅರ್ಜಿದಾರರು ಸಾಕ್ಷತ್ವ ತಂದು ಯಿಟ್ಟಿತ್ತಾರ.

5 ಆಕ್ಷೇಪಣಕರವಾದ ಪ್ರಮೇಯಗಳೆಂಬ ಪ್ರಥಮ ಅಂಶದಲ್ಲಿ ಕೌಂಟರು ಅರ್ಜಿದಾರರು ವಿಶದೀಕರಿಶಿದ ವಾದವನ್ನು ಅನುಸರಿಸಲಿಕ್ಕೆ ಆಗುವದಿಲ್ಲ. ಕೌಂಟರು ಅರ್ಜಿದಾರರ ವಕೀಲರು ಸಹಾ ವ್ಯಾಖ್ಯಾನಿಶಿದರೂ, ಆ ಪ್ರಮೇಯಗಳು ಬ್ರಾಹ್ಮಣರಿಗೆ ನಿರಾಕ್ಷೇಪಣಿಯಾಗಿ ಕೋಪೋದ್ರೇಕ ಪುಂಟುಮಾಡುತ್ತದೆ. ಆದರೆ ಬಸವ ಪುರಾಣ ಕ್ರೀಸ್ತು ಶಕ 14-ನೇ ಶತಾಬ್ಧದಲ್ಲಿ ಲಿಂಗಾಯತರು ಯಿತರ ಮತಗಳೆಂಫಲೆ